ಕಲ್ಯಾಣ ಕಿರಣ

ಸಂಪುಟ : ೧೩
ಸಂಚಿಕೆ : ೧೦
ಫೆಬ್ರವರಿ ೧೯೮೫
ಬಸವ ಶಕೆ : ೮೪೫
ಬೆಲೆ : ೧-೫೦



ಕಲ್ಯಾಣ ಕಿರಣ

ಮಾಸ ಪತ್ರಿಕೆ

ಫೆಬ್ರವರಿ ೧೯೮೫ | ವಾರ್ಷಿಕ ಚಂದಾ ೨೦ ರೂ. | ಸಂಪುಟ : ೧೩
ಬಸವ ಶಕೆ : ೮೪೫ | ಆಜೀವ ಸದಸ್ಯರು ೨೦೦ ರೂ. | ಸಂಚಿಕೆ : ೧೦
ಬಿಡಿ ಪತ್ರಿಕೆ : ೨ ರೂ.

ಕಿರಣಗನ್ನಡಿ

೧. ನುಡಿ ನೈವೇದ್ಯ ೧
೨. ಮಾತೃ ಹರಕೆ ೨
೩. ವಚನ ನವನೀತ ೭
೪. ಸಮಸ್ಯೆ – ಸಮಾಧಾನ ೯
೫. ಚಿಂತನೆ – ಮಂಥನ ೧೨
೬. ಶರಣ ಧರ್ಮದ ಹಿತಶತ್ರುಗಳು ೧೫
೭. ಸ್ಫುರಣ – ಕಿರಣ ೧೬
೮. ಮಂಥನ ೧೭
೯. ವಿರಹ - ಉದಾತ್ತೀಕರಣ ೧೯
೧೦. ಧರ್ಮ ಸೂಕ್ಷ್ಮ ೨೪
೧೧. ಗುರು ಮಹಿಮೆ ೩೬
೧೨. ಆಜೀವ ಸದಸ್ಯರುಗಳು ೩೭
೧೩. ಮಾತೃ ಹೃದಯಕೆ ಮಣಿದು ೪೦
೧೪. ಬಸವ ನಾಡಿನಲ್ಲಿ ವಿಶ್ವಧರ್ಮ ಪ್ರವಚನ ೪೧
೧೫. ಗುಲ್ಬರ್ಗಾ ನಗರದಲ್ಲಿ ಆದ ಮಹಾ ಪೋಷಕರು ೪೩
೧೬. ಬೀದರದಲ್ಲಿ ವಿಶ್ವಧರ್ಮ ಪ್ರವಚನ ೪೫
೧೭. ಗೋಕಾಕ್ ನಗರದಲ್ಲಿ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ ೪೬
೧೮. ಪುಸ್ತಕ ಪರಿಚಯ - ಕಲ್ಯಾಣ ಕ್ರಾಂತಿ ೪೭
೧೯. ಗುಲಬರ್ಗಾದಲ್ಲಿ ಮಾತಾಜಿಯವರಿಂದ ಬಸವ ದಳದ ಉದ್ಘಾಟನೆ ೫೦
೨೦. ಮಾತು ಜ್ಯೋತಿರ್ಲಿಂಗ ೫೨
೨೧. ಮಾತೆಯ ಚರಣಕೆ ಹೃದಯದ ಕಾಣಿಕೆ ೫೩
೨೨. ಜೀವನದಲ್ಲಿ ಇಣುಕಿದಾಗ ೫೪
೨೩. ಜಾಹಿರಾತುಗಳಿಗೆ ಸಂಪರ್ಕಿಸಿರಿ ೫೫
೨೪. "ಧರ್ಮಸೂಕ್ಷ್ಮ" ಲೇಖಕರಿಗೆ ಶುಭ ಹಾರೈಕೆಗಳು ೫೬

ಕಲ್ಯಾಣ ಕಿರಣ

ಯೋಗಿರಾಜನಿಗೆ – ನುಡಿ ನೈವೇದ್ಯ

ಗುರು-ಶಿವನೆ ನಾ ನಿನ್ನ ಅನುದಿನವು ನೆನೆಯುವೆನು
ಪೊರೆಯಯ್ಯ ಮಹಯೋಗಿ ಮಂತ್ರಪುರುಷ ॥ ಪಲ್ಲವಿ ॥
ಅಂತರಾತ್ಮದಿ ದಿಟ್ಟಿ ಅನವರತ ನೀನಿಟ್ಟು
ಅನಿಮಿಷ ನೇತ್ರನು ಆಗಿ ಮೆರೆದೆ.
ಯೋಗಿಗಳ ಸ್ಫೂರ್ತಿಯು ಆಗಿ ನೀನಿಹೆಯಯ್ಯ ! ಈ
ಜಗದ ಪ್ರಪ್ರಥಮ **ಯೋಗಿರಾಜ** ॥ ೧ ॥
ಧಿಮಿತಕಿಟ ಧಿಮಿತಕಿಟ ಹೆಜ್ಜೆಯಂ ಹಾಕುತ್ತ
ತಾಳ ಮದ್ದಳೆ ಸಹಿತ ನೀನು ಕುಣಿದೆ
ನಾಟ್ಯ ಶಾಸ್ತ್ರವ ಜಗಕೆ ನೀನಿತ್ತು ಮೆರೆದೆ
ನಟರಾಜ ನೀನೆಂಬ ಖ್ಯಾತಿ ಪಡೆದೆ ॥ ೨ ॥
ಗಾನಗಂಗೆಯ ಹರಿಸಿ **ನಾದಯೋಗಿಯು** ಆದೆ
ಕಾಮನಂ ನೀನುರುಹಿ ವಿರಾಗಿಯಾದೆ ।
ಭಸಿತ-ರುದ್ರಾಕ್ಷಿಗಳೆ ಆಭರಣವಾಗಿರಲು
ಸರಳ ವ್ರತ ಧರಿಸಿರುವ **ಮಹತ್ಯಾಗಿಯಾದೆ** ॥ ೩ ॥
ಒಲಿದು ಬಂದವರಿಂಗೆ ಅಭಯ ಹಸ್ತವ ನೀಡಿ
ಮೂಲಿಗನು ನೀನಾದೆ ಶಿವಭಕ್ತಿ ಪಥಕೆ
ನೀನು ತಪಗೈಯ್ದ ದಿನ **ಶಿವರಾತ್ರಿಯಾಯಿತ್ತು**
ಬನ್ನಗಳ ತಾ ತೊಡೆದು ಭವಬಾಧೆ ಹರಿಯಿತ್ತು ॥ ೪ ॥

— ಜಗದ್ಗುರು ಮಾತೆ ಮಹಾದೇವಿ



ಕಾಯಕ ಸಿದ್ಧಾಂತ

"ಬಸವೇಶ್ವರ ಮತ್ತು ಅವರ ಧಾರ್ಮಿಕ ವಿಚಾರವಾದ" ಎಂಬ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್‌ದಲ್ಲಿ ಡಾ॥ ಕೆ. ವೆಂಕಟರೆಡ್ಡಿ ಅವರ ಒಂದು ಲೇಖನ ಪ್ರಕಟವಾದುದಾಗಿಯೂ ಅವರು ಸಮರ್ಪಕವಾಗಿ ಬಸವಣ್ಣನವರ ವಿಚಾರಧಾರೆಯನ್ನು ಮಂಡಿಸಿದುದಾಗಿಯೂ ತಿಳಿಯಿತು. ಆದರೆ ಅದಕ್ಕೆ ಉತ್ತರವಾಗಿ ಎಸ್. ಡಿ. ತಿರುಮಲರಾವ ಎಂಬ ಅನಂತಪುರದವರು ಓದುಗರ ಓಲೆಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಿ ಬಸವಣ್ಣನವರ "ಕಾಯಕ" ವ್ಯವಸ್ಥೆಯನ್ನೇ ಪ್ರತಿಪಾದಿಸಿಲ್ಲ, ಅವರ ವಚನಗಳಲ್ಲಿ ಅದೆಲ್ಲಿಯೂ ಬಂದಿಲ್ಲ ಎಂದು ವಾದಿಸಿದ್ದಾರೆ. ಈ ಸಂಪೂರ್ಣ ವಾದ ವಿವಾದಗಳು ಪ್ರವಾಸದಲ್ಲಿದ್ದ ನನ್ನ ಗಮನಕ್ಕೆ ಬರಲಿಲ್ಲ. ಕೆಲವಾರು ತುಣುಕುಗಳು ಕಣ್ಣಿಗೆ ಬಿದ್ದವು. ಈ ಬಗ್ಗೆ ಬರೆಯಬೇಕೆನ್ನಿಸಿತು. ಏಕೆಂದರೆ ಈ ಬಗೆಯ ಸಂದೇಹವಿರುವ ಹಲವಾರು ಜನರು ಇದ್ದಿರಬಹುದು.

"ಕಾಯಕವೇ ಕೈಲಾಸ" ಎಂಬ ಪದಪುಂಜ ಬಸವಣ್ಣನವರ ಈಗ ಲಭ್ಯವಿರುವ ವಚನಗಳಲ್ಲಿ ಎಲ್ಲಿಯೂ ಇಲ್ಲ. ಆದರೂ ಬಸವಣ್ಣನವರ ಹೆಸರಿನೊಡನೆ ಅವಿನಾಭಾವ ಸಂಬಂಧದಿಂದ ಪ್ರಚಲಿತವಿರುವ ಕೆಲವು ಮಾತುಗಳು ಇವು :

* ಕಾಯಕವೇ ಕೈಲಾಸ.
* ದಯವೇ ಧರ್ಮದ ಮೂಲ.
* ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ.
* ಆಚಾರವೇ ಸ್ವರ್ಗ, ಅನಾಚಾರವೇ ನರಕ.

ಇಂಥ ಇನ್ನೂ ಅನೇಕ ಮಾತುಗಳನ್ನು ಉಲ್ಲೇಖಿಸಬಹುದು. ಬಸವಣ್ಣನವರ ವಚನಗಳಲ್ಲಿ ಲಭ್ಯವಿಲ್ಲದಿದ್ದರೂ "ಕಾಯಕ ಸಿದ್ಧಾಂತ"ವನ್ನು "ಕಾಯಕವೇ ಕೈಲಾಸ" ಎಂಬ ಪದಪುಂಜವನ್ನು ಇತಿಹಾಸದುದ್ದಕ್ಕೂ ಬಸವಣ್ಣನವರ ತಲೆಗೆ ಕಟ್ಟಿದುದೇಕೆ ?

1) ಕಾಯಕವ ಕಲಿಸುದಕೆ ನಾಯಕನು ಬಸವಣ್ಣ.

2) ಬಸವ ಭಕ್ತಿಯ ಬೀಜ ಬಸವ ಯುಕ್ತಿಯ ತೇಜ
ಬಸವ ಕಾಯಕದ ಗುರುಬೀಜ । ಶಿವಮತಕೆ
ಬಸವ ಓಂಕಾರ ಶಿವನಾಮ ॥

ಇಲ್ಲಿ ಜನಪದ ಕವಿಗಳು ಅತ್ಯಂತ ಸ್ಪಷ್ಟವಾದ ಉಕ್ತಿಯಲ್ಲಿ "ಕಾಯಕವ ಕಲಿಸುದಕೆ ನಾಯಕನು ಬಸವಣ್ಣ" ಎಂಬುದಾಗಿಯೂ, "ಬಸವ ಕಾಯಕದ ಗುರು ಬೀಜ" ಎಂಬುದಾಗಿಯೂ ಮೇಲ್ಕಂಡ ಮಾತುಗಳಲ್ಲಿ ಹೇಳಿರುವರು.

ಇನ್ನು ಕೆಲವರು ಈ ಒಂದು ವಚನವನ್ನು ಉಲ್ಲೇಖಿಸುವರು :

ಶರಣ ನಿದ್ರೆಗೈದಡೆ ಜಪ ಕಾಣಿರೊ
ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರೊ
ಶರಣ ನಡೆದುದೆ ಪಾವನ ಕಾಣಿರೊ
ಶರಣ ನುಡಿದುದೆ ಶಿವತತ್ತ್ವ ಕಾಣಿರೊ
ಕೂಡಲ ಸಂಗನ ಶರಣನ,
ಕಾಯವೆ ಕೈಲಾಸ ಕಾಣಿರೋ. (ಬ.ಷ.ವ. 872)

ಇದರಲ್ಲಿ ಬರುವ ಕಡೆಯ ವಾಕ್ಯದಲ್ಲಿ ಇರುವ "ಕಾಯವೆ ಕೈಲಾಸ" ಅದರ ಬದಲಿಗೆ "ಕಾಯಕವೇ ಕೈಲಾಸ" ಎಂದು ಇರಬೇಕಾಗಿತ್ತು ಎಂದು ಕೆಲವರು ಊಹಿಸುವರು.

ಈ ವಚನದಲ್ಲಿ ಬಸವಣ್ಣನವರು ವ್ಯಕ್ತಿಯ ಅಂತರಂಗಿಕ ಆತ್ಮಸಿದ್ಧಿಯನ್ನು ಕುರಿತು ಹೇಳಿರುವರೇ ವಿನಾ, ಸಮಷ್ಟಿ ಸಿದ್ಧಾಂತವಾದ ಕಾಯಕ ಕುರಿತು ಅಲ್ಲ. ಶರಣನು ಮಂತ್ರಮಯನಾದಾಗ ಅವನು ನಿದ್ರೆಗೈದರೆ ಜಪ, ಜಾಗೃತನಾಗಿದ್ದರೆ ಶಿವರಾತ್ರಿ ! ಆತನ ನಡೆಯೇ ಪಾವನ, ನುಡಿದುದು ದಿವ್ಯ ತತ್ತ್ವ. ಅವನ ದೇಹವು ಆನಂದ-ಶಾಂತಿಗಳ ದಿವ್ಯಧಾಮವಾದ ಕೈಲಾಸ.

"ಕಾಯಕ" ಕುರಿತು ಬಸವಣ್ಣನವರ ವಚನಗಳಲ್ಲಿ ಪ್ರಸ್ತಾಪವಿಲ್ಲ, ನಿಜ. ಇಷ್ಟಾದರೂ ಬಸವಣ್ಣನವರು ಕಾಯಕ ಸಿದ್ಧಾಂತದ ಪ್ರತಿಪಾದಕರೆಂಬುದು ಸತ್ಯ.

1. ಬಸವಣ್ಣನವರ ಎಲ್ಲ ವಚನಗಳೂ ಲಭ್ಯವಿಲ್ಲ. "ಎರಡೆಂಭತ್ತು ಕೋಟಿ ವಚನವ ಹಾಡಿ ಹಂಬಲಿಸಿತ್ತೆನ್ನ ಮನ" ಎಂಬ ವಚನೋಕ್ತಿಯಂತೆ ಅವರು ಹಾಡಿದುದು ಬಹಳ; ಸಿಕ್ಕಿರುವುದು ಸ್ವಲ್ಪ. ಬಸವಣ್ಣನವರ ಷಟಸ್ಥಲದ ವಚನಗಳು ಮೊದಲು ಪ್ರಕಟಗೊಂಡವು. ನಂತರ ದೊರೆತವು ಹೆಚ್ಚಿನ ವಚನಗಳೆಂದು ಸೇರ್ಪಡೆಯಾದವು. ಈ ಹೆಚ್ಚಿನ ವಚನಗಳಲ್ಲಿ ಅಮೂಲ್ಯವಾದ, ಅಲಭ್ಯವಿದ್ದ ಎಷ್ಟೋ ವಿಚಾರ ದೊರೆತವು. ಇಷ್ಟಾದರೂ ಬಸವಣ್ಣನವರ ಎಲ್ಲ ವಚನ ದೊರೆತಿರುವವೆಂದು ಹೇಳಲಿಕ್ಕಾಗದು. ಕ್ರಾಂತಿಯ ಕಿಡಿಗಳಾದ ಬಸವಣ್ಣನವರ ವಚನಗಳ ಮೇಲೆ ಸಂಪ್ರದಾಯವಾದಿಗಳ ಕೆಂಗಣ್ಣು ಬಿದ್ದು ಸಾಕಷ್ಟು ಅವು ನಾಶವಾಗಿರಲಿಕ್ಕೂ ಸಾಕು.

2. ಆಯ್ದಕ್ಕಿ ಮಾರಯ್ಯನ ವಚನಗಳಲ್ಲಿ ಕೆಲವು ಮಾತುಗಳು ಹೀಗೆ ಬರುತ್ತವೆ.

ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾದರೂ ಕಾಯಕದ ಒಳಗು

ಆಯ್ದಕ್ಕಿ ಮಾರಯ್ಯನ ಹೆಸರಿನಲ್ಲಿ ಬಂದಿದ್ದರೂ, ಈ ಕೆಲವು ವಿಚಾರಗಳ, ಆಲೋಚನೆಗಳ, ಸಿದ್ಧಾಂತಗಳ **ಮೂಲಬಾಯಿ** ಬಸವಣ್ಣನವರು ಎಂಬುದನ್ನು ನಾವು ಮನಗಾಣಬೇಕು.

ಒಂದು ಬೃಹತ್ತಾದ ಮೈದಾನದಲ್ಲಿ ಹತ್ತಾರು ಧ್ವನಿವರ್ಧಕಗಳನ್ನು ಕಟ್ಟಿ ಯಾರೋ ಮೈಕಿನಲ್ಲಿ ಮಾತನಾಡುತ್ತಿದ್ದಾರೆ ಎಂದುಕೊಳ್ಳೋಣ. ಮಾತನಾಡುವವರ ಮುಖ ನಮಗೆ ಕಾಣಿಸದು. ಮೈಕಿನಲ್ಲ ಮಾತನಾಡುವವನ ಧ್ವನಿಯನ್ನು ಸೌಂಡ್‌ಬಾಕ್ಸ್‌ಗಳು ನಮಗೆ ಕೇಳಿಸುತ್ತವಷ್ಟೇ. ಸೌಂಡ್ ಬಾಕ್ಸ್‌ಗಳಿಗೆ ಮಾತನಾಡುವ ಶಕ್ತಿ ಇರದು. ಅವು ಮೈಕಿನಲ್ಲಿ ಬರುವ ಧ್ವನಿಯನ್ನು ಮಾತ್ರ ಪಡಿನುಡಿಯುತ್ತವೆ. ಹಾಗೆ ಅಂದಾದರೂ ಆಯ್ದಕ್ಕಿ ಮಾರಯ್ಯ, ಮಡಿವಾಳ ಮಾಚಯ್ಯ, ನುಲಿಯ ಚಂದಯ್ಯ ಮುಂತಾದವರು ಮಾತ್ರವಲ್ಲ ಚನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದವರು ನುಡಿದುದು ಬಸವ ವಾಣಿಯನ್ನೇ. ಬಸವಣ್ಣನವರ ಸೈದ್ಧಾಂತಿಕ ಸೂತ್ರಗಳನ್ನು ಅರಿಯಬೇಕಾದರೆ ಕೇವಲ ಅವರ ವಚನಗಳನ್ನಷ್ಟೇ ನೋಡಬೇಕಾಗಿಲ್ಲ. ಸಮಕಾಲೀನ ಶರಣರ ವಚನಗಳೆಲ್ಲ ಧ್ವನಿಸುವುದು ಆ ಸಿದ್ಧಾಂತವನ್ನೇ. ಹೇಗೆ ಮಾರ್ಕ್, ಮ್ಯಾಥ್ಯೂ, ಲ್ಯೂಕ್ ಮುಂತಾದ ಸುವಾರ್ತಾ ಪ್ರಸಾರಕರು ಏಸುವಿನ ವಾಣಿಯನ್ನು ಸಾರಿದರೋ ಈ ಶರಣಗಣಂಗಳು ಸಾರಿದುದು ಬಸವ ವಾಣಿಯನ್ನೇ !

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಓದುಗರ ವೇದಿಕೆಯಲ್ಲಿ ಎ. ಡಿ. ತಿರುಮಲ ರಾವ ಅವರು ಹೇಳುತ್ತಾರೆ, "ಸಾಮಾನ್ಯವಾಗಿ ಭಕ್ತಿಪಂಥದ ಸಂತರು ಕಾಯಕವನ್ನು ನಿಷ್ಠೆಯಿಂದ ಮಾಡುತ್ತಾರೆ. ತಾವು ಮಾಡುವ ದುಡಿತವೆಲ್ಲ ದೇವರ ಪೂಜೆ ಎಂಬುದಾಗಿ ಭಾವಿಸುತ್ತಾರೆ. ಅದು ಬಸವಣ್ಣನವರ ವಿಶೇಷವೇನಲ್ಲ; ಮತ್ತು ಬಸವಣ್ಣನವರು ವೈಯಕ್ತಿಕವಾಗಿ ಕಾಯಕನಿಷ್ಠೆ ತೋರಿರಬಹುದು. ಆದರೆ ಮಾರ್ಕ್ಸ್‌ನಂತೆ ಒಂದು ಸಿದ್ಧಾಂತವನ್ನು ಪ್ರತಿಪಾದಿಸಲಿಲ್ಲ" ಎಂಬುದಾಗಿ.

ಬಸವಣ್ಣನವರು ವೈಯಕ್ತಿಕ ಕಾಯಕ ಮಾಡಿದುದು ಮಾತ್ರವಲ್ಲ, ಅದನ್ನೊಂದು ಸಿದ್ಧಾಂತವಾಗಿ ರೂಪಿಸಿ, ಜನರಿಗೆ ತರಬೇತಿ ನೀಡಿದರು. ಅದಕ್ಕಾಗಿಯೇ ಜನಪದ ಕವಿಗಳು,

ಕಾಯಕವ **ಕಲಿಸುದಕೆ** ನಾಯಕನು ಬಸವಣ್ಣ

ಎಂದು ಹಾಡಿದರು. ಕಾಯಕವು ಒಂದು ಸಿದ್ಧಾಂತವಾಗಿ (theory), ವ್ಯವಸ್ಥೆ (system) ಯಾಗಿ ಆಚರಣೆಗೆ ಬಂದಿತೆಂದೇ ಕಲ್ಯಾಣ ರಾಜ್ಯವು ಸಂವೃದ್ಧಿ, ಸಂತೃಪ್ತಿಗಳ ಆಗರವಾಯಿತು.

ಅರ್ಪಣೆಯು ಅನುಭಾವ ಹೆಪ್ಪುಗಟ್ಟಿತು ಲೋಕ
ಬೆಪ್ಪಾತು ನಾಕ ಕಾಯಕದ । ಹಾಲ್ಗೊಳೆಯ
ತೆಪ್ಪ ದಾಸೋಹ ತೇಲುತಲಿ ॥

ಕಾಯಕದ ಹಾಲಿನ ಹೊಳೆಯಲ್ಲಿ ದಾಸೋಹದ ತೆಪ್ಪ ತೇಲುವಂತಹ ಸಮಾಜದ ನಿರ್ಮಾಣವಾಯಿತು.

ಕಾಯಕ ಸಿದ್ಧಾಂತದ ಪ್ರಮುಖ ತತ್ತ್ವಗಳು ಹೀಗಿವೆ :

೧) ಪ್ರತಿಯೊಬ್ಬರೂ ದುಡಿದುಣ್ಣಬೇಕು. ಪರಾವಲಂಬಿಯಾಗಿ ಬಾಳಲು ಯಾರಿಗೂ ಹಕ್ಕು ಇಲ್ಲ.

ಅ) ವ್ರತ ತಪ್ಪಲು ಸೈರಿಸಬಹುದು
ಕಾಯಕ ತಪ್ಪಲು ಸೈರಿಸಲಾಗದು.

ಆ) ಗುರುವಾದರೂ ಕಾಯಕಧಿಂದ ಮುಕ್ತಿ
ಲಿಂಗವಾದರೂ ಕಾಯಕದಿಂದ ಮುಕ್ತಿ
ಜಂಗಮವಾದರೂ ಕಾಯಕದಿಂದ ಮುಕ್ತಿ.

೨) ಮಾಡುವ ಕಾಯಕವು ಪರಿಶುದ್ಧವಾಗಿರಬೇಕು.

ಅ) ಕಾಯಕವೆಂದು ದಾಯಗಾರಿಕೆಯಲ್ಲಿ ತಂದು
ದಾಸೋಹ ಮಾಡಬಹುದೆ ?

ಆ) ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ.
ಸತ್ಯಶುದ್ಧವಿಲ್ಲದುದು ಕಾಯಕವಲ್ಲ.

೩) ಕಾಯಕದಲ್ಲಿ ನಿರತನಾದಾಗ ಏಕಾಗ್ರಚಿತ್ತತೆಯಿಂದ ನಿಷ್ಠೆಯಿಂದ ಕೂಡಿರಬೇಕು :

ಕಾಯಕದಲ್ಲಿ ನಿರತನಾದಡೆ ಗುರುದರ್ಶನವನ್ನಾದರೂ ಮರೆಯಬೇಕು.
ಕಾಯಕದಲ್ಲಿ ನಿರತನಾದಡೆ ಲಿಂಗಪೂಜೆಯನ್ನಾದರೂ ಮರೆಯಬೇಕು.
ಕಾಯಕದಲ್ಲಿ ನಿರತನಾದಡೆ ಜಂಗಮ ಮುಂದಿದ್ದರೂ ಹಂಗು ಹರಿಯಬೇಕು.

ಕಾಯಕದಲ್ಲಿ ಗುರುವೆಂಬ ದಾಕ್ಷಿಣ್ಯವಿಲ್ಲ ; ಸಮಾಜವೆಂಬ ಹಂಗಿಲ್ಲ, ಪೂಜೆಯ ವ್ರತ ತಪ್ಪಿತೆಂಬ ಆತಂಕವಿಲ್ಲ. ಆತ್ಮಶ್ರೀ ಅಭಿವೃದ್ಧಿಯ ಸಾಧನವಾದ ಪೂಜೆ ಮಹತ್ವಪೂರ್ಣವೇ ಆದರೂ, ಸಮಾಜ ಶ್ರೀಯ ಅಭಿವೃದ್ಧಿಯ ಸಾಧನವಾದ ಕಾಯಕ ಇನ್ನೂ ಮಹತ್ವಪೂರ್ಣ.

೪) ಮಾಡಿದ ಕಾಯಕಕ್ಕೆ ಹೆಚ್ಚಿನ ಲಾಭ ಅಥವಾ ಪ್ರತಿಫಲ ಬಯಸಬಾರದು. ಸಲ್ಲಬೇಕಾದುದಷ್ಟನ್ನೇ ಪಡೆಯಬೇಕು. ಹಾಗದ ಕಾಯಕವ ಮಾಡಿ ಹಣವಡ್ಡವ ತಾ ಎನ್ನ ಕೂಡದು.

೫) ಕಾಯಕ ಮಾಡಿ ಪಡೆಯದೆಯೂ ಇರಬಾರದು. ಸೂಕ್ತ ಪ್ರತಿಫಲ ಪಡೆಯಬೇಕು.

೬) ಕಾಯಕದಿಂದ ಆರ್ಜಿಸಿದುದನ್ನು ಜೀವನಾವಶ್ಯಕತೆಗಳ ಪೂರೈಕೆಗೆ ಬಳಸಿಕೊಂಡು, ದಾಸೋಹದ ಮುಖಾಂತರ ಸಮಾಜಕ್ಕೆ ಸಲ್ಲಿಸಬೇಕು.

೭) ಪರಿಶುದ್ಧ ಕಾಯಕ ಜೀವಿ ಅಂದಂದಿನ ಸೊಮ್ಮು ಅಂದಂದೇ ದುಡಿದುಣ್ಣಬೇಕು. ನಾಳೆಗಿರಲಿ, ನಂತರದವರಿಗಿರಲಿ ಎಂದು ಸಂಗ್ರಹಿಸಬಾರದು.

ಹೊನ್ನಿನೊಳಗೊಂದೊರೆಯ ವಸ್ತ್ರದೊಳಗೊಂದೆಳೆಯ
ಅನ್ನದೊಳಗೊಂದಗುಳ ಇಂದಿಂಗೆ ನಾಳಿಂಗೆ
ಬೇಕೆಂದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ.

೮) ಕಾಯಕದಲ್ಲಿ ಮೇಲು-ಕೀಳಿಲ್ಲ.

ಆರಂಭವೇ ಆಗಲಿ, ವ್ಯವಹಾರವೇ ಆಗಲಿ, ಪರಸೇವೆಯೇ ಆಗಲಿ, ಅದು ಉಪಜೀವನಕ್ಕೆ ಸಹಕಾರಿ; ಸಮಾಜದ ಸಂರಕ್ಷಣೆಗೆ ಪೋಷಕ ಶಕ್ತಿ. ಮನುಷ್ಯ ಯಾವ ಕಾಯಕವನ್ನೇ ಹಿಡಿಯಲಿ, ಅದರ ಗಳಿಕೆಯನ್ನು ಹೇಗೆ ಬಳಸುತ್ತಾನೆಂಬುದು ಮುಖ್ಯ.

ನಾನು ಆರಂಭವ ಮಾಡುವೆನಯ್ಯ ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು.

೯) ಪೂಜೆ-ಆಧ್ಯಾತ್ಮ ಸಾಧನೆಗಳಷ್ಟೇ ದೇವರನ್ನೊಲಿಸುವ ಸಾಧನಗಳಲ್ಲ, ಸತ್ಯ ಶುದ್ಧ ಕಾಯಕವೂ ದೇವರನ್ನೊಲಿಸುವ ಸಾಧನ.


೧೦) "ಕಾಯಕವೇ ಕೈಲಾಸ" ಇದರರ್ಥ ಮಾಡುವ ಕಾಯಕದಲ್ಲಿ ಏಕಾಗ್ರತೆ, ನಿಷ್ಠೆ, ಆನಂದ ಇರಬೇಕು. ಉತ್ತಮ ಕಾಯಕವನ್ನು ಮರ್ತ್ಯದಲ್ಲಿ ಮಾಡಿ, ಸತ್ತನಂತರ ಕೈಲಾಸ ಪಡೆಯಬೇಕೆಂಬುದು ಈ ಉಕ್ತಿಯ ಮಥಿತಾರ್ಥವಲ್ಲ. ಮಾಡುವ ಕಾಯಕದಲ್ಲಿಯೇ ಕೈಲಾಸದ ಸಂತೃಪ್ತಿ, ಆನಂದಗಳನ್ನು ಅನುಭವಿಸಬೇಕು.

ಹೀಗೆ ಬಸವಣ್ಣನವರ ಕಾಯಕ ತತ್ತ್ವ ಕೇವಲ ವೈಯಕ್ತಿಕ ಆಚರಣೆಯಲ್ಲ, ಸಾಮೂಹಿಕ ಸಿದ್ಧಾಂತ, ಸಮಾಜವನ್ನು ಕಟ್ಟುವ ಸೂತ್ರ. ಅದನ್ನು ಆಧುನಿಕ ದೃಷ್ಟಿಕೋನದಿಂದ ಅಭ್ಯಸಿಸುವುದು ಅವಶ್ಯಕವಿದೆ. ಆ ದಿಶೆಯಲ್ಲಿ ಸಂಶೋಧಕ ಬುದ್ಧಿಯಿಂದ ವಿದ್ಯಾವಂತರು ಅಧ್ಯಯನ ಕೈಗೊಳ್ಳುವರೆಂದು ಆಶಿಸುವೆವು.

– ಜಗದ್ಗುರು ಮಾತೆ ಮಹಾದೇವಿ

● ಸಜ್ಜನರ ಸಹವಾಸವು ಶ್ರೇಷ್ಠವಾದುದು. ಅದು ಮನಸ್ಸಿನ ಬೇಜಾರವನ್ನು ಹೋಗಲಾಡಿಸುವುದು. ಸತ್ಯಗುಣ ಕಲಿಸುವುದು. ಅಪಾರ ಮರ್ಯಾದೆ ಗಳಿಸಿಕೊಡುವುದು. ಪಾಪವನ್ನು ಪುಣ್ಯವನ್ನಾಗಿ ಮಾರ್ಪಡಿಸುವುದು. ಮನಸ್ಸಿಗೆ ಆಹ್ಲಾದ ಉಂಟು ಮಾಡುವುದು. ಕೀರ್ತಿಯನ್ನು ಎಲ್ಲೆಡೆ ಹರಡುವುದು. ಸಜ್ಜನರ ಸಹವಾಸದಿಂದ ಸಾಧಿಸದೆ ಇದ್ದುದು ಯಾವುದು ?

— ನೀತಿಶತಕ



ದೇಹವೆಂಬ ಅರಮನೆಯಲ್ಲಿ ಮಹಾಲಿಂಗವೆಂಬರಸು
ಮನವೆಂಬ ಪೀಠದ ಮೇಲೆ ಮೂರ್ತಿಗೊಂಡು
ಅಂತಃಕರಣಗಳೆಂಬ ಪರಿಚಾರಕರುಗಳ ಕೈಯಿಂದ
ಲಿಂಗ ಪಂಚೇಂದ್ರಿಯಗಳೆಂಬ ಪರಿಯಣದಲ್ಲಿ
ಶಬ್ದ ಸ್ಪರ್ಶ ರೂಪ ರಸ ಗಂಧಂಗಳೆಂಬ ಪದಾರ್ಥಗಳನು
ಎಡೆಮಾಡಿಸಿಕೊಂಡು ಸವಿಸುತ್ತಿರಲು
ಆನಂದವೇ ಮೂರ್ತಿಯಾಗಿದ್ದ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು.

ಉರಿಲಿಂಗಪೆದ್ದಿ : ೨೭೯

ದೇವನನ್ನು ಪೂಜಿಸಿ, ಸ್ತುತಿಸಿ, ಧ್ಯಾನಿಸಿ ಆ ಭಾವಗಳೆಲ್ಲ ಅಳಿಸುತ್ತ ಹೋದಂತೆ ಶರಣನು ಲಿಂಗದೇಹಿಯಾಗುವನು, ಶಿವಭಾವಿಯಾಗುವನು.. ಶರಣ ದರ್ಮದಲ್ಲಿ ಶಿವೋಹಂ ಭಾವಕ್ಕೆ ಎಡೆಯಿಲ್ಲ, ಶಿವಭಾವಕ್ಕೆ ಮಾತ್ರ ಎಡೆಯಿದೆ.' "ಶಿವನೇ ನಾನು ; ನಾನೇ ಶಿವ" ಎಂಬ ಭಾವ ಶರಣನಲ್ಲಿ ಎಂದೂ ಬರದು. ಶಿವನು (ಅಂದರೆ ಪರಮಾತ್ಮನು) ನನ್ನ ಮೂಲಕ ಉಣ್ಣುತ್ತಿದ್ದಾನೆ ; ಉಸಿರಾಡುತ್ತಿದ್ದಾನೆ. ನಾನು ಅವನಿಗಾಗಿ ಉಣ್ಣುತ್ತಿದ್ದೇನೆ, ಅವನಿಗಾಗಿ ಉಡುತ್ತಿದ್ದೇನೆ ಎಂಬ ಆನಂದಭಾವ ಶರಣನ ಒಂದು ವಿಲಕ್ಷಣ ಅನುಭೂತಿ.

ಸಾಧಕಾವಸ್ಥೆಯಲ್ಲಿರುವಾಗ ಒಂದು ಬಗೆಯ ಆತಂಕ, ಉದ್ವಿಗ್ನತೆ ಇರುತ್ತದೆ. "ನಾನೆಲ್ಲಿ ತಪ್ಪುತ್ತಿದ್ದೇನೋ ? ಘಮಘಮಿಸುವ ಪಕ್ವಾನ್ನವನ್ನು ಮೂಸಿ ಬಿಟ್ಟೆ, ತಕ್ಷಣ ಬಾಯಿಯಲ್ಲಿ ನೀರಾಡಿತು. ಮನಸ್ಸು ಆಸೆ ಪಟ್ಟಿತು. ಎಂತಹ ತಪ್ಪಿತಸ್ಥನಾದೆ ? ಮೂಗು, ನಾಲಿಗೆ, ಮನಗಳು ಎಂಜಲಿಸಿದ ಪದಾರ್ಥಗಳನ್ನು ದೇವನಿಗೆ ನೈವೇದ್ಯ ಮಾಡುವಂತೆ ಆಯಿತಲ್ಲ" ಎಂಬ ಹಳಹಳಿ ಇರುತ್ತದೆ. ಬರುಬರುತ್ತ ಮನಸ್ಸು-ಬುದ್ಧಿಗಳು ಪಕ್ವಗೊಳ್ಳುತ್ತ ಬರುತ್ತವೆ. ಒಂದು ಬಗೆಯ ಸಹಜಸ್ಥಿತಿ ಅಳವಡುತ್ತದೆ. ಮಗುವು ತೊಟ್ಟಿಲಲ್ಲಿ ಮಲಗಿ ತನ್ನ ಕೈಕಾಲು ಆಡಿಸುತ್ತ ಯಾವುದೋ ಒಂದು ಬಗೆಯ ಗುಂಜಾರವದಲ್ಲಿ ತಲ್ಲೀನವಾಗಿರುವಂತೆ ಶರಣನ ಮನಸ್ಸೂ

ಆನಂದಭಾವದಲ್ಲಿ ಲೀನವಾಗಿರುತ್ತದೆ. ಪರಮಾತ್ಮನ ನೆನಹಿನ ತೊಟ್ಟಿಲಲ್ಲಿ ಮಲಗಿ, ಮಂತ್ರನಾದದ ಗುಂಗಾನ ಮಾಡುತ್ತ ತನ್ನಲ್ಲಿ ತಾನೇ ಆನಂದಿಸುತ್ತದೆ. ಹೊರಗಿನ ಕ್ಷೋಭೆ, ಅನ್ಯ ಚಿಂತೆಗಳು ತಾಕವು-ಕಂಗೆಡಿಸವು.

ತನ್ನ ಬದುಕಿನಲ್ಲಿ ಎಲ್ಲವನ್ನೂ ಸಾಧಿಸಿ ಆಗಿರುತ್ತದೆ. ಲೀಲಾಮಯ ಭಕ್ತಿಯನ್ನು ಮತ್ತೂ ಶರಣನು ಮುಂದುವರಿಸುತ್ತಾನೆ. ಪರಮಾತ್ಮನೆಂಬ ಅರಸು ಈ ದೇಹವೆಂಬ ಮನೆಯಲ್ಲಿ ಇರುವ ಕಾರಣ ಇದನ್ನು ಚೆನ್ನಾಗಿ ಇಡಬಯಸುತ್ತಾನೆ. ನಿಷ್ಠಾವಂತಳಾದ ಸತಿಯು ಪತಿಯ ಕೋಣೆಯನ್ನು ಚೆನ್ನಾಗಿ ಅಲಂಕರಿಸಿಡುವಂತೆ ಶರಣನೂ ಈ ಕಾಯದ ಕೋಣೆಯನ್ನು ಅಲಂಕರಿಸುತ್ತಾನೆ. ಏಕೆಂದರೆ ದೇಹವೆಂಬ ಅರಮನೆಯೊಳಗೆ ಪರಮಾತ್ಮನೆಂಬ ಅರಸನು ಮನಸ್ಸು ಎಂಬ ಪೀಠದ ಮೇಲೆ ಕುಳಿತು ಅನೇಕ ಸುಖಗಳನ್ನು ಅನುಭವಿಸುವನು. ಶರಣನ ಚಿತ್ತ, ಮನ, ಬುದ್ಧಿ, ಅಹಂಕಾರ ಎಂಬ ಸೇವಕರು ಆ ಪರಮಾತ್ಮನನ್ನು ನಿಷ್ಠೆಯಿಂದ, ತಾದಾತ್ಮ್ಯ ಭಾವದಿಂದ ಉಪಚರಿಸುವರು. ಈ ಅಂತಃಕರಣಗಳೆಂಬ ಸೇವಕರು, ಮೂಗು, ನಾಲಿಗೆ, ಕಣ್ಣು, ಕಿವಿ, ಚರ್ಮಗಳೆಂಬ ತಟ್ಟೆ, ಲೋಟ, ಪಾತ್ರೆಗಳಲ್ಲಿ ಗಂಧ, ರುಚಿ, ರೂಪ, ಶಬ್ದ, ಸ್ಪರ್ಶಗಳೆಂಬ ವಿವಿಧ ಪದಾರ್ಥಗಳನ್ನು ತಂದು ನೀಡುವರು. ಇವೆಲ್ಲವೂ ಲಿಂಗಮಯವಾದ, ದೈವೀಕರಣವಾದ ಪದಾರ್ಥಗಳಾದ ಕಾರಣ, ಪರಮಾತ್ಮನು ಆನಂದ ಭಾವದಿಂದ ಅವನ್ನು ಸವಿಯುವನು. ಹೀಗಾಗಿ ಶರಣನ ನೋಟ, ನುಡಿ, ನಡೆ ಎಲ್ಲವೂ ದೈವೀಭಾವದಿಂದ ಕೂಡಿರುವವು. ಮಾನವ ದೇಹದ ಮೇಲೆ ದಬ್ಬಾಳಿಕೆ ನಡೆಸಿ, ಆಕ್ರಮಣ ಮಾಡಿ, ದೆವ್ವವು ಕೆಲಸ ಮಾಡಿ ಅನಾಹುತ ಮಾಡುವಂತೆ, ದೇವನು ಭಕ್ತನ ಕಾಯವನ್ನು ವ್ಯಾಪಿಸಿಕೊಂಡು, ಸಾತ್ವೀಕರಿಸಿ, ದೈವೀಕರಿಸಿ ಅಲ್ಲಿ ಆನಂದ, ಶಾಂತಿ, ಅನುಭೂತಿಗಳನ್ನು ತುಂಬಿ ಅದ್ಭುತ ಕಾರ್ಯವನ್ನು ಮಾಡುವನು. ಹೀಗೆ ಶರಣನು ದೇವನ ಅವಯವವಾಗಿ ಸಾಕಾರವಾಗಿ ಕೆಲಸ ಮಾಡುವನು.

– ಸದ್ಗುರು ಲಿಂಗಾನಂದ ಸ್ವಾಮಿಗಳು

ಕಲ್ಯಾಣ ಕಿರಣದ ಓದುಗರೇ ಗಮನಿಸಿರಿ

ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ನಾವು ಅಂಚೆಗೆ ಹಾಕುವುದು ಬೆಂಗಳೂರಿನ ರಾಜಾಜಿನಗರ ಅಂಚೆ ಕಛೇರಿಯಲ್ಲಿ. ಆದರೆ ಹೆಚ್ಚಿನ ವ್ಯವಹಾರವನ್ನೆಲ್ಲ ಬಸವ ಗಂಗೋತ್ರಿಗೆ ವರ್ಗಾಯಿಸಲಾಗಿದೆ. ಆದ್ದರಿಂದ ಇನ್ನು ಮುಂದೆ ಎಲ್ಲಾ ವ್ಯವಹಾರವನ್ನು ತಮ್ಮ ಚಂದಾ ಸಂಖ್ಯೆಯೊಡನೆ ಬಸವ ಗಂಗೋತ್ರಿಯ ವಿಳಾಸಕ್ಕೆ ಮಾಡಿರಿ.

ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಗಂಗೋತ್ರಿ, ಕುಂಬಳಗೋಡು - ೫೬೦೦೭೪,
ಬೆಂಗಳೂರು-ಮೈಸೂರು ಹೆದ್ದಾರಿ ೨೧ ಕಿ.ಮೀ.,
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ

ಸಮಸ್ಯೆ? ಸಮಾಧಾನ!

ಎಂ. ಜಿ. ಜಯದೇವ, ವಿಜಯಪುರ

● ಜಗತ್ತಿನಲ್ಲಿ ಅನೇಕ ಮುಖ್ಯ ವ್ಯಕ್ತಿಗಳು, ಮಹಾತ್ಮರು ಶಾಂತಿ-ಸಮಾಧಾನಗಳಿಂದ ದೇಹ ವಿಸರ್ಜನೆ ಮಾಡಿಲ್ಲ. ಬಸವಣ್ಣನವರಾದರೂ ಅಷ್ಟೇ. ಅವರಿಗೆ ಗಡಿಪಾರು ಶಿಕ್ಷೆಯಾದಾಗ ೧೨ ದಿವಸ ಕೊರಗಿ ಸತ್ತರು ಎಂದು ನಮ್ಮ ಮಗನ ಶಾಲೆಯ ಉಪಾಧ್ಯಾಯರು ಹೇಳಿದ್ದಾರೆ. ಈ ಬಗ್ಗೆ ತಿಳುವಳಿಕೆ ನೀಡಿರಿ.

— ಬೆಳಕನ್ನು ಬಯಸದ ಗೂಗೆ ಬೆಳಕನ್ನು ದ್ವೇಷಿಸುವಂತೆ ಮಹಾತ್ಮರು, ಸಮಾಜ ಸುಧಾರಕರು, ಕ್ರಾಂತಿ ಪುರುಷರು ಬಂದಾಗ ಪಟ್ಟಭದ್ರ ಹಿತಾಸಕ್ತರಾದವರು ಅವರನ್ನು ವಿರೋಧಿಸಿ ತೊಂದರೆ ಕೊಡುವರು, ದ್ವೇಷಿಸುವರು, ಕಡೆಗೆ ಪ್ರಾಣಹರಣಕ್ಕೂ ಯತ್ನಿಸುವರು. ಆದರೆ ಅದು ಮುಖ್ಯವಲ್ಲ. ಮಹಾತ್ಮರು ಆ ಸಮಸ್ಯೆಗಳನ್ನು ಹೇಗೆ ಎದುರಿಸುವರು; ಮರಣ ಬಂದಾಗ ಹೇಗೆ ಅದನ್ನು ಸ್ವಾಗತಿಸುವರು; ಸ್ವೀಕರಿಸುವರು ಎಂಬುದು ಬಲು ಮುಖ್ಯ. ಆ ದಿಶೆಯಲ್ಲಿ ಸೋಕ್ರಟೀಸ್, ಜೀಸಸ್ ಮುಂತಾದವರು ವೀರಮರಣವನ್ನಪ್ಪಿದರು. ಬಸವಣ್ಣನವರು ಯೋಗ ಸಿದ್ಧಿಯಿಂದ ಇಚ್ಛಾ ಮರಣತ್ವ ಸಾಧಿಸಿದ್ದ ಕಾರಣ, ಅವರು ತಾವು ಮರ್ತ್ಯಕ್ಕೆ ಬಂದ ಮಣಿಹ ಪೂರೈಸಿತು ಎಂದು ಸಂತೋಷದಿಂದ ದೇವನೊಡನೆ ಒಂದಾಗಬಯಸಿದರು. ನಿಮ್ಮ ಮಗನ ಶಾಲಾ ಉಪಾಧ್ಯಾಯರ ಮಾತು ಮಾನ್ಯವಲ್ಲ; ಬಸವಣ್ಣನವರ ಸ್ವಂತ ವಚನವೇ ಅವರ ಭವ್ಯ ದಿವ್ಯ ಮರಣಕ್ಕೆ ಸಾಕ್ಷಿ.

ಅಯ್ಯಾ, ಒಂದೆಯಾನು ಮಾಡಿದ . . . . . ನೀವು ಕಳಿಸಿದ ಬೆಸನು ಸಂದಿತ್ತು
ಉಘೇ! ಇನ್ನು ಕೂಡಿಕೊಳ್ಳ ಕೂಡಲ ಸಂಗಮ ದೇವಾ. (ಬ. ಷ. ವ. ೧೩೮೧)

ಚಂದ್ರಕಲಾ ಪಾಟೀಲ, ಬಿಜಾಪುರ

● ಮಾಮಿಡಿ ಪತ್ರಿಕೆಯಲ್ಲಿ ವೀರಶೈವ ಶಬ್ದವು ಲಿಂಗಧಾರಿಗಳ ಧರ್ಮಕ್ಕೆ ತುಂಬಾ ಸೂಕ್ತ ಎಂದು ಪ್ರತಿಪಾದಿಸಿದ್ದಾರೆ. ಇದಕ್ಕೆ ತಮ್ಮ ಅನಿಸಿಕೆ ಏನು ?

— ವೀರಶೈವ ಪದವು ತುಂಬಾ ಅಸ್ಪಷ್ಟ. ಲಿಂಗಾಯತ ಧರ್ಮದ ವೈಶಿಷ್ಟ್ಯ ಮತ್ತು ಸ್ವಾವಲಂಬನೆಯನ್ನು ಕಳೆದು ಶೈವದ ಪಂಥಗಳಲ್ಲೊಂದನ್ನಾಗಿ ಮಾಡುತ್ತದೆ. ಸಪ್ತಶೈವಗಳೆಂಬ ಶೈವದ ಶಾಖೆಗಳಲ್ಲಿ ಒಂದನ್ನಾಗಿ ನಿಲ್ಲಿಸುತ್ತದೆ. ವಾಸ್ತವವಾಗಿ ಹಾಗಿಲ್ಲ. ವಚನ ಸಾಹಿತ್ಯದ ಸಂವಿಧಾನವನ್ನು ಹೊಂದಿದ ಲಿಂಗಾಯತವು ಒಂದು ಸ್ವತಂತ್ರ ಧರ್ಮ. ತನ್ನದೇ ಆದ ಸಿದ್ಧಾಂತ, ಸಾಧನೆ, ದರ್ಶನ, ಸಮಾಜಶಾಸ್ತ್ರ, ನೀತಿಶಾಸ್ತ್ರಗಳನ್ನು ಅದು ಹೊಂದಿದೆ.

ಈ ಧರ್ಮದ ಅನುಯಾಯಿಯೊಡನೆ ನೀವು ವ್ಯವಹರಿಸುವಾಗ "ಲಿಂಗಧಾರಣೆ" ನೋಡಿ ವ್ಯವಹರಿಸುವಿರಷ್ಟೇ. ಈ ಧರ್ಮದ ಗುರಿ ಲಿಂಗ ... ಲಿಂಗ ಸನ್ನಿಹಿತ, ಶಿವಾಯತ ಶಿವಸ್ವಾಯತ, ಶಿವಸನ್ನಿಹಿತವಲ್ಲ. ಅಂದಾಗ ಲಿಂಗಾಯತ ಪದವು ಅತ್ಯಂತ ಸೂಕ್ತ. ಇನ್ನೂ ಪ್ರಶಸ್ತವಾದ ಪದವೆಂದರೆ ಬಸವ ಧರ್ಮ. ಬುದ್ಧನ ಹೆಸರು ಹಿಡಿದು ಬೌದ್ಧ ಧರ್ಮ ಬಂದಂತೆ, ಏಸುಕ್ರಿಸ್ತನ ಹೆಸರು ಹಿಡಿದು ಕ್ರೈಸ್ತ ಧರ್ಮ ಬಂದಂತೆ, ಬಸವಣ್ಣನವರ ಹೆಸರಿನೊಡನೆ ಸೇರಿ "ಬಸವ ಧರ್ಮ" ಚಲಾವಣೆಗೆ ಬಂದಿದ್ದರೆ ನಿಜಕ್ಕೂ ಈ ಸಮಾಜಕ್ಕೆ ಈ ಬಗೆಯ ಶೈಥಿಲ್ಯ, ತತ್ತ್ವಭ್ರಷ್ಟತೆ, ದುರಂತ ಒದಗುತ್ತಿರಲಿಲ್ಲ. ಗುರುದ್ರೋಹ ಮಾಡಬಾರದು ಎಂಬ ಪ್ರಜ್ಞೆಯಿಂದ ಲಿಂಗಧಾರಿಗಳಾದವರು ಜಾತ್ಯತೀತರು, ವಿಚಾರಶೀಲರೂ ಆಗಿ ಎಲ್ಲರನ್ನೂ ಆದರಿಸುತ್ತಿದ್ದರು.

ಚಂದ್ರಕಾಂತ ಪರಮೇಶ್ವರಪ್ಪ ಬೆಲ್ಲದ, ರಾಯಚೂರು

● ಬಸವಣ್ಣನವರಿಗೂ ಪೂರ್ವದಲ್ಲಿಯೇ ಲಿಂಗ, ಜಂಗಮ, ಗುರು ಮುಂತಾದ ಎಲ್ಲ ಪದಗಳೂ ಇದ್ದವು. ಅಂದಾಗ ಬಸವಣ್ಣನವರು ಲಿಂಗಾಯತ ಧರ್ಮದ ಆದಿಪುರುಷರು, ಪ್ರಥಮ ಗುರು ಹೇಗಾಗುವರು ?

— ಈ ವಾದ ಹೇಗೆಂದರೆ, ಚಾಮರಸನಿಗಿಂತಲೂ ಮೊದಲಿಗೆ ಪ್ರಭು, ಲಿಂಗ, ಲೀಲೆ, ಮಾಯೆ, ಎಲ್ಲ ಶಬ್ದಗಳು ಇದ್ದವು. ಚಾಮರಸನು ಹೇಗೆ ಪ್ರಭುಲಿಂಗಲೀಲೆಯ ಕರ್ತೃವಾಗ ಬಲ್ಲನು ? ಎಂದಂತೆ. ಸ್ಟೀವನ್‌ಸನ್ನನಿಗಿಂತಲೂ ಮೊದಲೇ ಕಟ್ಟಿಗೆ, ಕಬ್ಬಿಣ, ಕಲ್ಲಿದ್ದಲು ನೀರು ಎಲ್ಲಾ ಇದ್ದವು. ಅದು ಹೇಗೆ ಅವನು ಉಗಿ ಬಂಡಿಯ ನಿರ್ಮಾತೃ ಎಂದಂತೆ. ಎಲ್ಲವಕ್ಕೂ ವಿಶಿಷ್ಟ ರೂಪಕೊಟ್ಟು ಸಂಯೋಜನೆ ಮಾಡುವುದರಲ್ಲಿಯೇ ಒಬ್ಬ ವಿಜ್ಞಾನಿಯ ಹಿರಿಮೆ ಇರುವಂತೆ ಶಬ್ದಗಳಿಗೆ ಒಂದು ಅರ್ಥ – ತತ್ತ್ವಕೊಟ್ಟು ಪ್ರಗತಿಪರ ಧರ್ಮದ ಸಂವಿಧಾನ ಕೊಟ್ಟುದರಲ್ಲಿಯೇ ಬಸವಣ್ಣನ ಶ್ರೇಷ್ಠತೆ ಇರುವುದು.

ಸೂರ್ಯಕಾಂತ ಚ. ವಸ್ತ್ರದ, ಗುಲ್ಬರ್ಗಾ

● ಚಲನಚಿತ್ರ ಮಾಡಿ ನಷ್ಟ ಹೊಂದಿದ್ದರಿಂದ ಪ್ರವಚನಕ್ಕೆ ಬಂದಿದ್ದಾರೆ ಇಲ್ಲವಾದರೆ ಬರುತ್ತಿರಲಿಲ್ಲ ಎಂದು ಕೆಲವರು ದೂರುತ್ತಿದ್ದಾರೆ. ಇದಕ್ಕೆ ನಿಮ್ಮ ಉತ್ತರವೇನು ?

— ನಷ್ಟವೇ ಆಗಿರಲಿ, ಲಾಭವೇ ಆಗಿದ್ದಿರಲಿ ಅದು ನಮಗೆ ಸಂಬಂಧವಿಲ್ಲ. ಪ್ರವಚನ ನಮ್ಮ ಕಾಯಕ, ಜೀವನ, ಪ್ರಾಣ. ಅಂತೆಯೇ ಮೊದಲು ಆಮಂತ್ರಿಸಲ್ಪಟ್ಟಾಗ ಪ್ರವಚನಕ್ಕೆ ಹೋಗುತ್ತಿದ್ದವರು, ಈಗ ವರ್ಷಪೂರ್ತಿ ನಾವಾಗಿಯೇ ಹಮ್ಮಿಕೊಂಡು ಹೋಗುವುದು. ಈ ಯೋಜನೆ ೧೯೭೨ ರಲ್ಲಿ ಆರಂಭವಾಯಿತು. ಅಂದಿನಿಂದ ಈವರೆಗೆ ಅಕ್ಟೋಬರ್ ೨ಕ್ಕೆ ಆರಂಭಿಸಿ, ಜೂನ್ ೬ ರ ವರೆಗೆ ಸತತವಾಗಿ ಪ್ರವಚನ ಮಾಡುತ್ತೇವೆ. ಮಳೆಗಾಲ ಜೂನ್ ೬ಕ್ಕೆ ಆರಂಭವಾಗುವುದರಿಂದ ಬಯಲಲ್ಲಿ ಪ್ರವಚನ ಮಾಡಲು ಸಾಧ್ಯವಾಗದು ಎಂದು ಮಳೆಗಾಲದಲ್ಲಿ ನಿಲ್ಲಿಸಿಬಿಡುತ್ತೇವೆ.

ನಂದಿನಿ ರಾಜಶೇಖರ ಮೂನ್ನಿ, ಹುಬ್ಬಳ್ಳಿ

● ನಿಮ್ಮ ದೊಡ್ಡ ಉದ್ದೇಶಗಳು, ಯೋಜನೆಗಳಿಗೆ ಒಂದು ಜನ್ಮದ ಆಯುಷ್ಯ ಸಾಲದೇನೋ ಎನ್ನಿಸುತ್ತದೆ. ಅಷ್ಟೊಂದು ಬೃಹತ್ತಾಗಿವೆ ಅವು. ಹಾಗಾದರೆ ಅವುಗಳ ಸಾಧನೆಗೆ ಇನ್ನೊಂದು ಸಾರಿ ಜನ್ಮ ಪಡೆಯುವುದು ನಿಮಗೆ ಇಷ್ಟವೆ ?

— ನಾನು ಆಧ್ಯಾತ್ಮ ಜೀವನ ಪ್ರವೇಶಿಸುವಾಗ ಹೊಂದಿದ್ದ ಇಷ್ಟ ಕೇವಲ ಮೋಕ್ಷ ಸಂಪಾದನೆ, ಬಯಲ ಗಳಿಕೆ. ಇದೀಗ ಹೆಚ್ಚಾಗಿ ಇರುವುದು ಮಹಾಗುರು ಬಸವಣ್ಣನ ತತ್ತ್ವಗಳ ಪ್ರಚಾರವನ್ನು ವೈವಿಧ್ಯಮಯವಾಗಿ ಮಾಡಬೇಕು ಎನ್ನುವುದು. ಹೀಗಾಗಿ ಅಧಿಕಧಿಕ ಶಕ್ತಿ, ಪ್ರತಿಭೆಯನ್ನು ಗಳಿಸಿಕೊಂಡು ಬಹುಮುಖವಾಗಿ ಆ ಮಹಾಗುರುವಿನ ಸಂದೇಶ ಪ್ರಚಾರ ಮಾಡುವುದಾದರೆ ಎಷ್ಟು ಜನ್ಮಗಳನ್ನಾದರೂ ಎತ್ತಬಲ್ಲೆ.

ಶೋಭಾ ಕೆ ಡಿ. ಪರಮಾದಿ, ಹುಬ್ಬಳ್ಳಿ

● ನಿಮ್ಮ ಯೋಜನೆ ಬೃಹತ್ತಾಗಿವೆ. ಆದರೆ ಇದಕ್ಕೆಲ್ಲ ಆದಾಯದ ಮಾಧ್ಯಮ ಕೇವಲ ಪ್ರವಚನ. ಕೇವಲ ಪ್ರವಚನಗಳಿಂದಲೇ ದುಡ್ಡು ಸಂಗ್ರಹಿಸಿ ಕಾರ್ಯಗತಗೊಳಿಸಲು ಸಾಧ್ಯವೆ ?

— ಜನರು ಮನಸ್ಸು ಮಾಡಿದರೆ ಸಾಧ್ಯ. ಪ್ರವಚನವು ಅತ್ಯಂತ ಪವಿತ್ರ ಕಾಯಕ ಮತ್ತು ಗುರುವಿನ ಆದ್ಯ ಕರ್ತವ್ಯ. ಧರ್ಮ, ತತ್ತ್ವಗಳನ್ನು ಸಾರಿ ಜನರಲ್ಲಿ ಭಕ್ತಿ ಭಾವನೆಯನ್ನು ಉದ್ದೀಪಿಸಿದರೆ ನಮ್ಮ ಕಾಯಕವನ್ನು ನಾವು ನಿರ್ವಹಿಸಿದಂತೆ ಆಗುತ್ತದೆ. ನಮ್ಮ ಕರ್ತವ್ಯ ಮಾಡಿ, ಜನರಿಂದ ಪ್ರತಿಫಲ ಪಡೆಯುವ ಅಪೇಕ್ಷೆ ನಮ್ಮದು. ಬಹುಶಃ ಸಹೃದಯರು ಮನಸ್ಸು ಮಾಡಿದರೆ ಖಂಡಿತಾ ಆಗಬಹುದು.

ಶಿವರಾಜ ಪಾಟೀಲ, ಗುಲ್ಬರ್ಗಾ

● ಮಂತ್ರಪುರುಷ ಬಸವಣ್ಣನವರ ಹೆಸರಿನಲ್ಲಿ ಒಂದು ಕ್ಷೇತ್ರ ಬೆಳೆಯಬೇಕು. ಅಲ್ಲಿ ಸ್ಮಾರಕವು ತಲೆ ಎತ್ತಿ, ಅಂದಿನ ಕಲ್ಯಾಣದ ವೈಭವ ಪುನಃ ಮೆರೆಯಬೇಕು ಎಂಬುದು ನಮ್ಮ ಕನಸು. ಈ ಕನಸು ನಿಮ್ಮಿಂದ ಮಾತ್ರ ನನಸಾಗಬಹುದು ಎಂಬುದು ನಮ್ಮ ಅನಿಸಿಕೆ !

— ನಿಮ್ಮ ಅನಿಸಿಕೆ ನಿಜವಾಗಲೆಂದು ನಾವೂ ಬಸವಗುರುವಿನಲ್ಲಿ ಪ್ರಾರ್ಥಿಸುತ್ತೇವೆ. ಕರ್ನಾಟಕದ ರಾಜಧಾನಿಯಾದ, ಕಲ್ಯಾಣನಗರ ಎಂಬ ಅನ್ವರ್ಥಕ ನಾಮ ಹೊಂದಿರುವ ಬೆಂಗಳೂರಿನಲ್ಲಿ ೩೩ ಎಕರೆ ಜಮೀನು ತೆಗೆದುಕೊಂಡು "ಬಸವ ಗಂಗೋತ್ರಿ" ಯಲ್ಲಿ ಇಂಥದೊಂದು ಸುಕ್ಷೇತ್ರ ಬೆಳೆಸಲೆಂದೇ ನಾವೂ ಶ್ರಮಿಸುತ್ತಿದ್ದೇವೆ.

ಚಿಂತನ—ಮಂಥನ

ಸರ್ವಧರ್ಮ ಸಮಾನಭಾವ

ಮಾಮಿಡಿಯ ಪುಷ್ಯ ಸಂಚಿಕೆಯಲ್ಲಿ ಸಂಪಾದಕರು ಶ್ರೀ ಜ. ಚ. ನಿ. ಯವರ ಒಂದು ವಚನ ತೆಗೆದುಕೊಂಡು ವಿಸ್ತರಿಸಿ ಬರೆದಿದ್ದಾರೆ. ಇಡೀ ಮಾನವ ಕುಲದ ಸೌಹಾರ್ದ ಸಂಚಯದ ಸಮಗ್ರ ಸಾಕ್ಷಿಯಾಗಿ ಈ ವಚನ ಮೈತುಂಬಿ ಬಂದಿದೆ ಎಂದಿದ್ದಾರೆ. ಆ ವಚನ ಹೀಗಿದೆ :

ಮಾನವ ಸಮಾಜವೆಂಬ ಮರಕ್ಕೆ
ಮತ–ಧರ್ಮಂಗಳೆ ರೆಂಬೆಗಳು ನೋಡಾ,
ಆವ ರೆಂಬೆಯಾದಡೇನು
ಮೂಲವೊಂದೆ, ಫಲವೊಂದೆ.
ಮೇಲು- ಕೀಳೆಂಬಮರುಳರನೇನೆಂಬ
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯ ಸಿಂಹಾಸನಾಧೀಶ್ವರ!

ಇಲ್ಲಿ ಒಂದು ಹೋಲಿಕೆ ಇದೆ. "ಮಾನವ ಸಮಾಜ ಒಂದು ವೃಕ್ಷ. ಮತ-ಧರ್ಮಗಳು ರೆಂಬೆಗಳು. ಯಾವ ರೆಂಬೆಯಾದರೇನು? ಅದು ಬಂದಿರುವುದು ಒಂದು ವೃಕ್ಷದ ಬೊಡ್ಡೆಯಿಂದ; ಎಲ್ಲಾ ರೆಂಬೆಗಳೂ ತಳೆಯುವದು ಒಂದೇ ಬಗೆಯ ಫಲವನ್ನು, ಅಂದಾಗ ಮೇಲು-ಕೀಳು ಎಂಬುವವರು ಮರುಳರು." ಇದು ಈ ವಚನದ ಧ್ವನಿ.

ಕೆಲವೊಂದು ಹೋಲಿಕೆಗಳು, ವಿಚಾರಗಳು ಬರವಣಿಗೆಗೆ, ಭಾಷಣಕ್ಕೆ ಬಲು ಚೆನ್ನಾಗಿ ಕಾಣುತ್ತವೆ. ಕೇಳುತ್ತಿದ್ದಂತೆಯೇ "ಆಹಾ" ಎನ್ನಿಸುವಂತೆ ಆಗುತ್ತದೆ. ಅವುಗಳನ್ನು ಮಥನಿಸುತ್ತ ಹೋದಂತೆ ಒಳಗಿನ ಪೊಳ್ಳುತನ ವ್ಯಕ್ತವಾಗುತ್ತದೆ. ಇದೇ ಬಗೆಯ ದಾಟಿಯಲ್ಲಿ ಅನೇಕ ಮಾತುಗಳು ಬರುತ್ತವೆ. ಕೆಲವು ಹಿಂದುಗಳು ಸರ್ವಧರ್ಮ ಸಮ್ಮೇಳನಗಳನ್ನು ಏರ್ಪಡಿಸಿ, ಈ ದಾಟಿಯ ಸನಾದಿಯನ್ನು ಊದುತ್ತಿರುತ್ತಾರೆ.

ನಾವು ಅನ್ಯಮತ ವಿರೋಧಿಗಳಲ್ಲ; ಮತ್ತು ಮಾನವ ಸಮಾನತೆಯನ್ನು ಎತ್ತಿ ಹಿಡಿಯುವವರು. "ಜಗತ್ತಿನಲ್ಲಿ ಎಲ್ಲ ಮಾನವರೂ ಹುಟ್ಟಿನಿಂದ ಸಮಾನರು; ಹುಟ್ಟುವುದು ಒಂದೇ ಬಗೆಯಲ್ಲಿ. ನಂತರ ಅವರವರ ಗುಣ, ಸಾಧನೆಗಳಿಂದ ಶ್ರೇಷ್ಠರೂ–ಕನಿಷ್ಠರೂ ಆಗುತ್ತಾರೆ. ಸಂಕಲ್ಪ-ಸಾಧನೆಗಳಿಂದ ಎಂತಹವನೂ ಗುರುವಾಗಬಲ್ಲ, ಸಂತನಾಗಬಲ್ಲ, ಮಹಾಂತನಾಗಬಲ್ಲ; ಕಡೆಗೆ ದೇವನೊಡನೆ ಒಡವೆರೆದು ಒಂದಾಗಲೂ ಬಲ್ಲ." ಇದು ನಮ್ಮ ವಿಚಾರಧಾರೆ.

ಆದರೆ ಮಾನವ ಸಮಾಜವನ್ನು ಒಂದು ವೃಕ್ಷಕ್ಕೆ ಹೋಲಿಸಿ, ಮತ–ಧರ್ಮಗಳನ್ನು ರೆಂಬೆಗೆ ಹೋಲಿಸುವುದು ಶುದ್ಧ ತಪ್ಪು. ಒಂದು ವೃಕ್ಷವು ಒಂದೇ ರುಚಿಯ ಫಲಗಳನ್ನು ತಳೆಯುವುದು, ಬೇರೆ ಬೇರೆ ರುಚಿಯ ಹಣ್ಣುಗಳನ್ನು ತಳೆಯದು. ಯಾವುದೇ ರೆಂಬೆಯ ಹಣ್ಣು ತಿಂದರೂ ಒಂದೇ ರುಚಿಯ ಅನುಭವವಾಗುವುದು; ಒಂದೇ ಬಗೆಯ ವೈಟಮಿನ್ ಅನ್ನಾಂಗ ದೊರೆಯುವುದು. ಹಾಗಾದರೆ ಮಾನವ ಸಮಾಜವು ಒಂದು ವೃಕ್ಷವಾಗಿದ್ದು ಹಿಂದೂ, ಬೌದ್ಧ, ಇಸ್ಲಾಂ, ಕ್ರೈಸ್ತ, ಲಿಂಗಾಯತ ಇತ್ಯಾದಿ ಧರ್ಮಗಳು, ಅದ್ವೈತ,

ದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಎಂಬ ಮತಗಳು ಆ ಸಮಾಜ ವೃಕ್ಷದ ಫಲಗಳೇ ಆಗಿದ್ದರೆ, ಯಾವುದನ್ನು ತಿಂದರೆ ತಾನೇ ಏನು? ಹಸಿವೆ ಹಿಂಗುವುದಷ್ಟೆ! ಒಬ್ಬ ವ್ಯಕ್ತಿ ಹಿಂದು ಆಗಿದ್ದರೂ ಅಷ್ಟೇ, ಇಸ್ಲಾಂ ಧರ್ಮೀಯನಾಗಿದ್ದರೂ ಅಷ್ಟೇ ತಾನೆ? ಅಂದಾಗ ಡಾ॥ ಜ. ಚ. ನಿ. ಅವರು ಇಷ್ಟೇಕೆ ಅವರ ಶಿವಾಚಾರ್ಯ ಸಂಸ್ಕೃತಿಯ ಪ್ರಚಾರ ಮಾಡಬೇಕು? ಎಲ್ಲವೂ ಸಮಾನವೇ ಅಂದಾಗ ಯಾವ ಫಲ ತಿಂದರೂ ಅಷ್ಟೇ ತಾನೆ?

ಮತ–ಧರ್ಮಗಳು ರೆಂಬೆಗಳು ಅಂದರೆ ಅವೆರಡರ ವ್ಯಾಪ್ತಿ ಒಂದೇ ಎಂದಾಯಿತು. ಹಾಗೇನಿಲ್ಲ ಧರ್ಮವು ವ್ಯಾಪಕವಾದ ತತ್ತ್ವಗಳ ಮೊತ್ತ. ಅದು ಸಿದ್ಧಾಂತ, ಸಾಧನೆ, ದರ್ಶನ, ನೀತಿಶಾಸ್ತ್ರ, ಸಮಾಜಶಾಸ್ತ್ರ, ಸಂಸ್ಕಾರ, ಸಂಸ್ಕೃತಿ, ಅರ್ಥಶಾಸ್ತ್ರ, ಪರಂಪರೆ ಮುಂತಾದವನ್ನು ಒಳಗೊಂಡಿದೆ. ಅದರ ಒಂದು ಅಂಗ "ಮತ". ಮತವು a view of thinking, ಧರ್ಮವಾದರೋ ಒಂದು ಸಮಗ್ರ ಜೀವನ ವಿಧಾನ a way of life. ಒಂದು ಧರ್ಮದಲ್ಲಿ ಹಲವಾರು ಮತಗಳಿರಬಹುದು. ಸಾಮಾನ್ಯವಾಗಿ ಜಗತ್ತಿನಲ್ಲಿ ಎಲ್ಲಾ ಸ್ವತಂತ್ರ ಧರ್ಮಗಳೂ ಒಂದೊಂದು ಸಿದ್ಧಾಂತವನ್ನು (ಮತವನ್ನು) ಪ್ರತಿಪಾದಿಸುತ್ತವೆ. ಕೇವಲ ವೈದಿಕ ಧರ್ಮ ಮಾತ್ರ ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಮುಂತಾದ ಮತಗಳನ್ನು ಹೊಂದಿದೆ. ವೈದಿಕ ಧರ್ಮಾನುಯಾಯಿಗಳಾದ ಅದ್ವೈತಿಗಳು, ದ್ವೈತಿಗಳು, ವಿಶಿಷ್ಟಾದ್ವೈತಿಗಳು ಸೈದ್ಧಾಂತಿಕ ವ್ಯತ್ಯಾಸ ಹೊಂದಿದ್ದರೂ, ಆಚರಣೆಯಲ್ಲಿ ಸಾಮ್ಯಗಳನ್ನು ಹೊಂದಿರುತ್ತಾರೆ. ಮತ–ಧರ್ಮಗಳು ಸಮಾನ ವ್ಯಾಪ್ತಿಯುಳ್ಳವಲ್ಲ; ಆದ್ದರಿಂದ ಅವನ್ನು ಮಾನವ ಸಮಾಜದ ವಿವಿಧ ರೆಂಬೆಗಳಿಗೆ ಹೋಲಿಸಲಾಗದು.

ಕೆಲವರು ಸರ್ವಧರ್ಮ ಸಮಾನತೆ ಹೇಳುವಾಗ ಇನ್ನೊಂದು ಹೋಲಿಕೆ ಕೊಡುವರು· ದೇವರನ್ನು ತಲ್ಪಲು ವಿವಿಧ ಮಾರ್ಗಗಳು, ಪಥಗಳು, ವಿವಿಧ ಧರ್ಮಗಳು ಅಂದಾಗ ಯಾವುದೇ ಪಥದಲ್ಲಿ ನಡೆದರೂ ಗುರಿ ಮುಟ್ಟಬಹುದು. ಎಲ್ಲ ದಾರಿಗಳೂ ಸಮಾನ.

ಈ ಹೋಲಿಕೆ ಸಹ ಏಕದೇಶೀಯ, ಒಂದು ಬಂಡಿ ದಾರಿ ಇರಬಹುದು; ಇನ್ನೊಂದು ಹಳ್ಳ-ಕೊಳ್ಳಗಳ, ತಗ್ಗು-ತೆವರುಗಳ ದಾರಿ ಇರಬಹುದು. ಮತ್ತೊಂದು ಹೆದ್ದಾರಿ. ಎಲ್ಲ ದಾರಿಗಳೂ ಗುರಿ ಮುಟ್ಟಬಲ್ಲವು ಎಂಬುದು ಸರಿಯಲ್ಲ. ಹಳ್ಳ-ಕೊಳ್ಳಗಳ ದಾರಿ ತುಳಿದು ಮಾರ್ಗ ಮಧ್ಯದಲ್ಲಿ ಭಯಾನಕ ಬೆಟ್ಟ ಎದುರಾದರೆ ಆ ಬೆಟ್ಟವನ್ನು ಅತಿಕ್ರಮಿಸಲಾರದ ಮನುಷ್ಯ ದಾರಿಯಲ್ಲೇ ಸಾವನ್ನಪ್ಪಬಹುದು. ಅದೇ ಹೆದ್ದಾರಿಗುಂಟ ಹೊರಟವನು ಕಡಿಮೆ ಅಪಾಯಕ್ಕೆ ಈಡಾಗುವನು. ಅಲ್ಲಿ ಸಂಚರಿಸುವ ವಾಹನ ಬಹಳ. ಸ್ಪಷ್ಟ ಮಾರ್ಗದರ್ಶನ ಇರುತ್ತದೆ. ಅಲ್ಲಲ್ಲಿಗೆ ಸೂಚನಾಫಲಕಗಳಿರುತ್ತವೆ. ಅದೇ ರೀತಿ ಕೆಲವು ಧರ್ಮಗಳು ವ್ಯವಸ್ಥಿತವಾಗಿ ಮಾರ್ಗದರ್ಶನ ಮಾಡುತ್ತವೆ. ಅವು ಸುರಕ್ಷಿತವಾದ ಆಶ್ರಯ ನೀಡುತ್ತವೆ.

ಕೆಲವು ಧಾರ್ಮಿಕ ನೇತಾರರು ಜನರನ್ನು ಮೂಢ ನಂಬಿಕೆಗೆ ದೂಡುತ್ತಾರೆ; ಕೆಲವೊಮ್ಮೆ ತಾವು ದೂಡದಿದ್ದರೂ ಮೂಢನಂಬಿಕೆಯಲ್ಲಿದ್ದವರನ್ನು ತಿದ್ದ ಹೋಗುವುದಿಲ್ಲ. "ಅವರವರ ಮಟ್ಟಕ್ಕೆ ತಕ್ಕಂತೆ ಆಚರಿಸುತ್ತಾರೆ. ಎಲ್ಲರೂ ಒಂದೇ ಮಟ್ಟಕ್ಕೇರಲು ಹೇಗೆ ಸಾಧ್ಯ? ಅವರವರಿಗೆ ತಿಳಿದಂತೆ ಜನ ಉಪಾಸಿಸುತ್ತಾರೆ" ಎನ್ನುವರು. ಇದೂ ಸಹ ಒಂದು ಬಗೆಯ ಬೌದ್ಧಿಕ ಅಪ್ರಮಾಣಿಕತೆ. ಅಜ್ಞಾನದಿಂದ ಮಣ್ಣು ತಿನ್ನುವ ಮಗುವನ್ನು ಕಂಡು, "ಪಾಪ, ತನ್ನ ಬುದ್ಧಿಮಟ್ಟಕ್ಕೆ ತಕ್ಕಂತೆ ಮಣ್ಣು ತಿನ್ನುತ್ತದೆ. ಬೈದರೆ-ಬಡಿದರೆ

ನೊಂದುಕೊಳ್ಳುತ್ತದೆ. ತಿನ್ನಲಿ ಬಿಡು" ಎಂದರೆ ತಾಯಿಯು ತನ್ನ ಕರ್ತವ್ಯ ಮಾಡಿದಂತೆ ಆಗುವುದಿಲ್ಲವಷ್ಟೇ. ಅದೇ ರೀತಿ ಗುರುವು ತಾನು ಸತ್ಯವನ್ನು ಕಂಡುಕೊಂಡವನಾದರೆ ಅದನ್ನು ನಿರ್ದಾಕ್ಷಿಣ್ಯವಾಗಿ ಹೇಳಬೇಕೇ ವಿನಾ ತಿಪ್ಪೆ ಸಾರಿಸುವ ಮಾತನ್ನಾಡಬಾರದು.

ಸರ್ವ ಧರ್ಮ ಸಮನ್ವಯದ ಉದ್ದೇಶದಿಂದ ಕೆಲವರು ಸಮ್ಮೇಳನ ಮಾಡುವರು. ಸಾಮಾನ್ಯವಾಗಿ ಹಿಂದೂ ಗುರುಗಳು, ನೇತಾರರು ಹೀಗೆ ಮಾಡುವರೆಂಬುದನ್ನು ನಾವು ಗಮನಿಸಬೇಕು. ಕ್ರೈಸ್ತ ಪಾದ್ರಿಗಳಾಗಲಿ, ಮುಸ್ಲೀಮ ಮೌಲ್ವಿಗಳಾಗಲಿ ಇಂಥ ಸಮನ್ವಯ ಸಭೆಗಳನ್ನು ಅಷ್ಟಾಗಿ ಏರ್ಪಡಿಸರು. ಅಪವಾದವೆಂಬಂತೆ ಕೆಲವು ನಡೆದಿವೆಯೋ ನಾನರಿಯೆ! ಈ ಸರ್ವಧರ್ಮ ಸಮ್ಮೇಳನ ಸಭೆಗಳು ಹಿಂದೂ ನೇತಾರರು ನಡೆಸುವ ಕಾರಣ ಸಭಿಕರು ಹೆಚ್ಚಾಗಿ ಹಿಂದೂಗಳೇ ಇರುವರು. ಅಲ್ಲಿ ಮಾತನಾಡಲು ಬಂದ ಪಾದ್ರಿಗಳು ಕ್ರೈಸ್ತ ಧರ್ಮದ ವಿಶೇಷತೆ ಕುರಿತು, ಇಸ್ಲಾಂ ಬಗ್ಗೆ ಮೌಲ್ವಿಗಳು ಅಥವಾ ಭಾಷಣಕಾರರು ಇಸ್ಲಾಂ ವೈಶಿಷ್ಟ್ಯ ಕುರಿತು ಹೇಳುವರು. ಮತ್ತೂ ಸರ್ವಧರ್ಮ ಸಮಾನತೆ ಕುರಿತು ಭಾಷಣ ಹಿಂದೂಗಳಿಗೆಯೆ!

"ಮಾನವ ಸಮಾಜವೆಂಬ ವೃಕ್ಷದಲ್ಲಿ ಮತ-ಧರ್ಮಗಳೆಂಬ ರೆಂಬೆಗಳು ಮೂಡಿರುವುದು ಒಂದೇ ಮೂಲದಿಂದ; ತಳೆವ ಫಲವೊಂದೇ!" ಎಂದಿದ್ದಾರೆ ಜ.ಚ.ನಿ. ಇದು ಹೇಗೆ? ಯಹೂದ್ಯ ಧರ್ಮದ ಕೆಲವು ಸಂಕುಚಿತ ವಿಚಾರ ವಿರೋದಿಸಿ ಕ್ರೈಸ್ತ, ಇಸ್ಲಾಂ ಧರ್ಮ ಹುಟ್ಟಿದವು. ವಿರೋದಿಸಿದ ಏಸು, ಪೈಗಂಬರರು ಸಂಪ್ರದಾಯವಾದಿಗಳಿಂದ ತುಂಬಾ ಕಷ್ಟಕ್ಕೆ ಈಡಾದರು. ಸನಾತನ ಕೆಲವು ಮೂಢ ಪದ್ಧತಿಗಳನ್ನು ವಿರೋಧಿಸಿ ಪ್ರಗತಿಪರ ಧರ್ಮಗಳಾದ ಬೌದ್ಧ, ಲಿಂಗಾಯತ, ಸಿಖ್ ಧರ್ಮಗಳು ಹುಟ್ಟಿದವು. ಈ ಸಂಸ್ಥಾಪಕ ಪ್ರವಾದಿಗಳು ಸಹ ಕೆಲವು ಕಷ್ಟ ಕೋಟಲೆಗೆ ಈಡಾದರು.

ಇನ್ನು ಜಗತ್ತಿನ ಬೇರೆ ಬೇರೆ ಧರ್ಮಗಳ ತತ್ತ್ವಗಳು ಎಷ್ಟೋ ಭಿನ್ನ ಭಿನ್ನ ವಿಚಾರ ಗಳಿಂದ ಕೂಡಿವೆ. ಮಾಂಸಾಹಾರವನ್ನು ಪಾಪ ಎನ್ನದ ಇಸ್ಲಾಂ ವಿಚಾರ, ಮಾಂಸಾಹಾರ ಪಾಪಮಯ, ಅಹಿಂಸೆಯೇ ಪರಮ ಧರ್ಮ ಎಂದ ಜೈನ. ಲಿಂಗಾಯತ ಧರ್ಮದ ವಿಚಾರ ಎರಡೂ ಸಮಾನವೆ? ದೇವನೊಬ್ಬ, ಅವನೇ ಆತ್ಯಂತಿಕ ಶಕ್ತಿ ಎಂದು ಕರ್ತನಿಗೆ ಅಗ್ರಸ್ಥಾನ ನೀಡಿದ ಇಸ್ಲಾಂ, ಲಿಂಗಾಯತ ಧರ್ಮದ ಏಕದೇವೋಪಾಸನೆ, ಪ್ರಕೃತಿ ಪೂಜೆ–ಅಗ್ನಿಯ ಆರಾಧನೆ ಮಾಡುವ ವೈದಿಕ ಧರ್ಮದ ಬಹುದೇವೋಪಾಸನೆ, ಎರಡೂ ಸಮಾನವೆ? ಮತಾಂತರವು ಮನುಷ್ಯನ ಜನ್ಮಸಿದ್ಧ ಹಕ್ಕು. ದೇವ ಮಂದಿರಕ್ಕೆ ದ್ವಾರ ಎನ್ನುವ ಲಿಂಗಾ ಯತ, ಕ್ರೈಸ್ತ, ಬೌದ್ಧ ಮುಂತಾದ ಧರ್ಮಗಳ ವಿಚಾರ, ಧರ್ಮವು ಮನುಷ್ಯನಿಗೆ ಹುಟ್ಟಿ ನಿಂದಲೇ ಬರುತ್ತದೆ, ಅದನ್ನು ಬದಲಿಸಲು ಬರದು ಎನ್ನುವ ವೈದಿಕ, ಫಾರ್ಸಿ ಮತ್ತು ಯಹೂದ್ಯ ಧರ್ಮಗಳ ವಿಚಾರ ಸಮಾನವೆ?

ಇವೆಲ್ಲ ತಾರ್ಕಿಕ ಚಿಂತನೆಯ ವಿಷಯುಗಳು. ಕೆಲವು ಹೇಳಿಕೆಗಳು (Quotations), ಘೋಷಣೆ (Slogans) ಗಳು ಹೇಳಲು-ಕೇಳಲು ಬಲು ಚಂದ. ಆದರೆ ಪ್ರಾಯೋಗಿಕ ದೃಷ್ಟಿಯಿಂದ ಅವಾಸ್ತವಿಕ. ಇಷ್ಟಾದರೂ ಒಂದು ಮಾತನ್ನು ಅರಿಯಬೇಕು. ವೈವಿಧ್ಯತೆ ಕಟುಸತ್ಯವಿದ್ದರೂ, ಏಕತೆ ಸಾಧ್ಯವಿದೆ. ಬಿಡಿಬಿಡಿಯಾಗಿದ್ದೂ ಈ ಧರ್ಮಗಳು ಇಡಿಯಾಗಿ ಬದುಕಬಲ್ಲವು. ರಾಷ್ಟ್ರೀಯ ದೃಷ್ಟಿಯಿಂದ, ವಿಶ್ವಮಾನವತೆಯ ದೃಷ್ಟಿಯಿಂದ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ನಡುವೆಯೂ ಕೂಡಿ ಬದುಕಲು ಬರುತ್ತದೆ, ಬದುಕಬೇಕು ಎಂಬುದು ಮತ್ತೊಂದು ವಿಷಯ. ಅದಕ್ಕಾಗಿ ಯತ್ನಿಸಬೇಕಾದುದು ಶ್ರೇಯಸ್ಕರವಾದುದು.

—ಜಗದ್ಗುರು ಮಾತೆ ಮಹಾದೇವಿ

ಶರಣ ಧರ್ಮದ ಹಿತಶತ್ರುಗಳು

– ಶ್ರೀ ಶಾಂತಾನಂದಸ್ವಾಮಿ, ಎಂ.ಎ., ಹುಬ್ಬಳ್ಳಿ.

೧) ಬಸವಣ್ಣ ಭಕ್ತ, ಗುರು ಅಲ್ಲ ಎನ್ನುವವರು.
೨) ಬಸವಣ್ಣ ಶರಣಧರ್ಮದ ಸ್ಥಾಪಕನಲ್ಲವೆನ್ನುವವರು.
೩) ಸ್ತ್ರೀಯರೂ, ಶೂದ್ರರೂ, ಉಳಿದೆಲ್ಲ ಜಾತಿಯವರು ಗುರುವಾಗಲು ಬರದು ಎನ್ನುವವರು.
೪) ಸಮಾಜ ಸುಧಾರಣೆಯ ಕಳಕಳಿ ಇಲ್ಲದವರು.
೫) ಸಮಾಜ, ದೇವರು, ಗುರುಗಳಲ್ಲಿ ಭಯವಿಲ್ಲದವರು.
೬) ಸರ್ವ ಶಾಸ್ತ್ರಗಳನ್ನು ಅಭ್ಯಸಿಸದವರು.
೭) ಸ್ತ್ರೀಯರು ಮಾಡಿದ ಅಡುಗೆ ಊಟ ಮಾಡದವರು.
೮) ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಡದೆ ಇರುವವರು. ಮಡಿಯ ಬಗ್ಗೆ ತಪ್ಪು ಕಲ್ಪನೆ ತಳೆದವರು.
೯) ಸಮಾಜಕ್ಕೆ ನೈಜ ಧರ್ಮದ ತಿರುಳನ್ನು ತಿಳಿಸದವರು.
೧೦) ಸ್ಥಾವರ ಲಿಂಗಗಳನ್ನು ಸ್ಥಾಪಿಸುವವರು. ನವಗ್ರಹ ಪ್ರತಿಷ್ಠೆ, ಯಜ್ಞ–ಯಾಗ ಗಳನ್ನು ಮಾಡುವವರು.
೧೧) ಶರಣರ ವಚನ ಸಾಹಿತ್ಯದಿಂದಲೇ ಬದುಕಿ ಅದಕ್ಕೆ ಮಾನ್ಯತೆ ಕೊಡದವರು.
೧೨) ದೇವರ ಕೃಪೆ ಪಡೆಯಲು ಪುಣ್ಯ ಕ್ಷೇತ್ರ ತಿರುಗುವವರು.
೧೩) ವಂಶಾವಳಿ ಪೀಠಸ್ಥರು ಬೇಕೆನ್ನುವವರು.
೧೪) ವಚನ ಸಾಹಿತ್ಯ ಶರಣ ಧರ್ಮದ ಗ್ರಂಥವೆಂದೊಪ್ಪದವರು.
೧೫) ಧರ್ಮದ ಹೆಸರಿನಲ್ಲಿ ವ್ಯಾಪಾರ ಮಾಡುವವರು.
೧೬) ಜಾತಿ, ಮತ, ಕುಲ, ಪಂಗಡಗಳನ್ನೇ ಧರ್ಮವೆಂದು ತಿಳಿದವರು.
೧೭) ದಲಿತರಲ್ಲಿ ದಯ ತೋರದವರು.
೧೮) ಅಯ್ನೋರ ಜಾತಿಯವರೇ ಪೂಜಾರ್ಹರು, ಅವರೇ ಗುರುಗಳಾಗಬೇಕೆನ್ನುವವರು.
೧೯) ದೀಕ್ಷೆ ಪಡೆದುಕೊಂಡಾದ ಮೇಲೆಯೂ ಒಳ ಪಂಗಡಗಳನ್ನು ಒಪ್ಪುವವರು.
೨೦) ಪರಸ್ತ್ರೀ, ಪರದೈವ, ಪರಧನಕ್ಕೆ ಳಸುವವರು.
೨೧) ತಿಳಿದೂ ಕ್ಷುದ್ರ ದೈವಂಗಳ ಭಕ್ತಿ ಮಾಡುವವರು.
೨೨) ತಮ್ಮ ಜೀವನಕ್ಕೆ ಪೆಟ್ಟಾಗದಂತೆ ಉಪದೇಶಿಸುವ ತತ್ವ ನಿಷ್ಠರಲ್ಲದ ಹೊರಮೈ ಉಪದೇಶಕರು.
೨೩) ನುಡಿದಂತೆ ನಡೆಯದವರು.
೨೪) ಆತ್ಮನನ್ನು ತಿಳಿದರೆ ಸಾಕು ಆಚಾರ ಹೇಗಿದ್ದರೇನು ಎಂದು ಪ್ರತಿಪಾದಿಸುವವರು.

೨೫) ಅರ್ಹತೆಯಿಲ್ಲದೆ ಬಿರುದಿಗೆ ...
೨೬) ದೀಕ್ಷೆ ಪಡೆದುಕೊಂಡ ಲಿಂಗಧಾರಿಗಳ ಸಮಾಜದಲ್ಲಿ ಕೊಡು ಕೊಳ್ಳುವ ವ್ಯವಹಾರ ಮಾಡದೆ, ಮೇಲು-ಕೀಳೆಂಬ ಭೇದ ಎಣಿಸುವವರು.
೨೭) ಕುಲಹೀನ ಶಿಷ್ಯಂಗೆ ಅನುಗ್ರಹ ಮಾಡಿ ಅವರ ಮನೆಯಲ್ಲುಣ್ಣದವರು. ಸಮಾನತೆ ಸಾಧಿಸದವರು.
೨೮) ಮನೆಗೊಂದು ದೈವ, ಕುಲಕ್ಕೊಂದು ದೈವ, ಗ್ರಾಮಕ್ಕೊಂದು ದೈವವೆಂದು ಆರಾಧಿಸುವವರು.
೨೯) ಲಿಂಗಾಯತ ಧರ್ಮದಲ್ಲಿ ಹುಟ್ಟಿಯೂ ಮಾಂಸಾಹಾರ ಮಾಡುವವರು.
೩೦) ದೀಕ್ಷೆ ಪಡೆದು, ಸ್ನಾನ-ಊಟದ ಕಟ್ಟು ನಿಟ್ಟು ಮಡಿಯನ್ನು ಪ್ರಸಾದಿ ಸ್ಥಲವೆಂದು ತಿಳಿದವರು.
೩೧) ಜೀವನ ಪ್ರತಿ ಗಳಿಗೆಯಲ್ಲಿಯೂ ಪಂಚಾಂಗ, ಜಾತಕ, ಭವಿಷ್ಯಗಳನ್ನು ಅವಲಂಬಿಸಿದ ದುರ್ಬಲರು.

ಸ್ಫುರಣ - ಕಿರಣ

ಒಂದು ದಿನ ಬೆಳಗಿನ ಉಪಹಾರ ಮಾಡುತ್ತಿದ್ದೆ. ಇಡ್ಲಿಯನ್ನು ತಿನ್ನುವಾಗ ಶಿಷ್ಯಳು ಬಾಳೆಯ ಹಣ್ಣು ತಂದಿತ್ತಳು. ಇನ್ನೂ ಅವು ಪೂರ್ಣವಾಗಿ ಮಾಗಿರಲಿಲ್ಲ. ಅವನ್ನೇ ತಿಂದೆ. ತಿನ್ನಲು ಕಷ್ಟವೇನೂ ಆಗಲಿಲ್ಲ. ಏಕೆಂದರೆ ಬಾಳೆಯ ಹಣ್ಣು ಇನ್ನೂ ಪೂರ್ಣ ಮಾಗಿರದಿದ್ದರೂ ಹುಳಿಯೇನೂ ಇರವು ತಾನೆ? ಅದೇ ಮಾವಿನ ಹಣ್ಣು ಎಳಚಾಗಿದ್ದಾಗ ಹುಳಿ ಹುಳಿ ಇರುವವು. (ಚಿಕ್ಕ ಮಕ್ಕಳಿಗೆ ಹುಳಿಹಣ್ಣು ತಿನ್ನುವ ಚಪಲ ಇರುವುದು. ನಮಗಷ್ಟು ಇರದಷ್ಟೇ.) ತಿನ್ನಲು ಆಗದು. ಆಗ ನನಗೊಂದು ವಿಚಾರ ಸ್ಫುರಿಸಿತು. ಹಣ್ಣುಗಳಲ್ಲಿ ಮೂರು ಬಗೆ. ಬಾಳೆ ಹಣ್ಣು, ಚಿಕ್ಕು ಹಣ್ಣು ಮೊದಲಿನಿಂದಲೂ ಸವಿ, ಪಕ್ವವಾದಾಗ ಹೆಚ್ಚು ಸಿಹಿ. ಮಾವಿನ ಹಣ್ಣು ಕಾಯಿಯಾಗಿದ್ದಾಗ ಹುಳಿ, ಹಣ್ಣಾದಾಗ ಸಿಹಿ. ಹುಣಿಸೆಹಣ್ಣು ಎಳೆಯದಿದ್ದರೂ ಹುಳಿ, ಹಣ್ಣಾದಾಗಲೂ ಹುಳಿ. ಹಾಗೆಯೇ ಮನುಷ್ಯರ ಸ್ವಭಾವ ಕೂಡ. ಕೆಲವರು ಬಾಲದಿಂದಲೂ ಸ್ವಭಾವತಃ ಶಾಂತರು, ಸಾತ್ವಿಕರು, ಸಂಯಮಿಗಳು, ಗುಣವಂತರು ಆಗಿರುವರು. ಮುಂದೆ ಸಾಧನೆಯಲ್ಲಿ ಮುನ್ನಡೆದಂತೆ ಇನ್ನೂ ಪಕ್ವಗೊಂಡು ಗಂಭೀರ ವ್ಯಕ್ತಿತ್ವ ಪಡೆಯುವರು. ಉದಾಹರಣೆ ಅಕ್ಕಮಹಾದೇವಿ, ಬುದ್ಧ, ಬಸವಣ್ಣ ಮುಂತಾದವರು. ಮತ್ತೆ ಕೆಲವರು ಬಾಲ್ಯದಲ್ಲಿ ತುಂಟರು, ಕೋಪಿಷ್ಟರೂ, ಕೋಪಿಗಳೂ, ಕಾಮಿಗಳೂ ಆಗಿದ್ದು, ಪ್ರವೃತ್ತಿ ಪಲ್ಲಟವಾಗಿ ಅಗಾಧ ಬದಲಾವಣೆ ಹೊಂದಿ, ನಂತರ ಪಕ್ವವಾಗುವರು, ಮಾವಿನ ಹಣ್ಣಿನಂತೆ. ಉದಾಹರಣೆಗೆ ವಿವೇಕಾನಂದ, ವೇಮನ, ಅಂಗುಲಿಮಾಲ ಮುಂತಾದವರು. ಇನ್ನು ಕೆಲವರು ಸಾಯುವವರೆಗೂ ಬದಲಾಗರು. ಕಡೆಯವರೆಗೂ ದುರ್ಗುಣಗಳನ್ನು ಹೊತ್ತೇ ಸಾಗಿ, ಒಂದು ದಿನ ಸಾಯುವರು. ಹುಣಸೇ ಹಣ್ಣಿನ ಹುಳಿತನದಂತೆ. ಉದಾಹರಣೆಗೆ ದೇವದತ್ತ. ದುರ್ಯೋಧನ, ಕೊಂಡಿ ಮಂಚಣ್ಣನಂತಹವರು.

— ಜಗದ್ಗುರು ಮಾತೆ ಮಹಾದೇವಿ

ಮಂಥನ

ನೀಲಲೋಚನೆಯ ಬದುಕಿನಲ್ಲಿ ಒಂದು ತಿರುವು

— ಡಾ॥ ಎಂ. ಎಂ. ಕಲಬುರ್ಗಿ

ಬಸವಣ್ಣನವರ ಧರ್ಮಪತ್ನಿ ನೀಲಲೋಚನೆಯದು ಕರ್ನಾಟಕದ ಗೃಹಿಣಿಯರ ಪರಂಪರೆಯಲ್ಲಿ ಎದ್ದು ಕಾಣುವ ಹೆಸರು. ಪತಿಯ ಹೊಣೆಗಾರಿಕೆಯಲ್ಲಿ ಹಗಲು ಹಚ್ಚಿ ನೆರವಾದ ಈ ಧೀರೋದಾತ್ತ ಗೃಹಿಣಿಯ ಜೀವನದ ಅಸ್ಪಷ್ಟ ಅಂಶಗಳನ್ನು ಶೋಧಿಸಿದಲ್ಲಿ ಅವಳ ವ್ಯಕ್ತಿತ್ವ ಸ್ಪಷ್ಟವಾಗುವ ಸಾಧ್ಯತೆಯಿದೆ.

ಈವರೆಗೆ ನೀಲಲೋಚನೆ ಬರೆದ ೧೨೫ ವಚನಗಳು ಸಿಕ್ಕಿದ್ದು, ಇಲ್ಲಿಯ ಬಹಳಷ್ಟು ವಚನಗಳಲ್ಲಿ ಬಸವಣ್ಣನ ಅಗಲಿಕೆಯ ಆರ್ತನಾದ ಪ್ರಧಾನವಾಗಿ ಕೇಳಿಸುತ್ತದೆ. ಇವು ಬಸವಣ್ಣನವರು ಐಕ್ಯವಾದ ಬಳಿಕ ಬರೆದ ವಚನಗಳೆಂದು ಕೆಲವರು ಭಾವಿಸುತ್ತಾರೆ. ಆದರೆ (1) ಬಸವಣ್ಣನ ಆದೇಶದಂತೆ ಹಡಪದ ಅಪ್ಪಣ್ಣ ಸಂಗಮದಿಂದ ತಂಗಡಿಗೆ (ಕಲ್ಯಾಣಕ್ಕೆ ?) ಬಂದು ಕರೆಯಲು ನೀಲಲೋಚನೆ ಆತನಿಗೆ ತಿಳಿಹೇಳಿ, ಅಂಗ್ನಯೆ ಲಿಂಗದಲ್ಲಿ ಐಕ್ಯವಾದಳೆಂದು ವೀರಶೈವ ಕೃತಿಗಳು ತಿಳಿಸುವುದರಿಂದ ಇವಳು ಬಸವಣ್ಣನಿಗೆ ಮೊದಲು ನಿಧನಳಾದಳೆನಿಸುತ್ತದೆ. ಆದುದರಿಂದ ಇವು ಬಸವಣ್ಣನವರು ನಿಧನರಾದ ಬಳಿಕ ಬರೆದ ವಿರಹ ವಚನಗಳೆಂದು ಹೇಳಲು ಆಧಾರ ಸಾಲದು. (2) ಒಂದು ವೇಳೆ ಇವಳು ಬಸವಣ್ಣನ ತರುವಾಯ ಲಿಂಗೈಕ್ಯಳಾಗಿದ್ದರೆ ಜೀವನದುದ್ದಕ್ಕೂ ಕೆಲವು ವಚನಗಳನ್ನು ಮಾತ್ರ ಬರೆದು ಪತಿಯ ಮರಣದ ತರುವಾಯ ಬಹಳಷ್ಟು ವಚನ ಬರೆದಳೆಂದು ಹೇಳುವುದು ಸಮಂಜಸವೆನಿಸುವುದಿಲ್ಲ. ಹೀಗಾಗಿ ಬಹಳಷ್ಟು ವಚನಗಳು ಬಸವ ವಿರಹದಿಂದ ಬಳಲುವುದಕ್ಕೆ ಬೇರೊಂದು ಕಾರಣವಿರಬೇಕು. ಅದು ಬಹುಶಃ ಆಕೆಗೆ ನಡುವಯಸ್ಸಿನಲ್ಲಿಯೇ ಗಂಡನ ಲೈಂಗಿಕ ಸಂಬಂಧ ತಪ್ಪಿಹೋದುದಾಗಿರಬೇಕು.

ಬಸವರಾಜ ದೇವರ ರಗಳೆಯಲ್ಲಿ ಒಂದು ಘಟನೆ ಹೀಗೆ ಬರುತ್ತದೆ. ಒಮ್ಮೆ ಶಿವನು ಸುಖೀಜಂಗಮ ರೂಪದಲ್ಲಿ ಭಕ್ತಿ ಪರೀಕ್ಷೆಗಾಗಿ ಬಸವಣ್ಣನ ಮನೆಗೆ ಬಂದು ಊಟೋಪಚಾರವಾದ ಬಳಿಕ ರಾತ್ರಿ "ಎಲೆ ಬಸವರಾಜಾ ಪೆಂಗೂಸಿಲ್ಲದೆ ಎಂದುಂ ಇದ್ದುದಿಲ್ಲ" ಎಂದು ತನ್ನ ಮನದಾಸೆಯನ್ನು ವ್ಯಕ್ತಪಡಿಸಿದ. ಇದನ್ನು ಪೂರೈಸಬೇಕೆಂದರೆ ಅಂದು ಊರಲ್ಲಿಯ ಎಲ್ಲ ವೇಶ್ಯೆಯರು ಒತ್ತೆಹೋಗಿದ್ದರು. ಅಷ್ಟರಲ್ಲಿ "ಊರೊಳಗೆ ಪೆಣ್ಣಿಲ್ಲದಿರ್ದಡೆ ಜಂಗಮಕ್ಕೆ ಬಸವನೆನ್ನಂ ಕೊಟ್ಟಲ್ಲದೆ ಮಾಣನೆಂದು ಸಿಂಗರಿಸಿ" ಕೊಂಡಿದ್ದ ನೀಲಲೋಚನೆಯನ್ನು ಬಸವಣ್ಣ ಜಂಗಮನಿದ್ದ ಕೋಣೆಗೆ ಕಳಿಸುವುದೇ ತಡ * ಅವನ ಭಕ್ತಿಗೆ ಮೆಚ್ಚಿ ಜಂಗಮದೇವ "ದಶಭುಜಂ ಪಂಚವಕ್ತ್ರಂ ತ್ರಿಣೇತ್ರಂ" ಗಳ ಸಂಗಮದೇವನಾಗುತ್ತಾನೆ. ಇದನ್ನು ಕಂಡ ನೀಲಲೋಚನೆ

---

* ಈ ಘಟನೆಯನ್ನು ಹೇಗೆ ಅರ್ಥೈಸಬೇಕೋ ತಿಳಿಯದು.

"ಬಸವಾ ಬಸವಾ ಜಂಗಮದೇವರು ಸಂಗಮದೇವರಾದರು" ಎಂದು ಕೂಗಲು "ತಾಯೆ, ತಾಯೆ ಮುನ್ನವ್ವಾರೆಂದು ಕೊಟ್ಟೆಂ" ಎಂದು ಬಸವಣ್ಣ ನುಡಿಯುವಷ್ಟರಲ್ಲಿ ಶಿವ ಅಂತರ್ಧಾನನಾಗುತ್ತಾನೆ. ಈ ಪ್ರಸಂಗದಲ್ಲಿ ಹರಿಹರ "ಅಂದು, ಮೊದಲಾಗಿ ಗುಣಾನ್ವಿತೆ ಮಾಯಿದೇವಿಯಂ ಶಿವನಲತಾಂಗಿಯೆಂದು ಬಸವಂ ಪದೆದರ್ಚಿಸುತಿರ್ದನುರ್ವಿಯೊಳ್" ಎಂದು ಹೇಳುತ್ತಾನೆ.* ಅಂದಿನಿಂದ ನೀಲಲೋಚನೆ ತನ್ನ ಧರ್ಮಪತ್ನಿಯಲ್ಲ, ಶಿವನ ಧರ್ಮಪತ್ನಿಯೆಂದು ಬಸವಣ್ಣ ಭಾವಿಸಿದನಂತೆ. "ತಾಯೆ ತಾಯೆ" ಎಂದು ಸನ್ನಿವೇಶದ ಒತ್ತಡಕ್ಕೆ ಒಳಗಾಗಿ ಆತ ನುಡಿದುದು ನಿತ್ಯಜೀವನದಲ್ಲಿಯೂ ನಿಜವಾಯಿತು. ಆ ಕ್ಷಣದಿಂದ ಅವರು ತಾಯಿ ಮಗನಂತೆ ನಡೆದುಕೊಂಡರು. ಕೇವಲ ತಾಯಿಯಲ್ಲ ಲೋಕದ ತಾಯಿಯಾದ ಪಾರ್ವತಿಯೆಂದು ಅವಳನ್ನು ಬಸವಣ್ಣ ಪೂಜಿಸತೊಡಗಿದ, ಪೂಜ್ಯಭಾವದಿಂದ ಕಾಣತೊಡಗಿದ.

ಈ ಘಟನೆ ನೀಲಲೋಚನೆಯ ಜೀವನದ ಬಹು ದೊಡ್ಡ ತಿರುವು. ಇದರಿಂದಾಗಿ ಅವಳು ಬಸವ ವಿರಹವನ್ನು ಜೀವನದುದ್ದಕ್ಕೂ ಅನುಭವಿಸಿರಬಹುದು; ದಾಂಪತ್ಯಾತೀತ ದಿವ್ಯಬದುಕಿನ ಧ್ವನಿಯಾದ ಇವಳ ವಚನಗಳಲ್ಲಿ ಈ ನಿತ್ಯವಿರಹ ನುಗ್ಗಿ ಬಂದು ನಿಂತಿರಬಹುದು,

1. "ಕೂಟವಿಲ್ಲದ ಪುರುಷನ ಕಂಡು ಕಾಮದ ಆತುರ ಹಿಂಗಿತ್ತೆನಗೆ" (೮೭)
2. "ಪಾರ್ವತಿಯ ರೂಪಕಂಡು ಪರಶಿವನ ಸಂಗ ನಿಸ್ಸಂಗವಾಗಿ,
   ತಾಯಿಮಗನಂಗದಿಂದ ತನುವಳಿದು, ನಿರಾಭಾರ ರೂಪವನೆಯ್ದ,
   ಬಸವನ ಅನುಭಾವದಿಂದ ವಿವರವ ಕಂಡು
   ವಿಚಾರಪತ್ನಿಯಾದೆನಯ್ಯಾ ಸಂಗಯ್ಯಾ" (೧೦೩)
3. "ಮಡದಿಯೆನಲಾಗದು ಬಸವಂಗೆ ಎನ್ನನು,
   ಪುರುಷನೆನಲಾಗದು ಬಸವನ ಎನಗೆ,
   ಉಭಯ ಕುಳವ ಹರಿದು
   ಬಸವಂಗೆ ಶಿಶುವಾದೆನು, ಬಸವನೆನ್ನ ಶಿಶುವಾದನು.
   ಪ್ರಮಥರು ಪುರಾತರು ಸಾಕ್ಷಿಯಾಗಿ
   ಸಂಗಯ್ಯನಿಕ್ಕಿದ ದಿಬ್ಯವ ಮೀರದೆ ಬಸವನೊಳಗಾನಡಗಿದೆ" (೧೦೭)

ಇತ್ಯಾದಿ ವಚನಗಳಲ್ಲಿ ಅವಳ ಪತಿತ್ಯಕ್ತ ಜೀವನದ ಲೌಕಿಕ ನೋವು-ಅಲೌಕಿಕ ಸಿದ್ಧಿಗಳು ಕೇಳಿಸುತ್ತವೆ. ಆದುದರಿಂದ ಅವಳ ವಚನಗಳಲ್ಲಿ ಬಹಳಷ್ಟು ಸಲ ಸ್ಪಂದಿಸುವ ಬಸವನ ಅಗಲಿಕೆಯ ಧ್ವನಿ ಆತನ ನಿಧನದ ಅಳಲಾಗಿರದೆ, ನಡುವಯಸ್ಸಿನಲ್ಲಿಯೇ ಅವನಿಂದ ಅಗಲಿದ ವ್ಯಥೆಯಾಗಿರಬಹುದೆನಿಸುತ್ತದೆ,

('ಸಾಧನೆ' ಕೃಪೆಯಿಂದ ಜುಲೈ–ಸೆಪ್ಟಂಬರ್ ಸಂಚಿಕೆ ೧೯೮೪)

---

* ಮಾಯಿದೇವಿಯೆಂಬುದು ನೀಲಲೋಚನೆಯ ಇನ್ನೊಂದು ಹೆಸರು.

ವಿರಹ — ಉದಾತ್ತೀಕರಣ

— ಜಗದ್ಗುರು ಮಾತೆ ಮಹಾದೇವಿ

"ಸಾಧನೆ", ಬೆಂಗಳೂರು ವಿಶ್ವವಿದ್ಯಾಲಯದ ದ್ವೈಮಾಸಿಕ ಪತ್ರಿಕೆಯ ಜುಲೈ-ಸೆಪ್ಟಂಬರ್ ೧೯೮೪ರ ಸಂಚಿಕೆಯಲ್ಲಿ ಡಾ॥ ಎಂ. ಎಂ. ಕಲಬುರ್ಗಿ ಅವರು ಬರೆದ "ನೀಲಲೋಚನೆಯ ಬದುಕಿನಲ್ಲಿ ಒಂದು ತಿರುವು" ಎಂಬ ಲೇಖನವೊಂದು ಪ್ರಕಟವಾಗಿದೆ. ಯಾವುದೋ ಒಂದು ಹೊಸ ವಿಚಾರವನ್ನು ಸಂಶೋಧಿಸುವಂತೆ, ಆಸ್ಫೋಟಿಸುವಂತೆ ಕೆಲವು ವಿಚಾರಗಳನ್ನು ಶ್ರೀಯುತರು ಆಗಾಗ ಹೇಳುವುದುಂಟು-ಸಂಶೋಧನೆಯ ಹೆಸರಿನಲ್ಲಿ.

ಆ ಲೇಖನವನ್ನು, ಅದರ ಸಂಪೂರ್ಣರೂಪದಲ್ಲಿ ಈಗ ಪ್ರಕಟಿಸಿದ್ದೇವೆ. ಆದರ್ಶ ಗೃಹಿಣಿಯರ ಸಾಲಿನಲ್ಲಿ ನೀಲಾಂಬಿಕೆಯದು ಎದ್ದು ಕಾಣುವಂತಹ ಆದರ್ಶ ಮತ್ತು ಘನವಾದ ವ್ಯಕ್ತಿತ್ವ. ಆಕೆಯ ವಚನಗಳು ೧೨೫ ಸಿಕ್ಕಿದ್ದು ಅವುಗಳಲ್ಲಿ ಹೆಚ್ಚಿನವು ಬಸವಣ್ಣನ ಅಗಲಿಕೆಯ ಆರ್ತನಾದದಿಂದ ಕೂಡಿದವು ನಿಜ. ಅವುಗಳು ಬಸವಣ್ಣನವರು ಐಕ್ಯವಾದ ನಂತರ ಬರೆದವೇನೂ ಅಲ್ಲ. "ನೋಡು ನೋಡು ನೋಡು ಲಿಂಗವೆ" ಎಂಬುದು ಮಾತ್ರ ಬಸವಣ್ಣನವರು ಲಿಂಗೈಕ್ಯವಾದನಂತರ ಬರೆದುದು.

ನಮ್ಮ ಅಭಿಪ್ರಾಯದಲ್ಲಿ ಬಸವಣ್ಣನವರಿಗೆ ಪೂರ್ವದಲ್ಲೇ ನೀಲಾಂಬಿಕೆ ಐಕ್ಯಳಾಗಿಲ್ಲ. ನಂತರವೇ ಆಗಿದ್ದಾಳೆ. ಬಸವಣ್ಣನವರು ನೀಲಾಂಬಿಕೆಯನ್ನು ಸಂಗಮಕ್ಕೆ ಬರಹೇಳಿ ಹಡಪದ ಅಪ್ಪಣ್ಣನವರನ್ನು ಕರೆಯಲು ಕಳಿಸುತ್ತಾರೆ. ಒಬ್ಬೊಬ್ಬರಿಗೆ ಒಂದೊಂದು ಕರ್ತವ್ಯವನ್ನು ಸೂಚಿಸಿ, ನೀಲಾಂಬಿಕೆಯನ್ನು ಸಂಗಮಕ್ಕೆ ಬರಹೇಳುತ್ತಾರೆ. ಅದೂ ಸಹ ಪತ್ನಿಯೆಂಬ ವ್ಯಾಮೋಹದಿಂದಲ್ಲ, ಆಧ್ಯಾತ್ಮಿಕ ಸಂಗಾತಿ ಪಾರಮಾರ್ಥಿಕ ಪಥಿಕಳು ಎಂಬ ಭಾವದಿಂದ. ಏಕೆಂದರೆ ಬಹಳಷ್ಟು ಹಿಂದೆಯೇ ಅವರ ನಡುವಿನ ದಾಂಪತ್ಯ ಸಂಬಂದ ಕೊನೆಗೊಂಡಿತ್ತು. ವಿಚಾರ–ಸಾಧನೆ–ಸಿದ್ಧಿ-ಧರ್ಮಪ್ರಚಾರ ಎಲ್ಲದರಲ್ಲಿಯೂ ಸಹಯಾತ್ರಿಕಳಾದ ಆಕೆಯ "**ಸಹಯೋಗ**" ಬಯಸಿ ಕರೆಯ ಕಳುಹಿಸಿದ್ದಾರೆ. ಹಡಪದ ಅಪ್ಪಣ್ಣನವರ ಒಡಗೂಡಿ ತಾಯಿ ನೀಲಾಂಬಿಕೆ ಪ್ರಯಾಣ ಮಾಡುತ್ತ ತಂಗಡಗಿ (ಅಥವಾ ತಂಗಿ ಅಡಗಿದ ಗ್ರಾಮ ತಂಗಡಗಿ ಎಂದು ಹೆಸರು ಬಂದಿರಬಹುದಾದರೆ ಬೇರೆ ಯಾವುದಾದರೂ ಹೆಸರು ಇರಬಹುದು) ಗ್ರಾಮಕ್ಕೆ ಅಥವಾ ನದಿಯ ದಡಕ್ಕೆ ಬಂದು ತಲ್ಪಿದ್ದಾಳೆ. ಅಷ್ಟರಲ್ಲಿ ಬಸವಣ್ಣನವರು ಲಿಂಗೈಕ್ಯರಾದ ವಾರ್ತೆಯು ಬಂದು ತಲುಪುತ್ತದೆ. ದೇಹ ವಿಸರ್ಜನೆ ಮಾಡಿ ಲಿಂಗೈಕ್ಯರಾದ ಬಳಿಕ ಇನ್ನು ಏತಕ್ಕೆ ತಾನಲ್ಲಿಗೆ ಹೋಗಬೇಕು ?

ಆಗ ಆಕೆ ಪೂಜೆಗೆ ಕುಳಿತುಕೊಂಡು ಹೀಗೆ ಹಾಡುತ್ತಾಳೆ:
ನೋಡು ನೋಡು ನೋಡು ನೋಡು ನೋಡು ಲಿಂಗವೇ
ನೋಡ ಬಸವಣ್ಣನವರು ಮಾಡಿದಾಟವ ॥

"ದೇವಾ ನೋಡು; ಬಸವಣ್ಣನವರು ಮಾಡಿದ ದೈವೀಲೀಲೆಗಳನ್ನು"
ಹರಳಯ್ಯ ಮಧುವಯ್ಯನವರಿಗೆ ಎಳಹೂಟೆ
ದುರುಳ ಬಿಜ್ಜಳನು ಕಟ್ಟಿದನೆಂದರೆ
ಇರಬಾರದಲ್ಲೀಗ ಶರಣರಿಗರುಹಿರೆಂ
ದರಸು ಬಸವರಾಜ ಪೇಳ್ದನಂತೆ ॥

"ಹರಳಯ್ಯ-ಮಧುವರಸರಿಗೆ ಆನೆಯ ಕಾಲಿಗೆ ಕಟ್ಟಿ ಎಳೆಸುವ ಶಿಕ್ಷೆಯನ್ನು ದುರುಳನಾದ ಬಿಜ್ಜಳನು ಕೊಟ್ಟಿರುವ ಕಾರಣ, ಅಲ್ಲಿ ಉಳಿದ ಪ್ರಮುಖ ಶರಣರು ಹಿಂಸೆಗೆ ಒಳಗಾಗುವ ಬದಲು, ಸಾಹಿತ್ಯವು ವಿರೋಧಿಗಳ ಕೈಗೆ ಸಿಕ್ಕಿ ನಾಶವಾಗುವಂತೆ ಮಾಡುವ ಬದಲು ಅಲ್ಲಿಂದ ಹೊರಡುವುದು ಒಳ್ಳೆಯದು.

ನುಡಿಯ ಲಾಲಿಸು ಬೇಗ ಕೆಡುವುದೀ ಕಲ್ಯಾಣ
ಒಡೆಯ ಸಂಗಮನೊಳು ಬೆರೆದನಂತೆ ।
ತಡಮಾಡ ಬೇಡಿರಿ ಮಡದಿಯರಿಗರುಹಿರೆಂದು
ಒಡೆಯ ಬಸವರಾಜ ನುಡಿದನಂತೆ ॥

"ಬಸವಣ್ಣನವರು ಭವಿಷ್ಯದ ವಾಣಿಯನ್ನು ನುಡಿದು, (ಶರಣರನ್ನು ನೋಯಿಸಿದ ಕಾರಣ)(1) ಕಲ್ಯಾಣವು ಕೆಡುವುದು ಎಂದು ಹೇಳಿ, ಸಂಗಮನಲ್ಲಿ ಬೆರೆದನಂತೆ.(2) ತಡಮಾಡದೆ ಮಡದಿಯರಿಗೂ ತಿಳಿಸಿರಿ ಎಂದು ಹೇಳಿಕಳುಹಿಸಿದನಂತೆ.

"ಅಲ್ಲಿಗೆ ಎಮ್ಮನು ಬರಲು ಹೇಳಿದರಂತೆ
ಅಲ್ಲಿರ್ಪ ಸಂಗಯ್ಯನಿಲ್ಲಿಲ್ಲವೇ ?
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವಿದು
ಬಲ್ಲ ಮಹಾತ್ಮರಿಗಿದು ತರವೆ ?"

ಅಲ್ಲಿಗೆ ಬರಲು ನಮಗೆ ಹೇಳಿಕಳುಹಿಸಿದ್ದು ನಿಜ. (ಅದಕ್ಕಾಗಿಯೇ ನಾನು ಕಲ್ಯಾಣದಿಂದ ಇಲ್ಲಿಯತನಕ ಪಯಣಿಸಿ ಬಂದೆ.) ಆದರೆ ಈಗ ಬಸವಣ್ಣನವರು ದೇಹಧಾರಿಯಾಗಿ ಇಲ್ಲ. ಶರೀರ ವಿಸರ್ಜನೆ ಮಾಡಿ, ಸಂಗಮನಲ್ಲಿ ಒಂದಾಗಿದ್ದಾರೆ. ಈಗ ಅವರು "ಬಸವಣ್ಣ" ಎಂಬ ಶರೀರದ ಜೊತೆಯಲ್ಲಿಲ್ಲದೆ, ಸಂಗಮನೆಂಬ ಶರಧಿಯಲ್ಲಿ ಒಂದಾಗಿದ್ದಾರೆ. ಈಗ ನಾನು ಏತಕ್ಕಾಗಿ ಆ ಸ್ಥಳಕ್ಕೆ ಹೋಗಲಿ ? ಅವರ "ದೇಹ ದರ್ಶನ" ಪಡೆಯಲಿಕ್ಕೆ ? ಅವರನ್ನು

---

(1) ಅರಸು ವಿಚಾರ, ಸಿರಿಯು, ಶೃಂಗಾರ ಸ್ಥಿರವಲ್ಲ ಮಾನವಾ,
ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ.
ಒಬ್ಬ **ಜಂಗಮದಭಿಮಾನದಿಂದ** (ಶರಣನ ನೋವಿನಿಂದ)
ಚಾಳುಕ್ಯರಾಯನ ಆಳ್ವಿಕೆ ತೆಗೆದಿತ್ತು.
ಸಂದಿತ್ತು ಕೂಡಲ ಸಂಗಮದೇವಾ, ನಿಮ್ಮ ಕವಳಿಗೆಗೆ. (ಬ.ಪ.ವ. ೬೨೪)

(2) ನೀಲಾಂಬಿಕೆ ತಂಗಡಗಿಯನ್ನು ತಲ್ಪುವಷ್ಟರಲ್ಲಿ ಬಸವಣ್ಣನವರು ಸಂಗಮನಲ್ಲಿ ಬೆರೆದರು, ಐಕ್ಯರಾದರು ಎಂಬುದು ಈ ವಾಕ್ಯದಿಂದ ಅತ್ಯಂತ ಸ್ಪಷ್ಟವಾಗುತ್ತದೆ.

ಅಡಗಿಸಿಕೊಂಡ ಸಂಗಮನು ಸರ್ವವ್ಯಾಪಿಯಾಗಿ, ಸರ್ವಾಂತರ್ಯಾಮಿಯಾಗಿ ಇಲ್ಲಿಯೂ ಇದ್ದಾನೆ ಅಲ್ಲವೆ? ಅಂದಾಗ ಅಲ್ಲಿ-ಇಲ್ಲಿ ಎಂಬ ಸಂದೇಹವಿದು ನನ್ನಂತಹ ತಿಳಿದವರಿಗೆ ಸರಿಯೆ ?

[ಬಸವಣ್ಣನವರಿಗೆ ಕೂಡಲ ಸಂಗಮನಾಥನೆಂಬ ಸ್ಥಾವರಲಿಂಗದ ಮೋಹ, ಕೂಡಲ ಸಂಗಮಕ್ಷೇತ್ರ ಮೋಹ ಹೋಗಿರಲಿಲ್ಲ. ಅದಕ್ಕಾಗಿಯೇ ನೀಲಾಂಬಿಕೆ ಬಸವಣ್ಣನವರಿಗೆ ಬುದ್ಧಿ ಹೇಳಿದಳು ಎಂದು ಕೆಲವರು ಹೇಳುವುದುಂಟು. ಕೆಲವು ಸ್ತ್ರೀ ಲೇಖಕರು ಬಸವಣ್ಣನವರಿಗಿಂತಲೂ ನೀಲಾಂಬಿಕೆಯೇ ಜ್ಞಾನಿ ಎಂದು ಸ್ತ್ರೀಕುಲದ ಹಿರಿಮೆ ಸಾರಲೋಸುಗ ಹೀಗೆ ಹೇಳುವುದುಂಟು. ಬಸವಣ್ಣನವರ ತತ್ತ್ವ, ಸಿದ್ಧಾಂತ, ಸಾಧನೆಗಳನ್ನೇ ಇವರೆಲ್ಲಾ ಅನುಷ್ಠಾನಿಸಿದ್ದು, ಎಂಬುದನ್ನು ನಾವು ಮರೆಯಬಾರದು. ಸಂಗಮಕ್ಕೆ "ಕೂಡಲ ಸಂಗಮನಿಗಾಗಿ ಬರುವುದೇಕೆ ? ಇಲ್ಲಿಯೇ ಇದ್ದಾನೆ" ಎಂಬ ಮಾತನ್ನು ನೀಲಾಂಬಿಕೆ ಬಸವಣ್ಣನವರಿಗೆ ಹಿತೋಪದೇಶವೆಂದು ಹೇಳುವುದೇ ಆಗಿದ್ದರೆ ಅದನ್ನು ಆಕೆ ಕಲ್ಯಾಣದಲ್ಲಿ ಇದ್ದುಕೊಂಡೇ ಹೇಳುತ್ತಿದ್ದಳು ; ತಂಗಡಗಿಯವರೆಗೆ ಬಂದು ಹೇಳುವ ಅವಶ್ಯಕತೆ ಇರಲಿಲ್ಲ.

ಅಪ್ಪ ಅಣ್ಣಯ್ಯಗಳು ಕರೆಯಲು ಬಂದಿಹರು
ಕಪ್ಪಡಿ ಸಂಗಮನಾಥ ಕೇಳೋ ॥
ಪುಷ್ಪಕ್ಕೆ ಪರಿಮಳ ಬೆರೆದಂತೆ ಎನ್ನ
ನಪ್ಪಿದ ಲಿಂಗವೇ ಮಾತನಾಡೋ ॥

" ಹಡಪದ ಅಪ್ಪಣ್ಣನವರು ಕರೆಯಲು ಬಂದಿದ್ದಾರೆ. ಸಂಗಮನಾಥಾ ಕೇಳಿಲ್ಲಿ, ಪುಷ್ಪದಲ್ಲಿ ಪರಿಮಳವು ಅಂತರ್ಗತವಾಗಿ ಇರುವಂತೆ, ನೀನು ನನ್ನಲ್ಲಿ ಇದ್ದೀಯ.

ಬಹುಶಃ ನೀಲಾಂಬಿಕೆಯು ಪೂಜೆಗೆ ಕುಳಿತಿರುವಾಗ ಇಷ್ಟಲಿಂಗ ದರ್ಪಣದಲ್ಲಿ ಬಸವಣ್ಣನವರ ದಿವ್ಯರೂಪ ಗೋಚರವಾಗಿ ನಿರೂಪವೊಂದನ್ನು ನೀಡಿರಲಿಕ್ಕೂ ಸಾಕು. [ಅಥವಾ, ಹಡಪದ ಅಪ್ಪಣ್ಣನವರ ಕೈಲಿ " ನನ್ನ-ಸನಿಹದಲ್ಲಿ ಇರಲಿ. ಹೋಗಿ ಕರೆದುಕೊಂಡು ಬನ್ನಿ" ಎಂದು ಬಸವಣ್ಣನವರು ಹೇಳಿಕಳಿಸಿದ್ದನ್ನೇ ನಿರೂಪವೆಂದು ತಿಳಿದಿರಲಿಕ್ಕೂ ಸಾಕು."] ಆಗ ಹೇಳುವಳು :

ಸಂಗನ ಬಸವನ ನಿರೂಪವ ತಾಳುತೆ
ಹಿಂಗದೆ ಕರವೆತ್ತಿ ನಮಿಸುತಲಿ
ಸಂಗನ ಬಸವಯ್ಯನಾತನೆ ಈತ । ಎ
ನ್ನಂಗಯ್ಯ ಲಿಂಗವೆ ಮಾತನಾಡೋ ॥

" ಬಸವಣ್ಣನವರ ನಿರೂಪದಂತೆಯೇ (ಸಂದೇಶ, ಆಜ್ಞೆ) ನಾನೀಗ ಅವರ ಸನ್ನಿಧಿ ಸೇರಲು ಉದ್ಯುಕ್ತಳಾಗಿದ್ದೇನೆ. ಎನ್ನಂಗೈಯ್ಯಲ್ಲಿ ಇರುವ ಲಿಂಗದೇವನೆ, ನಿನ್ನಲ್ಲಿಯೇ ಬಸವಣ್ಣನವರು ಇದ್ದಾರೆ. ನಿನ್ನಲ್ಲಿ ಬೆರೆವ ಮೂಲಕ ಅವರ ಸಾಮೀಪ್ಯ ಸೇರುವೆ."

ಇಂಥ ನಿರ್ಲಿಪ್ತಪ್ರಜ್ಞೆ, ಶಿವಭಾವದಿಂದ ನೀಲಾಂಬಿಕೆಯು ತಾನೂ ದೇಹವನ್ನು ವಿಸರ್ಜಿಸಿ ಲಿಂಗೈಕ್ಯಳಾಗುತ್ತಾಳೆ. ಈ ಗೀತೆಯಿಂದ ಸ್ಪಷ್ಟವಾಗುವ ಅಂಶಗಳೆಂದರೆ ಬಸವಣ್ಣನವರು ಲಿಂಗೈಕ್ಯರಾದ ಸುದ್ದಿ ನೀಲಾಂಬಿಕೆ ತಂಗಡಗಿ ತಲುಪುವುದರಲ್ಲಿ ಮುಟ್ಟಿದೆ. ಆಕೆ

ಬಸವಣ್ಣನನ್ನು "ದೇಹ" ರೂಪದಲ್ಲಿ ಕಾಣಲು ಬಯಸದೆ, ಜ್ಞಾನ ದೃಷ್ಟಿಯಿಂದ ದರ್ಶಿಸಿ, ದೇಹ ವಿಸರ್ಜಿಸಿ ಲಿಂಗೈಕ್ಯಳಾಗಿದ್ದಾಳೆ.

"ಹೀಗಾಗಿ ಬಹಳಷ್ಟು ವಚನಗಳು ಬಸವ ವಿರಹದಿಂದ ಬಳಲುವುದಕ್ಕೆ ಬೇರೊಂದು ಕಾರಣವಿರಬೇಕು. ಅದು ಬಹುಶಃ ಅವಳಿಗೆ ನಡುವಯಸ್ಸಿನಲ್ಲಿಯೇ ಗಂಡನ ಲೈಂಗಿಕ ಸಂಬಂಧ ತಪ್ಪಿಹೋದುದಾಗಿರಬೇಕು". ಶ್ರೀ ಕಲಬುರ್ಗಿಯವರ ವಿವರಣೆ ಅತ್ಯಂತ ಕೆಳಮಟ್ಟಕ್ಕೆ ಇಳಿದಿದೆ. ಅವರ "ಧ್ವನಿ" ಯಲ್ಲಿ ಉದಾತ್ತತೆ ಇದ್ದಿರಬಹುದು. ಆದರೆ ಆ ಉದಾತ್ತತೆಯನ್ನು ನಿರೂಪಿಸಿರುವ ವಾಕ್ಯರಚನೆ ಅತ್ಯಂತ ಕೆಳಮಟ್ಟದ್ದಾಗಿದೆ. ಕಾರಣವೆಂದರೆ, ಶರಣರ ಜೀವನದಲ್ಲಿ ಅಳವಡಬಹುದಾದ ಉದಾತ್ತೀಕರಣ (Sublimation)ದ ಕಲ್ಪನೆ ತಿಳಿಯದಿರುವುದು.

"ಬಸವಣ್ಣ-ನೀಲಾಂಬಿಕೆ" ಯಾವುದಾದರೂ ಅನಿವಾರ್ಯತೆಗೆ ಒಳಗಾಗಿ ವೈರಾಗ್ಯ ತಾಳಲಿಲ್ಲ. ಅಥವಾ ಬಸವಣ್ಣ, ಹೆಂಡತಿಯನ್ನು ತೊರೆದು ಹೋಗಿ ಸನ್ಯಾಸಿಗಳಾಗುವವರಂತೆ, ತಾನು ಸನ್ಯಾಸಿಯಾದ್ದರಿಂದ ಲೈಂಗಿಕ ಅತೃಪ್ತಿಗೆ ಆಕೆ ಒಳಗಾಗಬೇಕಾಗಿರಲಿಲ್ಲ. ಉಭಯತರು ಸಹಮತದಿಂದಲೇ ಬ್ರಹ್ಮಚರ್ಯದ ಜೀವನವನ್ನು ಸ್ವೀಕರಿಸಿದ್ದಾರೆ. ಅವರು ಸಾಮಾಜಿಕ-ಧಾರ್ಮಿಕವಾಗಿ ಮದುವೆಯಾದ ದಂಪತಿಗಳಾದ್ದರಿಂದ ಒಂದು ವೇಳೆ ಮಾನಸಿಕವಾಗಿ ಸಂಯಮ ಧರಿಸಲಾರದೆ, ಲೈಂಗಿಕ ಆಕರ್ಷಣೆಗೆ ಒಳಗಾಗಿ ಮತ್ತೆ ಕೂಡಿದ್ದರೂ ಅದೇನೂ ಧರ್ಮಬಾಹಿರವಾಗಲೀ ನಿಂದನೀಯವಾಗಲೀ ಆಗುತ್ತಿರಲಿಲ್ಲ.

ಈ ಕಠಿಣದಾರಿ, ಅವರಿಗೆ ಕಠಿಣವೆನ್ನಿಸಿರಲಿಕ್ಕಿಲ್ಲ. ಸ್ವಯಂ ಸ್ಫೂರ್ತಿ ಪ್ರೇರಣೆಯಿಂದಲೇ, ಪರಸ್ಪರ ಸಮಾಲೋಚಿಸಿಯೇ ಅವರು ವೈರಾಗ್ಯದ ಹಾದಿ ಹಿಡಿದಿದ್ದಾರೆ. ಅದರಲ್ಲಿ ತೃಪ್ತಿಯನ್ನು ಕಂಡುಕೊಂಡಿದ್ದಾರೆ. ತಮ್ಮ ಸಂಯಮ ಶಕ್ತಿಗೆ ಆಶ್ಚರ್ಯಪಟ್ಟಿದ್ದಾರೆ, ಹೆಮ್ಮೆ ಪಟ್ಟಿದ್ದಾರೆ. ಹೀಗಾಗಿ "ಬಸವ ವಿರಹ" ಎಂಬ ಶಬ್ದಕ್ಕಾಗಲೀ, ಗಂಡನ ಲೈಂಗಿಕ ಸಂಬಂಧ ತಪ್ಪಿಹೋದುದಕ್ಕಾಗಿ ಎಂಬ ಶಬ್ಧಕ್ಕಾಗಲೀ ಏನೂ ಅರ್ಥವಿಲ್ಲ. ಇವು ಅವರ ದಾಂಪತ್ಯದ ಮರ್ಮ, ಔನ್ನತ್ಯ ಅರಿಯದ ಬಾಲಿಶ ಮಾತುಗಳು. ಹಾಗಾದರೆ ನೀಲಾಂಬಿಕೆಯ ಹೆಚ್ಚಿನ ವಚನಗಳಲ್ಲಿ ಬಸವಣ್ಣನವರ ನೆನಹೂ, ಹೊಗಳಿಕೆ ಇರುವುದು ಏತಕ್ಕಾಗಿ? "ಬಸವ ವಿರಹ" ದಿಂದಲ್ಲ, ಬಸವಣ್ಣನ ಬಗ್ಗೆ ಇರುವ ಗೌರವದಿಂದ. ಅಲ್ಲಿ ವ್ಯಕ್ತವಾಗಿರುವುದು ವಿರಹವಲ್ಲ, ತುಂಬು ಗೌರವ!! ಲೈಂಗಿಕ ಸಂಬಂಧ ತಪ್ಪಿಹೋದುದಕ್ಕೆ ಹಳಹಳಿಯಿಲ್ಲ. ಬಸವಣ್ಣನವರ ವೈರಾಗ್ಯಶೀಲತೆ, ಸಂಯಮ ಶಕ್ತಿಯನ್ನು ಕಂಡು ಸೋಜಿಗ, ಬೆರಗು, ಜೊತೆಗೆ ತಾನು ಅವರ ಮಟ್ಟಕ್ಕೆ ಏರಲಾರದ ನಿಸ್ಸಹಾಯಕತೆಯಾಗಲಿ, ಯಾವುದೋ ಸುಖ ದೊರೆಯುದ್ದಕ್ಕೆ ತಾನು ವಂಚಿತೆ ಎಂಬ ಭಾವವಾಗಲಿ ಇಲ್ಲ. ಸಂತೋಷದಿಂದಲೇ ತನ್ನ ಅನುಭವವನ್ನ ಹೀಗೆ ಹೇಳುತ್ತಾಳೆ :

೧. ಕೂಟವಿಲ್ಲದ ಪುರುಷನ ಕಂಡು ಕಾಮದ ಆತುರ ಹಿಂಗಿತ್ತೆನಗೆ. (೮೬)

೨. ಬಸವನ ಅನುಭಾವದಿಂದ ವಿವರವ ಕಂಡು
ವಿಚಾರ ಪತ್ನಿಯಾದೆನಯ್ಯಾ (Intellectual companion) (೧೦೩)

ಡಾ॥ ಕಲಬುರ್ಗಿಯವರ ಕೆಲ ಮಾತುಗಳು "ಆ ಕ್ಷಣದಿಂದ ಅವರು ತಾಯಿ ಮಗನಂತೆ ನಡೆದುಕೊಂಡರು. ಕೇವಲ ತಾಯಿಯಲ್ಲ ಲೋಕದ ತಾಯಿಯಾದ ಪಾರ್ವತಿಯೆಂದು ಅವಳನ್ನು ಬಸವಣ್ಣ ಪೂಜಿಸ ತೊಡಗಿದ, ಪೂಜ್ಯಭಾವದಿಂದ ಕಾಣತೊಡಗಿದ" ಎಂಬ ಮಾತು ಉದಾತ್ತ ಸಂಭಂಧವೊಂದನ್ನು, ಸ್ಥಿತಿಯೊಂದನ್ನು ಹೇಳುತ್ತಿವೆ.

ಆದರೂ "ವಚನಗಳಲ್ಲಿ ಅವಳ ಪತಿತ್ಯಕ್ತ ಜೀವನದ ಲೌಕಿಕ ನೋವು ಅಲೌಕಿಕ ಸಿದ್ಧಿಗಳು ಕೇಳಿಸುತ್ತವೆ. ಆದುದರಿಂದ ಅವಳ ವಚನಗಳಲ್ಲಿ ಬಹಳಷ್ಟು ಸಲ ಸ್ಪಂದಿಸುವ ಬಸವನ ಅಗಲಿಕೆಯ ಧ್ವನಿ. ಆತನ ನಿಧನದ ಧ್ವನಿಯಾಗಿರದೆ, ನಡುವಯಸ್ಸಿನಲ್ಲಿಯೇ ಅವನಿಂದ ಅಗಲಿದ ವ್ಯಥೆಯಾಗಿರಬಹುದೆನಿಸುತ್ತದೆ" ಎಂಬ ಮಾತುಗಳು ಬಸವಣ್ಣ-ನೀಲಾಂಬಿಕೆಯ ಸಂಬಂಧದ ಎತ್ತರವನ್ನು ಗುರುತಿಸಲಾರದೆ, ಅಳೆಯಲಾರದೆ ಸೋಲುತ್ತವೆ. ಅವರು ಪರಸ್ಪರ ದೈಹಿಕ ಕಾಮಸಂಬಂಧವನ್ನು ತೊರೆದು, ಆಧ್ಯಾತ್ಮಿಕ ಶುದ್ಧ ಸಂಬಂಧವನ್ನು ಉಳಿಸಿಕೊಂಡರು. ಅಂದಾಗ ಪತಿತ್ಯಕ್ತರಾಗುವ ಪ್ರಶ್ನೆಯಿಲ್ಲ. ಕಾಮ ಸಂಬಂಧವೊಂದೇ ಜೀವನದ ಆತ್ಯಂತಿಕ ಗುರಿ ಎಂಬುವವರಿಗೆ, ಈ ಕೊರತೆ ಬಹು ದೊಡ್ಡ ಕೊರತೆಯಾಗಿ ತೋರಬಹುದು. ಬಸವಣ್ಣ ನೀಲಾಂಬಿಕೆಯರಿಗಲ್ಲ. ಅವರ ಪರಿಶುದ್ಧ ಪ್ರೇಮ, ಕಾಮವಿರಹಿತ ಪ್ರೇಮ, ತಾಯಿ-ಮಗ, ತಂದೆ-ಮಗಳ ವಾತ್ಸಲ್ಯ ಸಂಭಂಧ, ಗುರು-ಶಿಷ್ಯೆಯರ ಪೂಜ್ಯ ಸಂಬಂಧ ಅವರನ್ನು ಇನ್ನು ಹೆಚ್ಚಾಗಿ ಬೆಸೆದಿದೆ. ದೈಹಿಕವಾಗಿ ದೂರ ದೂರವಾಗಿರುವ ಪ್ರಸಂಗ ಬಂದರೂ, ಆತ್ಮಿಕವಾಗಿ, ಆಂತರಂಗಿಕವಾಗಿ ಅಗಲಲಾರದ ಸಂಬಂಧವನ್ನು ಏರ್ಪಡಿಸಿದೆ.

ಆದ್ದರಿಂದ ಅಗಲಿಕೆ, ವ್ಯಥೆ, ವಿರಹ, ನೋವು ಇವು ಡಾ॥ ಕಲಬುರ್ಗಿಯವರು ಹುಡುಕಿದ ಭಾವನೆಗಳೇ ವಿನಾ, ಬಸವಣ್ಣನವರು-ನೀಲಾಂಬಿಕೆ ಈ **ಮಟ್ಟವನ್ನು ದಾಟಿ** ಮೇಲೇರಿದ್ದವರು.

ಅಸಾಧ್ಯವಾದುದೊಂದನ್ನು ಸಾಧಿಸಿದ ಬಸವಣ್ಣನವರನ್ನು ಕುರಿತು ಅಪಾರವಾದ ಗೌರವ, ತನ್ನನ್ನೂ ಆ ಮಟ್ಟಕ್ಕೆ ಏರಿಸಿಕೊಂಡುದರ ಬಗ್ಗೆ ಕೃತಜ್ಞತೆ. ಇವು ಹೊನಲಾಗಿ ನೀಲಾಂಬಿಕೆಯ ವಚನಗಳಲ್ಲಿ ಹರಿದಿವೆಯೇ ವಿನಾ ಕಾಮ-ಪ್ರೇಮ, ವಿರಹ-ವ್ಯಥೆಗಳಲ್ಲ. ಕಾರಣವೆಂದರೆ ಅವರು ಉಭಯತರ ಕಾಮ-ಪ್ರೇಮ, ವಿರಹ-ವ್ಯಥೆಗಳು ಲಿಂಗಪತಿಯ ಕಡೆಗೆ ಹರಿದು ಉದಾತ್ತೀಕರಣಗೊಂಡಿವೆ, ದೈವೀಕರಣಗೊಂಡಿವೆ.

- ಸದ್ಗುಣಗಳನ್ನು ಮೈಗೂಡಿಸಿಕೊಳ್ಳಲು ನಾವು ಯಾವಾಗಲೂ ಪ್ರಯತ್ನಿಸುವುದು ಯೋಗ್ಯ. ಬರೀ ಆಡಂಬರದಿಂದ ಏನು ಪ್ರಯೋಜನ? ಕೇವಲ ಆಕಳ ಕೊರಳೊಳಗಿನ ಘಂಟೆಗಳ ಮಾನದಿಂದ ಅವುಗಳ ಉಪಯುಕ್ತತೆ ಅಳೆಯಲಾಗುವುದಿಲ್ಲ. ಅವು ಎಷ್ಟು ಹಾಲು ಕೊಡುವವೋ ಅವುಗಳ ಮಾನದಿಂದ ಬೆಲೆ ಕಟ್ಟಿ ಅವು ಮಾರಲ್ಪಡುತ್ತವೆ.

— ಶಾರ್ಙ್ಗಧರ ಪದ್ಧತಿ

ಧರ್ಮ ಸೂಕ್ತ - ಭಾಗ ೬

– ಎನ್ ಜಿ ಜಾಡಗೌಡರ (ನೀಲಕಂಠ)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

೪೩. ಪೂರ್ವಕಾಲದ ಪುಣ್ಯಪುರುಷರ ಆದರ್ಶವನ್ನು ಗಳಿಸುವುದೇ ಇಂದಿನ ಭಾರತ ಮಕ್ಕಳ ಕರ್ತವ್ಯ.

ಈ ವಿಶಾಲ ಪ್ರಪಂಚದಲ್ಲಿ ಮಾನವನು ಅನಂತ ದೃಷ್ಟಿಗಳಿಂದ ದೇವರನ್ನು ಕಾಣಲು ಹವಣಿಸುತ್ತಿದ್ದಾನೆಂಬುದು ಕೆಲವು ಗ್ರಂಥಗಳ ಮೂಲಕ ತಿಳಿದುಬರುತ್ತಿದೆ. ಅವರವರ ದೃಷ್ಟಿಗನುಗುಣವಾಗಿ ಇಚ್ಛಾಶಕ್ತಿ, ಜ್ಞಾನಶಕ್ತಿ, ಯೋಗಶಕ್ತಿ, ಭಕ್ತಿಯ ಶಕ್ತಿಯಂತೆ ದೇವರು ಸಾಕಾರವಾಗಿ, ನಿರಾಕಾರವಾಗಿ, ಸಗುಣವಾಗಿ, ನಿರ್ಗುಣವಾಗಿ, ದ್ವೈತವಾಗಿ, ಅದ್ವೈತವಾಗಿ, ನಾಮದಲ್ಲಿ, ಕ್ರಿಯೆಯಲ್ಲಿ ರೂಪುಗೊಂಡು ಅಥವಾ ನಾಮವಿಲ್ಲದೆ ನಿಷ್ಕ್ರಿಯವಾಗಿ ರೂಪವಿಲ್ಲದೆ ಅನುಭವಕ್ಕೆ ಬಂದಿದ್ದಾನೆ. ದೇವರ ಸಾಕ್ಷಾತ್ಕಾರ ಪಡೆದು ನಾವೊಬ್ಬರೇ ಮುಕ್ತಿ ಪಡೆಯುವುದು ಅಷ್ಟೊಂದು ಉದಾರತನವಲ್ಲ, ಶ್ರೇಷ್ಠವಾದ ಆಧ್ಯಾತ್ಮಿಕ ವಿದ್ಯೆಯನ್ನು ಜನರಿಗೆ ಹಂಚಿಕೊಡಲು ಪ್ರಯತ್ನಿಸಬೇಕು. ಎಂದಿಗೂ ನಾಶವಾಗದ ಆಧ್ಯಾತ್ಮಿಕ ಚಿಲುಮೆಯು ನಮ್ಮ ಶಾಸ್ತ್ರದಲ್ಲಿದೆ. ಈ ಪುಣ್ಯಭೂಮಿಯನ್ನು ಬಿಟ್ಟರೆ ಮತ್ತೆಲ್ಲಿಯೂ ಆಧ್ಯಾತ್ಮವನ್ನು ಅನುಷ್ಠಾನದಲ್ಲಿರಿಸುವಂತಹ ದೃಷ್ಟಾಂತ ಕಂಡುಬರುವುದಿಲ್ಲ. ಕೇವಲ ಮಾತನಾಡುವುದರಲ್ಲಿ ಧರ್ಮವುಳಿದಿದೆ. ಗಿಳಿಗಳೂ ಮಾತನಾಡುತ್ತವೆ. ಪ್ರಸ್ತುತ ಸಮಯದಲ್ಲಿ ಯಂತ್ರವೂ ಮಾತನಾಡುವುದು ; ಆದರೆ ತ್ಯಾಗ ಜೀವನವನ್ನು ತೋರಿ, ಅಪಾರಪ್ರೇಮ ಜೀವನವನ್ನು ತೋರಿ ಮುಕ್ತಿಯ ಮಾರ್ಗವನ್ನು ಕಂಡುಹಿಡಿಯುವುದೇ ಆಧ್ಯಾತ್ಮಿಕ ಜೀವನದ ಲಕ್ಷಣ. ಇಂತಹ ಆಧ್ಯಾತ್ಮಿಕ ಜೀವನದ ಅಸ್ತಿತ್ವವನ್ನು ಕೇವಲ ಭಾರತಕ್ಕಷ್ಟೇ ಅಲ್ಲ ; ಪ್ರಪಂಚದ ಮೂಲೆ ಮೂಲೆಗೂ ಇದನ್ನು ಸಾರುವುದು ನಮ್ಮ ಪರಮ ಕರ್ತವ್ಯವಾಗಿದೆ.

ಅಗ್ರಸ್ಥಾನ ಇವನಿಗೇಕೆ ? ನನಗೇಕೆ ಇಲ್ಲ ? ದೇವರ ಪೂಜೆಯಲ್ಲಿ ನನಗೆ ಅಗ್ರಸ್ಥಾನ ಬೇಕು. ಇಂತಹ ಸಣ್ಣ ಭಾವನೆಗೆ ಬಂದಿರುವವು ನಾವಿಲ್ಲಿ. ಅಧಿಕಾರವುಳ್ಳವರು ಅನವಶ್ಯಕ ಪ್ರಸಂಗದಲ್ಲಿ ಕೂಡಾ ಆಜ್ಞಾಪಿಸುವವರೇ ಹೊರತು ಸಮಯೋಚಿತವಾಗಿ ಆಜ್ಞಾಧಾರಕರಾಗಲು ಕೆಲವರು ಇಚ್ಛಿಸುವುದಿಲ್ಲ. ಪೂರ್ವಕಾಲದ ಬ್ರಹ್ಮಚರ್ಯಾಶ್ರಮ ಈಗ ಇಲ್ಲದಿರುವುದೇ ಇದಕ್ಕೆ ಕಾರಣ. ಗುರು ಶಿಷ್ಯ ಭಾವನೆಯ ಕೊರತೆಯೇ ಇದಕ್ಕೆ ಕಾರಣ.

ನಮ್ಮ ಭಾರತವು ಧರ್ಮಗಳ ಮತ್ತು ದರ್ಶನಗಳ ಪುಣ್ಯಭೂಮಿ. ಹೆಸರುವಾಸಿಗಳಾದ ಮಹಾತ್ಮರು, ಋಷಿಗಳು ಜನ್ಮವೆತ್ತಿದ ನಾಡು, ತ್ಯಾಗಭೂಮಿ. ಕೇವಲ ಇಲ್ಲಿ ಮಾತ್ರ ಪುರಾತನ ಕಾಲದಿಂದ ಇಂದಿನವರೆಗೆ ಮಾನವನ ಎದುರಿಗೆ ಸರ್ವೋಚ್ಛ ಆದರ್ಶವಿರುವುದು. ಪೂರ್ವ

ಕಾಲದಿಂದ ತಿಳಿದು ಬರುವುದನ್ನು ಗಮನಿಸಿದರೆ ಭಾರತದ ಜೀವಾಳ ಕುಟಿಲ ರಾಜನೀತಿಯಲ್ಲ ವೆಂಬುದು ಕಂಡುಬರುತ್ತಿದೆ. ನಮ್ಮ ಜೀವಾಳ ಸೈನ್ಯಶಕ್ತಿಯಲ್ಲ ; ಆರ್ಥಿಕ ಪರಮಾಧಿಕಾರವಲ್ಲ ; ಯಾಂತ್ರಿಕದ ಒಡೆತನವಲ್ಲ ; ಧರ್ಮ ಮಾತ್ರ ನಮ್ಮಲ್ಲಿರುವದು ; ಅದನ್ನೇ ಆದರ್ಶವನ್ನಾಗಿಟ್ಟು ಕೊಂಡಿರುವೆವು. ಆಧ್ಯಾತ್ಮಿಕವೇ ಸದಾವಕಾಲದಲ್ಲಿಯೂ ಭಾರತೀಯರ ಅಮೂಲ್ಯ ನಿಧಿ ಯಾಗಿದೆ" ಎಂದು ಸ್ವಾಮೀ ವಿವೇಕಾನಂದರು ಉದ್ಗಾರ ತೆಗೆದಿದ್ದಾರೆ ; ಆದರೆ ಯಾಂತ್ರಿಕ ಶಕ್ತಿಯುಳ್ಳ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನಿಜವಾದ ಶಾಂತಿಯಿಲ್ಲ. ಆಧ್ಯಾತ್ಮಿಕದ ಕೊರತೆಯೇ ಇದಕ್ಕೆ ಕಾರಣ.

ಆಧ್ಯಾತ್ಮಿಕ ಆಹಾರಕ್ಕಾಗಿ ಅಖಿಲ ಪ್ರಪಂಚವು ಈ ಭಾರತದ ಕಡೆಗೆ ನೋಡುತ್ತಿದೆ. ಮಾನವ ಕೋಟಿಗೆ ಅತಿ ಶ್ರೇಷ್ಠ ಆದರ್ಶ ಇಲ್ಲಿ ಮಾತ್ರ ಇದೆ. ಸಂಸ್ಕೃತ ಸಾಹಿತ್ಯದಲ್ಲಿ ಮತ್ತು ದರ್ಶನಗಳಲ್ಲಿ ಹುದುಗಿರುವ ನಮ್ಮ ಭಾರತದ ಈ ಆದರ್ಶವನ್ನು ಪಾಶ್ಚಾತ್ಯ ವಿದ್ವಾಂಸರು ತಿಳಿದುಕೊಳ್ಳುತ್ತಲಿದ್ದಾರೆಂಬುದು ನಮ್ಮೆಲ್ಲರಿಗೂ ತಿಳಿದುಬಂದ ಸಂಗತಿಯಾಗಿದೆ. ಮಾನವ ಸಂಸಾರದ ಸಮಸ್ಯೆಗಳನ್ನು ಬಗೆಹರಿಸಲು ಸಿದ್ಧರಾಗಬೇಕಾದಂತಹ ಒಂದು ಗುರುತರದ ಕರ್ತವ್ಯ ಭಾರತರಾಷ್ಟ್ರದ ಮಕ್ಕಳ ಮೇಲೆ ಬಿದ್ದಿದೆ.

ಪ್ರಸ್ತುತ ಸಮಯದ ಮಕ್ಕಳು ನಮ್ಮ ಸ್ವರಾಜ್ಯವು ಸುರಾಜ್ಯವಾಗಬೇಕೆಂಬುದನ್ನು ಸ್ಮರಿಸಿಕೊಂಡು ಪೂರ್ವಕಾಲದ ಪುಣ್ಯಪುರುಷರ ಆದರ್ಶವನ್ನು ಪುನಃ ಗಳಿಸಲು ಸಿದ್ಧ ರಾಗಬೇಕು. ಇದುವೇ ಇಂದಿನ ಭಾರತ ಮಕ್ಕಳ ಆದ್ಯ ಕರ್ತವ್ಯ. ಈ ಕರ್ತವ್ಯ ನೆರವೇರಿಸಲು ಹಿಂಜರಿಯಬಾರದು.

೪೪. ವಿಶಾಲ ಹೃದಯವುಳ್ಳ ಮಾನವರ ಲಕ್ಷಣ.

ಐತಿಹಾಸಿಕ ಸಂಗತಿಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ, ಪ್ರಯಾಣಿಕರನ್ನು ಸುಲಿದು ದರೋಡೆ ಮಾಡುವ ಪಾಳೆಯಗಾರರ ವಂಶಕ್ಕೆ ಸೇರಿದವರೆಂದು ಪರದೇಶದವರು ಹೆಮ್ಮೆ ಪಟ್ಟುಕೊಳ್ಳುವರು ; ಆದರೆ ಗಿರಿ-ಗುಹೆಗಳಲ್ಲಿ ವಾಸಮಾಡಿ ಗೆಡ್ಡೆಗೆಣಸು ತಿಂದು ಬ್ರಹ್ಮಚಿಂತನೆ ಯಲ್ಲಿ ಕಾಲ ಕಳೆಯುತ್ತಿದ್ದ ಯೋಗಿಗಳ ವಂಶಕ್ಕೆ ಸೇರಿದವರೆಂದು ಭಾರತೀಯರು ಹೆಮ್ಮೆ ಪಡುವರು. ನಾವೀಗ ಅಧೋಗತಿಗಿಳಿದು ಪಶ್ಚಾತ್ತಾಪ ಪಡುತ್ತಿರಬಹುದು ; ಆದರೆ ನಮ್ಮ ಧರ್ಮದ ಪರವಾಗಿ ನಾವು ಶ್ರದ್ಧೆಯಿಂದ ಕೆಲಸ ಮಾಡಿದರೆ ಪುನಃ ಕೀರ್ತಿ ಗಳಿಸಲು ಸಾಧ್ಯ ವಿದೆ ; ಅದು ಇದೀಗ ಸ್ವರಾಜ್ಯ ಗಳಿಸಿದ ನಮ್ಮ ನಮ್ಮ ಭಾಗದಲ್ಲಿ ಸಮಾವೇಶಗೊಂಡು ಸ್ವಲ್ಪ ದಿನಗಳಲ್ಲಿ ಭಾರತೀಯರಾದ ನಾವು ಆದರ್ಶತನವನ್ನು ಪಡೆಯಬಹುದಾಗಿದೆ.

ಪೂರ್ವಿಜರು ನಿರೂಪಿಸಿದಂತೆ ಕೇವಲ ತೀರ್ಥಕ್ಷೇತ್ರಗಳಿಗೆಡತಾಕುವುದು ಸಮಂಜಸವಲ್ಲ ದಿದ್ದರೂ, ನಾವು ಪೂರ್ವಕಾಲದ ಕೆಲವು ಆದರ್ಶಗಳನ್ನನುಸರಿಸಲೇಬೇಕಾಗುತ್ತದೆ. " ಪುರಾಣ ಮಿತ್ಯೇವ ನ ಸಾಧು ಸರ್ವಂ." ಹಳೆಯದೆಲ್ಲವೂ ಒಳ್ಳೆಯದಲ್ಲವೆಂದು ಅದನ್ನು ಬಿಡಲಿಕ್ಕಾಗುವುದಿಲ್ಲ. ಸಮಯೋಚಿತವಾಗಿ ನಡೆದುಕೊಂಡು ಸದ್ಗತಿಯನ್ನು ಪಡೆಯುವುದ ರೊಂದಿಗೆ ರಾಷ್ಟ್ರಕಲ್ಯಾಣದ ಉದ್ದೇಶವೂ ಈಡೇರುವಂತೆ ಪರಿಶ್ರಮವಹಿಸಬೇಕು. ಕೇವಲ ತೀರ್ಥಕ್ಷೇತ್ರಗಳಲ್ಲಿ ಅಲೆದಾಡಿದರೆ ರಾಷ್ಟ್ರೋದ್ಧಾರದ ಉದ್ದೇಶವು ಈಡೇರುವುದಿಲ್ಲ.

ತೀರ್ಥವೆಂದರೆ ಪವಿತ್ರ ವಸ್ತುಗಳು ಇರುವ ಸ್ಥಳ. ಮಹಾತ್ಮರಿರುವ ಸ್ಥಳ. ಒಂದು ವೇಳೆ ದೇವಸ್ಥಾನವಿಲ್ಲದಿದ್ದರೂ ಶುದ್ಧವಾದ ನಿಷ್ಕಪಟ ಹೃದಯವುಳ್ಳ ಮಹಾತ್ಮರಿದ್ದರೆ ಆ ಮಹಾತ್ಮರಿದ್ದ ಸ್ಥಳವೇ ತೀರ್ಥಕ್ಷೇತ್ರವೆನಿಸುವುದು. ನೂರಾರು ದೇವಸ್ಥಾನಗಳಿದ್ದು, ಅಲ್ಲಿ ಅತಿ ಅಯೋಗ್ಯರು ವಾಸಮಾಡಿಕೊಂಡಿದ್ದರೆ ಅದು ತೀರ್ಥಕ್ಷೇತ್ರವೆನಿಸಲಾರದು. ಅಂತಹ ತೀರ್ಥಕ್ಷೇತ್ರದಲ್ಲಿ ಮಾಡಿದ ಪಾಪವನ್ನು ಪರಿಹರಿಸಿಕೊಳ್ಳಲಿಕ್ಕಾಗುವುದಿಲ್ಲ; ಆದ್ದರಿಂದ ತೀರ್ಥಕ್ಷೇತ್ರಗಳಿಗೆ ಹೋದಾಗ್ಗೆ ಬಹಳ ಜಾಗರೂಕತೆಯಿಂದ ವರ್ತಿಸಬೇಕು.

ಮೊಟ್ಟಮೊದಲು ನಾವು ಪರಿಶುದ್ಧರಾಗಿ, ಉಳಿದವರಿಗೆ ಒಳ್ಳೆಯದನ್ನು ಬೋಧಿಸಿ ಅವರಿಗೆ ಕಲ್ಯಾಣವನ್ನುಂಟುಮಾಡುವುದೇ ಪೂಜೆಯ ಉದ್ದೇಶವೆಂದು ಭಾವಿಸಬೇಕು. ವಿಗ್ರಹದಲ್ಲಿ ತನ್ನನ್ನು ಕಾಣುವುದಕ್ಕಿಂತ ನಿಜವಾದ ದೀನದಲಿತರಲ್ಲಿ ಶಿವನನ್ನು ಕಂಡು ಅವರಿಗೆ ಯಾರು ಸಹಾಯ ಮಾಡುವರೋ ಅವರಿಗೆ ದೇವರ ಕೃಪೆಯಿಂದ ಒಳ್ಳೆಯದಾಗುವದೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ನಮ್ಮ ಬೇಡಿಕೆಯಲ್ಲಿ ಸಕಲ ಜನತೆಯ ಕಲ್ಯಾಣದ ಅಂಶವಿರಬೇಕು. ನಮ್ಮ ಬೇಡಿಕೆಗಳಿಂದ ಪರಹಿತ ಸಾಧಿಸುವ ಸೂಚನೆಯಿರಬೇಕು. ಉದಾಹರಣೆಗಾಗಿ ಒಂದೆರಡು ದೃಷ್ಟಾಂತಗಳನ್ನು ತಿಳಿದುಕೊಳ್ಳಬಹುದು. (೧) ಐಶ್ವರ್ಯ ಮತ್ತು ಅಧಿಕಾರ ಬಂದಾಗ ಅಹಂಕಾರ ರಹಿತನಾಗಿ ವಿನಯದಿಂದ ನಡೆದುಕೊಳ್ಳುವ ಗುಣವನ್ನು ಕೇಳಿಕೊಳ್ಳಬೇಕು. (೨) ಜಗತ್ತಿನಲ್ಲಿ ಯುದ್ಧದ ಕಿಡಿ ಹೊತ್ತಿದಾಗ ವಿಶ್ವಶಾಂತಿಯನ್ನು ಕೇಳಿಕೊಳ್ಳಬೇಕು. (೩) ಅನಿಷ್ಟದೊಡನೆ ಹೋರಾಡಿ, ಇಷ್ಟಾರ್ಥ ಸಿದ್ಧಿಯನ್ನು ಪಡೆಯಲು ಶಕ್ತಿಯನ್ನು ಕೇಳಿಕೊಳ್ಳಬೇಕು. (೪) ಸದಾವಕಾಲ ಸದ್ಗುಣಗಳಿಂದ ಬಾಳಲು ಸಮರ್ಥರಾಗುವಂತೆ ಕೇಳಿಕೊಳ್ಳಬೇಕು. ಹೀಗೆ ಒಳ್ಳೇ ಬೇಡಿಕೆಗಳನ್ನು ಸಮಯೋಚಿತವಾಗಿ ಪೂರೈಸಲು ಪ್ರಾರ್ಥಿಸಿದಾಗ ಕೊನೆಗೆ ಜೀವ ಮತ್ತು ದೇವರ ಐಕ್ಯವಾಗುವುದು. ಇದುವೇ ಪ್ರಾರ್ಥನೆಯ ಮೂಲೋದ್ದೇಶವಾಗಿದೆ.

ಈ ಬಗೆಯ ದೃಢವಾದ ಪ್ರಾರ್ಥನೆಯಿಂದ ಕೃತಿಪ್ರಧಾನವಾದ ನೂತನ ಆದರ್ಶ ಸುಂದರತಮ ಸಮಾಜವನ್ನೂ, ಪ್ರೇಮ-ಸೌಹಾರ್ದತೆ, ಬಂಧುತ್ವಗಳಿಂದ ಒಡಗೂಡಿದ ಸಮಾಜವಾದಿ ರಾಷ್ಟ್ರವನ್ನೂ ಕಟ್ಟಲು ಸಹಾಯವಾಗುವಂತಿರಬೇಕು. ಸಂಕುಚಿತ ಮನಸ್ಸಿನಿಂದ, ನಿರರ್ಥಕವಾದ, ನಿರಸವಾದ, ನಿರುಪಯುಕ್ತವಾದ, ಹಾಸ್ಯಾಸ್ಪದವಾದ ಹೀನ ಸಂಗತಿಗಳಿಗಾಗಿ ದೇವರನ್ನು ಪ್ರಾರ್ಥಿಸದೆ ಸಮಾಜಕಲ್ಯಾಣ, ರಾಷ್ಟ್ರಕಲ್ಯಾಣ, ವಿಶ್ವಕಲ್ಯಾಣಗಳಿಗಾಗಿ ಅನನ್ಯ ಭಕ್ತಿ-ವಿಶ್ವಾಸಗಳಿಂದ ಬೇಡಿಕೆಯನ್ನು ಮಂಡಿಸಬೇಕು. ಇದುವೇ ವಿಶಾಲ ಹೃದಯದ ಮಾನವರ ಲಕ್ಷಣ.

೪೫. ಸರ್ವ ಜನಾಂಗದ ಮೇಲೆ ಪ್ರಭಾವ ಬೀರಬಲ್ಲವನೇ ನಿಜವಾದ ವಿರಕ್ತನು.

ಜ್ಞಾನಿಯಾದವನು ಅತ್ಯಂತ ಸಂಕಟ ಸಮಯದಲ್ಲಿ ಕೂಡಾ ತನ್ನ ಮಾನವೀಯತೆಯ ಸ್ವರೂಪದ ಸ್ಥಿತಿಯನ್ನು ಮರೆಯುವುದಿಲ್ಲ. ಜನನ ಮರಣಗಳ ಗುರ್ತು ಸಹ ಆತನಿಗಿಲ್ಲೆಂದರೆ

ತಪ್ಪಾಗಲಿಕ್ಕಿಲ್ಲ. ಜ್ಞಾನದಿಂದ ವಿರಕ್ತಿಯು ಸಾಧಿಸುವುದರಿಂದ ಒಳ್ಳೆಯದು ಕೆಟ್ಟದು ಎಂಬ ಭಾವ ಕೂಡಾ ಇಲ್ಲದಂತಾಗುವುದು ; ಇದರಿಂದ ವಿರಕ್ತನು ಸ್ವೇಚ್ಛಾಚಾರಿಯಾದರೂ ದೋಷವಿಲ್ಲೆಂದು ತಿಳಿಯಬಾರದು. ಸುಜ್ಞಾನಿಯಾದ ವಿರಕ್ತನು ವಿಷಯವಾಸನೆಗಾಸ್ಪದ ಕೊಡುವುದಿಲ್ಲ.

ಈ ಮಾನವ ದೇಹದಲ್ಲಿ ಬೆಳೆಯುತ್ತಿರುವ ಅಸತ್ಯವನ್ನು, ಮನದಲ್ಲಿ ಬೆಳೆಯುತ್ತಿರುವ ವಿಷಯವಾಸನೆಯನ್ನೂ, ಪ್ರಾಣದಲ್ಲಿ ಬೆಳೆಯುತ್ತಿರುವ ಮರಣವನ್ನೂ, ಭಾವದಲ್ಲಿ ಬೆಳೆಯುತ್ತಿರುವ ಬಹಿರಂಗ ಬಳಕೆಯ ವ್ಯಾಮೋಹವನ್ನೂ ಕಿತ್ತುಹಾಕಿ, ನಟ್ಟು ಕಡಿದು, ಹರಗಿ ಹಸನಮಾಡಿ ಅಂತರಂಗ-ಬಹಿರಂಗಗಳಿಗಾಸ್ಪದ ಕೊಡದೆ, ಸರ್ವಾಂಗದಲ್ಲಿ ಸಕಲ ದೇಶ, ಜಾತಿ-ಜನಾಂಗಕ್ಕೆ ಅವಶ್ಯಕವೆಂದು ಬೆಳೆದ ದೈವನೀತಿಯೆಂಬ ಬೆಳೆಯ ನಿಲವನ್ನು ಕಂಡುಕೊಳ್ಳಬೇಕು ; ಇದಕ್ಕಾಗಿ ತಾಳ್ಮೆಯ ಅಭಿಷೇಕ ಜಲ, ವೈರಾಗ್ಯಕುಸುಮಮಾಲೆ, ನಿಧಿಧ್ಯಾಸದ ಸುವಾಸನೆ, ವಿವೇಕದ ವಸನ, ವಿಶ್ವಾಸವೆಂಬ ಪರಿಮಳದ ಹೊಗೆ, ಸತ್ಯದ ಅಲಂಕಾರದಾಭರಣ, ನಿರಹಂಕಾರದ ಅಕ್ಷತೆಗಳನ್ನು ಕಂಡುಕೊಳ್ಳಬೇಕಾಗಿದೆ ನಾವಿಂದು.

ಸುನೀತಿ, ಸದ್ಗುಣ, ಶೀಲ, ಸದಾಚಾರ, ಶಾಂತಿ, ಶಮೆ-ದಮೆ, ವಿವೇಕ, ವೈರಾಗ್ಯ, ವಿಶ್ವಾಸಗಳ ಬಗೆಗೆ ಕೂಲಂಕುಷವಾಗಿ ವಿಚಾರ-ವಿನಿಮಯ ಮಾಡಬೇಕಾಗುತ್ತದೆ. ಆಚಾರ-ವಿಚಾರವಿಲ್ಲದೆ, ನೀತಿ-ನಡಾವಳಿಯಿಲ್ಲದೆ, ಶಾಂತಿ-ಸ್ಮರಣೆಯಿಲ್ಲದೆ ನಿಜವಾದ ಪೂಜೆ ಇಲ್ಲವೇ ಇಲ್ಲ. ಪೂಜೆಯಿಲ್ಲದಿದ್ದರೆ ದೇವರೂ ಇಲ್ಲವೆಂದಂತಾಯಿತು. ದೇವರಿಲ್ಲದಿದ್ದರೆ ಮಾನವ ಜೀವನಕ್ಕೆ ಪ್ರಪಂಚದ ನಿಕಟ ಸಂಬಂಧವಿದೆಯೆಂಬ ಅರ್ಥಕ್ಕೆ ಬಾಧೆ ಬರುತ್ತದೆ.

ಈ ಮಾನವ ಜೀವನವನ್ನು ಸರಿಯಾಗಿ ಅರಿಯಬೇಕಾದರೆ ಅದನ್ನು ಅಂಶತಃ ವಿಭಾಗಿಸಿ ನೋಡದೆ ಸಮಗ್ರವಾಗಿ ಸಾಮಾಜಿಕ, ರಾಜಕೀಯ, ಧಾರ್ಮಿಕ ದೃಷ್ಟಿಯಿಂದ ಕಂಡುಕೊಳ್ಳಬೇಕಾಗುವುದೆಂಬುದು ವಿಶ್ವಧರ್ಮದ ಪ್ರತಿಪಾದನೆಯಿಂದ ತಿಳಿದುಬರುವುದು.

ಮಾನವನಿಗೆ ದೇವರು ಪ್ರತ್ಯಕ್ಷನಾಗಿ ಸಹಾಯ ಸಲ್ಲಿಸುವನೆನ್ನುವದಕ್ಕಿಂತ, ಮಾನವನೇ ತನ್ನ ಸೌಜನ್ಯಶೀಲ ಪವಿತ್ರ ವೃತ್ತಿಯಿಂದ ಅತಿ ಮಾನವನಾಗಿ ದೇವನಾಗಬಲ್ಲನೆಂಬ ಸಲಕರಣೆ ಹಾಗೂ ಸಿದ್ಧಿಗಳು ಮಾನವ ಕುಟುಂಬದ ಏಳ್ಗೆಗೆ ಅಮೌಲ್ಯವಾದ ಪ್ರಾಪ್ತಿಯೆಂದು ಹೇಳಬಹುದು.

ಸಾಮಾಜಿಕ ವಾತಾವರಣದಲ್ಲಿ ದುಡುಕುತನ, ವಂಚನೆ, ಪ್ರಾಮಾಣಿಕ ವೃತ್ತಿ, ದ್ವೇಷಾಸೂಯೆಗಳ ಬೆಂಬಲದಿಂದ ಅನವಶ್ಯಕವಾಗಿ ಕೋರ್ಟುಕಚೇರಿಗಳಿಗೆಡತಾಕುವ ಪ್ರಸಂಗ, ಧರ್ಮದ್ರೋಹಗಳ ಜೀವನಗಳ ಸ್ವರೂಪ. ಇವುಗಳನ್ನು ಕಂಡುಕೊಂಡರೆ ನುಡಿದಂತೆ ನಡೆಯದಿದ್ದುದೇ ಕಾರಣವೆನ್ನಬಹುದಾಗಿದೆ. ಇದು ಸಕಲ ಧರ್ಮ, ನೀತಿ, ಸಾಮಾಜಿಕ ಸುವ್ಯವಸ್ಥೆಗಳಿಗೆ ಮೂಲ ತಳಹದಿಯಾಗಿದೆ.

ಮಾನವನು ವಿಶಾಲವಾದ ವ್ಯಕ್ತಿತ್ವ, ಆಕರ್ಷಕ ಸ್ವರೂಪ, ಶುದ್ಧ ಜೀವನ, ಅಲೌಕಿಕ ಸಾಮರ್ಥ್ಯ, ಅಗಾಧವಾದ ಜಾಣ್ಮೆಗಳಲ್ಲಿ ಒಂದನ್ನಾದರೂ ಪೂರ್ಣ ಸಾಧಿಸಿಕೊಂಡಿದ್ದರೆ ಸಾಮಾಜಿಕ ಜೀವನದಲ್ಲಿ ಪ್ರಭಾವ ಬೀರಬಲ್ಲವನಾಗುತ್ತಾನೆನ್ನಬಹುದು. ಇದಕ್ಕೂ ವಿಶಾಲವಾಗಿ ತಿಳಿದುಕೊಳ್ಳಬೇಕೆಂದರೆ ಸಾಹಿತ್ಯದಲ್ಲಿ, ಪ್ರತಿಭಾನ್ವಿತ ಬುದ್ಧಿಶಕ್ತಿಯಲ್ಲಿ, ನಿಸ್ವಾರ್ಥಮಯ

ಸೇವೆಯಲ್ಲಿ, ಮನಾಕರ್ಷಕ ತತ್ವಬೋಧೆಯಲ್ಲಿ, ವಾಕ್‌ಚಾತುರ್ಯದಲ್ಲಿ, ದೈವೀಪ್ರೇರಣೆಯಲ್ಲಿ, ಸೌಜನ್ಯಶೀಲದಲ್ಲಿ, ಸಂಘಟನಾಶಕ್ತಿಯಲ್ಲಿ, ನಿರ್ಮಲ ಸ್ವಾತಂತ್ರ್ಯಪ್ರೇಮದಲ್ಲಿ, ಪ್ರಾಮಾಣಿಕ ನ್ಯಾಯಶೀಲತೆಯಲ್ಲಿ, ತೀಕ್ಷ್ಣವಾದ ವಿಶಾಲಾತ್ಮಶಕ್ತಿಯಲ್ಲಿ, ನಿರ್ಭೀತಿಯಿಂದ ದೋಷಗಳನ್ನು ಖಂಡಿಸುವಲ್ಲಿ ಸಮರ್ಥನಾದರೆ ಈ ಪ್ರಪಂಚದಲ್ಲಿಯ ಸರ್ವಜನತೆಯ ಮೇಲೆ ಪ್ರಭಾವ ಬೀರಬಲ್ಲ ಸಮರ್ಥ ವ್ಯಕ್ತಿಯೆನಿಸಬಲ್ಲನು.

೪೬. ರಾಷ್ಟ್ರೋದ್ಧಾರಕ್ಕೆ ನೈತಿಕ ಬಲದ ಅವಶ್ಯಕತೆಯಿದೆ.

ಪ್ರಾಪಂಚಿಕ ವಿಷಯದಲ್ಲಿ ದೇಶದ ಸರ್ವ ಜನತೆಗೆ ಸುಗಮವಾಗಿ ತಿಳಿಯಲು ಕೆಲವು ನೈತಿಕ ಬಲದ ಸಾಮಾನ್ಯ ಸಂಗತಿಗಳನ್ನು ಕೆಳಗೆ ಕಾಣಿಸಲಾಗಿದೆ ; ಅವುಗಳನ್ನು ಆಚರಣೆಯಲ್ಲಿ ತಂದು ರಾಷ್ಟ್ರೋದ್ಧಾರಕ್ಕಾಗಿ ನೆರವಾಗುವ ಪವಿತ್ರ ಕಾರ್ಯದಲ್ಲಿ ನಿಷ್ಠಾವಂತ ಪ್ರಜೆಗಳು ನಿರತರಾಗಿ, ಕಳಕಳಿಯಿಂದ ನೈತಿಕ ಬಲವುಳ್ಳ ಸಂಗತಿಗಳನ್ನು ಪ್ರಸಾರ ಮಾಡುವದವಶ್ಯವಿದೆ. ಪ್ರಜೆಗಳು ಸದ್ಗುಣಿಗಳಾಗಿ ಸೌಜನ್ಯಶೀಲ ಪ್ರವೃತ್ತಿಯಿಂದ ಬಾಳುವದೊಂದು ಸಹಾಯವು ರಾಷ್ಟ್ರಕ್ಕೆ ದೊರೆಯುವುದು. ರಾಷ್ಟ್ರದ ಪ್ರತಿಯೊಬ್ಬ ಸ್ತ್ರೀ-ಪುರುಷರು ಒಳ್ಳೆಯ ಸಂಗತಿಗಳನ್ನನುಕರಣಮಾಡುವುದೊಳ್ಳೆಯದು.

೧) ಪುರುಷರು ಪರಸ್ತ್ರೀಯರನ್ನೂ, ಸ್ತ್ರೀಯರು ಪರಪುರುಷರನ್ನೂ ಪಾಪದೃಷ್ಟಿಯಿಂದ ಕೂಡಾ ನೋಡಬಾರದು.

೨) ತಮ್ಮಲ್ಲಿ ಶ್ರದ್ಧೆಯನ್ನಿಟ್ಟ ಶಿಷ್ಯನಲ್ಲಿ ಗುರುಗಳು ತಿಲಮಾತ್ರ ವಂಚನೆಗೆ ಆಸ್ಪದ ಕೊಡಬಾರದು.

೩) ಶಿಷ್ಯನು ಗುರುಪತ್ನಿಯನ್ನು ದೇವಿಯ ಸ್ವರೂಪದಲ್ಲಿ ನಿರ್ಮಲ ದೃಷ್ಟಿಯಿಂದ ಕಂಡುಕೊಳ್ಳಬೇಕು.

೪) ಅತ್ತೆಯನ್ನು ಹೆತ್ತ ತಾಯಿಯಂತೆ ಪ್ರೇಮದಿಂದ ನೋಡಿಕೊಳ್ಳುವವಳೇ ಮುತ್ತಿನಂಥ ಸೊಸೆಯೆನಿಸುವಳು.

೫) ಸೊಸೆಯನ್ನು ತನ್ನ ಮಗಳಿಗಿಂತ ಅಧಿಕ ಪ್ರೀತಿ ವಿಶ್ವಾಸಗಳಿಂದ ಕಾಣುತ್ತಿರುವ ಅತ್ತೆಯು ಉತ್ತಮ ಗೃಹಿಣಿಯೆನಿಸುವಳು.

೬) ಅತ್ತೆ-ಮಾವಂದಿರನ್ನು ಕತ್ತೆ ನಾಯಿಗಳಿಗಿಂತ ಕಡೆಯಾಗಿ ಕಾಣುವ ಸೊಸೆಯು, ಸತ್ತ ಕಾಗೆಗಿಂತ ಕನಿಷ್ಠಳೆನಿಸುವಳು.

೭) ತಂದೆ ತಾಯಿಗಳನ್ನು ಹಂದಿ ನಾಯಿಗಳ ಸ್ವರೂಪದಲ್ಲಿ ಕಾಣುವ ಮಗನು ದೊಡ್ಡ ವಿದ್ಯಾವಂತನಿದ್ದರೂ ಮಂದಮತಿಯಾದ ಶತ್ರುವೆನಿಸುವನು.

೮) "ಮಾತೃದೇವೋಭವ ; ಪಿತೃದೇವೋಭವ ; ಆಚಾರ್ಯ ದೇವೋಭವ" ಎಂಬುದನ್ನು ಸದಾ ಜ್ಞಾಪಕದಲ್ಲಿಟ್ಟುಕೊಂಡು ಸವಿನಯವಾಗಿ ನಡೆದುಕೊಳ್ಳುವವನೇ ಸತ್ಪುತ್ರನೆನಿಸುವನು.

೯) ಸಂಕಟ ಸಮಯದಲ್ಲಿ ಸಹಾಯ ಮಾಡುವವನೇ ನಿಜವಾದ ಮಿತ್ರನೆನಿಸುವನು.

೧೦) ಸಂಪತ್ತನ್ನು ಕಳೆದುಕೊಂಡು ವಿಪತ್ತಿಗೆ ಗುರಿಯಾದ ಸಮಯದಲ್ಲಿ ಸಹಾಯ ಮಾಡದೆ ದೂರ ಸರಿಯುವವನು ಮಿತ್ರನಾಗಿದ್ದರೂ ಶತ್ರುವೆನಿಸುವನು.

೧೧) ಸದಾಪಕಾಲ ಪತಿಯ ಹಿತವನ್ನು ಬಯಸುವವಳೇ ಪತಿವ್ರತೆಯಾದ ಧರ್ಮಪತ್ನಿಯೆನಿಸುವಳು.

೧೨) ಎಂಥ ದೊಡ್ಡ ಅಧಿಕಾರದಲ್ಲಿದ್ದರೂ ಶಿಷ್ಟಸಂಪ್ರದಾಯವನ್ನು ಉಲ್ಲಂಘಿಸುವ ಮಾನವನು ದ್ವಿಪಾದ ಪಶುವೆನಿಸುವನು.

೧೩) ಅಧಿಕಾರದಿಂದ ದರ್ಪಕ್ಕೆ ಬೆಲೆಬರುವುದು, ಅಧಿಕಾರ ಕಳೆದುಕೊಂಡ ಮೇಲೆ ಅದರೊಂದಿಗೆ ಬೆಲೆಯನ್ನು ಕಳೆದುಕೊಳ್ಳುವನು.

೧೪) ಪ್ರೀತಿಯಿಂದ ಅಧಿಕಾರಕ್ಕೆ ಶಾಶ್ವತ ಬೆಲೆ ಬರುವುದು. ಈ ಪ್ರೀತಿಯು ದರ್ಪವನ್ನು ಕೂಡಾ ಸೋಲಿಸಿ ಅದರ ಅಧ್ಯತೆಯನ್ನು ಕರಗಿಸಿ ಕಡಿಮೆ ಮಾಡಬಲ್ಲದು.

೧೫) ಸ್ವಾರ್ಥವನ್ನು ಬದಿಗಿರಿಸಿ ಪರರಿಗೆ ಸಹಾಯ ಮಾಡುವ ಮಾನವರು ಸತ್ಪುರುಷರೆನಿಸುವರು.

೧೬) ತಮಗೆ ಹಾನಿಯಾಗದಂತೆ, ಪರರಿಗೆ ಹಿತವಾಗುವಂತೆ ಶ್ರಮವಹಿಸುವವರು ಸಾಮಾನ್ಯ ಮಾನವರು.

೧೭) ತಮ್ಮ ಹಿತದ ಸಲುವಾಗಿ ಪರರನ್ನು ಬಲಿ ತೆಗೆದುಕೊಳ್ಳುವವರು ಮನುಷ್ಯ ರೂಪದ ರಾಕ್ಷಸರು.

೧೮) ತಮ್ಮ ಹಿತವಿಲ್ಲದಿದ್ದರೂ ಅನವಶ್ಯಕವಾಗಿ ಪರರಿಗೆ ತೊಂದರೆ ಕೊಟ್ಟು ಕೆಡಕನ್ನುಂಟು ಮಾಡುವವರು ಅಧಮಾಧಮರಾದ ನಿಷ್ಪ್ರಯೋಜಕ ಕ್ರೂರಕರ್ಮಿಗಳು.

೧೯) ಕ್ಷಮಾಗುಣವಿಲ್ಲದ ಮಾನವನು ಮಹಾ ಭಯಾನಕ ವ್ಯಕ್ತಿಯೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

೨೦) ನಾಲಿಗೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಮೊದಲನೆಯ ಸದ್ಗುಣವಾಗಿದೆ.

೨೧) ಸತ್ಯವು ರಾಜಕೀಯ ಕೌಶಲ್ಯದಲ್ಲಿ ಪ್ರಭಲ ಶಕ್ತಿಯಾಗಿರುವುದರಿಂದ ಸತ್ಯಕ್ಕಾಗಿ ಪರಿಶ್ರಮ ತೆಗೆದುಕೊಳ್ಳುವದೊಳ್ಳೆಯದು. ಇವೆಲ್ಲ ಸಂಗತಿಗಳು ನೈತಿಕ ಸುಧಾರಣೆಗೆ ಸಹಾಯವಾಗುವುದರಿಂದ ಇಂಥ ನೀತಿಪರವಾದ ಒಳ್ಳೇ ಸಂಗತಿಗಳನ್ನು ರಾಷ್ಟ್ರದ ಮೂಲೆ ಮೂಲೆಗಳಲ್ಲೆಲ್ಲಾ ಪ್ರಸಾರ ಮಾಡುವದರಿಂದ ರಾಷ್ಟ್ರೋದ್ಧಾರಕ್ಕಾಗಿ ನೈತಿಕ ಬಲದ ಅವಶ್ಯಕತೆಯೆಷ್ಟಿದೆಯೆಂಬುದು ಸ್ಪಷ್ಟವಾಗುವದು.

೪೭. ವಿದ್ಯಾರ್ಥಿಗಳಿಗಾಗಿ ಹಿತವಚನಗಳು.

ಪ್ರಸ್ತುತ ಸಮಯದ ಈಗಿನ ಪ್ರಕ್ಷುಬ್ಧ ವಾತಾವರಣದಲ್ಲಿ ವಿದ್ಯಾರ್ಥಿಗಳು ದುಡುಕಬಾರದು. ಒಳ್ಳೇ ಪರಿಸರದಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ತಮ್ಮ ಶೀಲವನ್ನು ಕಾಯ್ದು, ತಮ್ಮ ಸದ್ಗುಣ ಸೌಜನ್ಯಗಳಿಂದ ಸಾಮಾನ್ಯ ಜನತೆಗೆ ಸನ್ಮಾರ್ಗದರ್ಶಕರಾಗಬೇಕು. ಜನರು ಇತ್ತೀಚೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಪರಿಶೀಲಿಸಿ ನಿರ್ಧರಿಸುವರೆಂಬುದನ್ನು ಗಮನಿಸಿ ನಿಜವಾದ ವಿದ್ಯೆಯನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳು ಪ್ರಯತ್ನಿಸಬೇಕು. ಕೇವಲ ಡಿಗ್ರಿಯಿಂದ ವ್ಯಕ್ತಿತ್ವ ರೂಪುಗೊಳ್ಳಲು ಸಾಧ್ಯವಿಲ್ಲ. ಒಳ್ಳೇ ಆದರ್ಶತನದ ನಡತೆ

ಹಾಗೂ ಬುದ್ಧಿಗಳಿಂದ ಉತ್ತಮ ಶೀಲಸೌಜನ್ಯಗಳನ್ನು ಗಳಿಸಿ ರಾಷ್ಟ್ರಕಲ್ಯಾಣ ಕಾರ್ಯದಲ್ಲಿ ಪಾಲ್ಗೊಳ್ಳಬೇಕು; ಆದರೆ ದುಡುಕು ಸ್ವಭಾವದಿಂದ ರಾಷ್ಟ್ರಘಾತುಕ ಚಟುವಟಿಕೆಗಳಲ್ಲಿ ಭಾಗವಹಿಸಬಾರದು.

ಕೇವಲ ಹಣವು ಸಮಾಜದಲ್ಲಿ ನಮ್ಮ ಹೆಸರನ್ನು ಜೀವಂತಗೊಳಿಸಲಾರದು; ಅದು ಬಹಳವಾದರೆ ಹುರುಪು ಹುಮ್ಮಸವನ್ನೀಯಬಲ್ಲದು; ಅದರಿಂದ ನಿಜವಾದ ವ್ಯಕ್ತಿತ್ವ ರೂಪುಗೊಳ್ಳುತ್ತಿರುವುದಿಲ್ಲ; ಆದರೆ ನಾವು ಮಾಡುವ ನಿರ್ವಂಚನೆಯ ಸೇವೆ ಸತ್ಕಾರ್ಯಗಳ ಸಮಾಜದಲ್ಲಿ ಸಜೀವ ಚೈತನ್ಯವನ್ನುಂಟುಮಾಡುತ್ತವೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಮಹಾತ್ಮ ಗಾಂಧಿ, ಭಗವಾನ್ ಬುದ್ಧ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಶ್ರೀ ಅರವಿಂದ ಘೋಷ ಮೊದಲಾದ ಮಹಾಪುರುಷರ ಸಮಂಜಸವಾದ ವ್ಯಕ್ತಿತ್ವವನ್ನು ವಿದ್ಯಾರ್ಥಿಗಳು ಸ್ಮರಿಸಿಕೊಂಡು ಅವರ ಆದರ್ಶವನ್ನು ಚಾಚೂ ತಪ್ಪದಂತೆ ಆಚರಣೆಯಲ್ಲಿ ತಂದು ರಾಷ್ಟ್ರದ ಕೀರ್ತಿಯನ್ನು ಶುಭ್ರ ಕೀರ್ತಿಯನ್ನಾಗಿ ಪರಿವರ್ತಿಸಬೇಕು. ನಮ್ಮ ರಾಷ್ಟ್ರವು ಇತರ ರಾಷ್ಟ್ರಗಳಿಗೆ ಆದರ್ಶ ಮಾರ್ಗದರ್ಶನವಾಗುವಂತೆ ಪ್ರಯತ್ನಿಸುವುದೂ ಒಂದು ವಿದ್ಯಾರ್ಥಿಗಳ ಕರ್ತವ್ಯವಾಗಿದೆ.

ಪರರ ಸದ್ಗುಣಗಳನ್ನು ಕಂಡು ಸರಳವಾಗಿ ಪ್ರೀತಿಸಬೇಕೆಂಬುದನ್ನು ವಿದ್ಯಾರ್ಥಿಗಳು ಸ್ಮರಿಸಿಕೊಳ್ಳಬೇಕು. ವಿದ್ಯಾರ್ಜನೆಯಲ್ಲಿ ಹಂಬಲವನ್ನೂ, ವಿದ್ಯಾಗುರುಗಳಲ್ಲಿ ವಿನಯವನ್ನೂ ವ್ಯಕ್ತಗೊಳಿಸುವುದು ನಿಜವಾದ ವಿದ್ಯಾರ್ಥಿಯ ಲಕ್ಷಣವೆಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ದುಷ್ಟ ಜನರಿಂದ ಮತ್ತು ಮೂರ್ಖ ಜನರಿಂದ ದೂರವಿರಬೇಕೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಲೋಕನಿಂದೆಗಾಗಿ ಹೆದರಿಕೆಯುಳ್ಳವರಾಗಿ, ಮನೋನಿಗ್ರಹದಲ್ಲಿ ಶಕ್ತಿಯುಳ್ಳವರಾಗಿ ಜೀವಿಸಿಕೊಂಡಿರುವವರೇ ನಿಜವಾದ ಮಾನವಧರ್ಮಿಗಳೆಂಬುದನ್ನರಿತುಕೊಂಡು ವಿದ್ಯಾರ್ಥಿಗಳು ಅಂಥವರ ಅನುಕರಣದಲ್ಲಿ ಇರುವುದೊಳ್ಳೆಯದು.

ದುರ್ಬುದ್ಧಿಯುಳ್ಳ ಮೂರ್ಖರಿಗೆ ಸದುಪದೇಶಮಾಡಿದರೂ ಅವರ ಸಿಟ್ಟು ದ್ವೇಷಗಳು ಕಡಿಮೆಯಾಗುವುದಿಲ್ಲೆಂಬುದನ್ನರ್ಥಮಾಡಿಕೊಂಡು ವಿದ್ಯಾರ್ಥಿಗಳು ಸಮಂಜಸ ರೀತಿಯಲ್ಲಿ ವರ್ತಿಸುವದೊಳ್ಳೇದು. ತಮ್ಮ ತಮ್ಮಲ್ಲಿ ಅನವಶ್ಯಕವಾಗಿ ಹೋರಾಡುವದರಿಂದ ಏನೂ ಸಾಧಿಸುವುದಿಲ್ಲವೆಂಬುದನ್ನರಿತುಕೊಂಡು ಎಲ್ಲರೂ ಕೆಡಕಿನ ವಿರುದ್ಧ ಹೋರಾಡಬೇಕೆಂಬದನ್ನು ಸ್ಮರಿಸಿಕೊಳ್ಳುವುದು ಸುಸಂಸ್ಕೃತ ವಿದ್ಯಾರ್ಥಿಗಳ ಲಕ್ಷಣವಾಗಿದೆ. ಸತ್ಯದ ಸೂತ್ರದಿಂದ ಮತ್ತು ಸರಳ ಪ್ರೇಮದಿಂದ ವಿಶ್ವವನ್ನೇ ಜಯಿಸಬಲ್ಲೆವೆಂಬುದು ಅಚಲ ಶ್ರದ್ಧೆಯಾಗಿದೆಯೆಂಬುದನ್ನರ್ಥಮಾಡಿಕೊಂಡು ವಿದ್ಯಾರ್ಥಿಗಳು ಮಹಾತ್ಮರ ನುಡಿಗಳಲ್ಲಿ ಶ್ರದ್ಧೆಯನ್ನಿಡುವುದು ಒಳ್ಳೆಯದು.

ಆತ್ಮೀಯ ಗೆಳೆಯರನ್ನು ಪ್ರೀತಿಸುವುದಕ್ಕಿಂತ ನಮ್ಮನ್ನು ದ್ವೇಷಿಸುವವರನ್ನು ಪ್ರೀತಿಸುವುದರಲ್ಲಿ ಅಹಿಂಸೆಯ ಪ್ರಭಲ ಶಕ್ತಿಯು ಅಡಕವಾಗಿದೆಯೆಂಬುದನ್ನರಿತುಕೊಂಡು ದ್ವೇಷವು ವಿನಾಶಕಾರಿಯಾಗಿ ಅಹಿಂಸೆಯು ಅವಿನಾಶಿಯಾಗಿರುವದೆಂಬುದನ್ನರ್ಥಮಾಡಿಕೊಂಡು ಪ್ರೌಢ

ವಿದ್ಯಾರ್ಥಿಗಳು ಸೂಕ್ತ ಮಾರ್ಗ ಕೈಗೊಂಡು ರಾಷ್ಟ್ರ ಹಿತಚಿಂತಕರಾಗಿ ಆದರ್ಶ ವಿದ್ಯಾರ್ಥಿಗಳಾಗಬೇಕು.

೪೮ ಸುಸಂಸ್ಕಾರದಲ್ಲಿ ಮಾತ್ರ ನಿಜವಾದ ಒಳ್ಳೆಯತನವನ್ನು ಕಂಡುಕೊಳ್ಳಬಹುದು

ಈ ಜಗತ್ತಿನ ಸಕಲ ಪ್ರಾಣಿಗಳಲ್ಲಿ ಪ್ರೇಮವೆಂಬುದೊಂದು ಆಕರ್ಷಕ ಶಕ್ತಿಯು ಹುದುಗಿಕೊಂಡಿದೆ; ಅದು ಮಾನವ ಪ್ರಾಣಿಗಳಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ. ಈ ಪ್ರೇಮದಲ್ಲಿ ಸಹನ ಶಕ್ತಿಯು ಹುದುಗಿಕೊಂಡಿರುತ್ತದೆ. ಪ್ರೇಮವು ಸಾಮಾನ್ಯವಾಗಿ ಸೇಡು ತೀರಿಸಿಕೊಳ್ಳಲು ಹವಣಿಸುವುದಿಲ್ಲ. ಇತ್ತೀಚೆಗೆ ಮಧ್ಯಪಾನದಲ್ಲಿ ಪ್ರೇಮದ ಪರಮಾವಧಿಯಾಗಿಬಿಟ್ಟಿದೆ. ಸತ್ಯ ಸಂಧರಾದ ಮಹಾತ್ಮರು ಮಧ್ಯಪಾನದ ಬಗೆಗೆ ಹೇಳಿದ ಕೆಲವು ಸತ್ಯ ಸಂಗತಿಗಳನ್ನು ಗಮನಿಸುವದವಶ್ಯವಿದೆ.

" ಮಧ್ಯಪಾನದ ಅತಿರೇಕದಿಂದ ಖಂಡಿತವಾಗಿ ರಾಷ್ಟ್ರಘಾತವಾಗುವುದು. ಮಧ್ಯಪಾನವು ಕಳ್ಳತನ, ವ್ಯಭಿಚಾರಗಳಿಗಿಂತ ಹೇಯವಾದ ಕೃತಿಯಾಗಿದೆ. ಅದು ಧರ್ಮವನ್ನೇ ನುಂಗಿಬಿಡುವದು. ಪಾನಪ್ರತಿಬಂಧದಿಂದ ಅತ್ಯಾಚಾರದ ಅಂಜಿಕೆಯಿಲ್ಲದೆ ಒಬ್ಬೊಂಟಿಗರಾಗಿ ಬೀದಿಗಳಲ್ಲಿ, ಪೇಟೆಗಳಲ್ಲಿ ಸ್ತ್ರೀಯರೂ ಕೂಡ ಅಲೆದಾಡಲು ಸಾಧ್ಯವಾಗಬಹುದಾಗಿದೆ. ಮಿತಿ ಮೀರಿ ಮಧ್ಯಪಾನ ಮಾಡಿದವರು ಮೈ ಮೇಲೆ ಸ್ಮೃತಿಯಿಲ್ಲದೆ ಸಹಜವಾಗಿ ಅತ್ಯಾಚಾರ ಮಾಡಲು ಹವಣಿಸುವರೆಂಬುದು ಬಹು ಜನರಿಗೆ ಗೊತ್ತಿರಲಿಕ್ಕೆ ಸಾಕು; ಆದರೂ ಪಾನ ಪ್ರತಿಬಂಧ ಮಾಡಲು ಹಿಂಜರಿಯುವದಿದು ಶುಭ ಶಕುನವಲ್ಲ. ನಿಜವಾಗಿ ನೋಡಿದರೆ ಮಿತಿ ಮೀರಿ ಮಧ್ಯಪಾನ ಮಾಡಿದವರೇ ಅಸ್ಪೃಶ್ಯರೆನ್ನಬಹುದು.

ಸತ್ಯವನ್ನು ಸ್ಮರಿಸಿ ಹೇಳಬೇಕೆಂದರೆ ಸನಾತನ ಅಂಧ ಶ್ರದ್ಧೆಯಿಂದ ಅಸ್ಪೃಶ್ಯತೆಯೆಂಬ ವಿಷಬೀಜವು ರಾಷ್ಟ್ರಧರ್ಮವನ್ನು ಕಲುಷಿತಗೊಳಿಸಿದೆ. ಈ ಕಲುಷಿತ ರಾಷ್ಟ್ರಧರ್ಮ ತಿಳಿಯಾಗಬೇಕಾದರೆ ನಾವೆಲ್ಲರೂ ಆಧ್ಯಾತ್ಮಿಕ ಭಾವನೆಯ ಸುಜ್ಞಾನಿಗಳಾಗಿ ಹುರುಳಿಲ್ಲದ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಿ ರಾಷ್ಟ್ರೋದ್ಧಾರವಾಗಲು ಶಕ್ಯವಿದ್ದಷ್ಟು ನೆರವಾಗಬೇಕು. ಇದರಿಂದ ನಮ್ಮ ರಾಷ್ಟ್ರದ ದೃಷ್ಟಿಕೋನವೇ ಬದಲಾಗುವುದು. ತ್ಯಾಗವಿಲ್ಲದ ಪೂಜೆ, ಮಾನವೀಯತೆಯಿಲ್ಲದ ವಿಜ್ಞಾನ, ಶೀಲವಿಲ್ಲದ ಶಿಕ್ಷಣ, ನೀತಿಹೀನ ವಾಣಿಜ್ಯ, ತತ್ವರಹಿತ ರಾಜಕೀಯತೆ ಮೊದಲಾದವುಗಳನ್ನು ನಿರ್ದಾಕ್ಷಿಣ್ಯವಾಗಿ ದೂಡಿಬಿಡುವಷ್ಟು ಶಕ್ತಿಯು ಈ ಪಾನಪ್ರತಿಬಂಧದಿಂದ ಪ್ರಾಪ್ತವಾಗುವುದು.

ಮಧ್ಯಪಾನದಿಂದ ಸೋಮಾರಿತನ ಬೆಳೆಯುವುದು. ಸಕಲ ಅಪಾಯಗಳಿಗೆ ಮಹಾದ್ವಾರವೆಂದರೆ ಈ ಸೋಮಾರಿತನ. ಸೋಮಾರಿಯೆಂದರೆ ಬಾಗಿಲುಗಳಿಲ್ಲದ ಮನೆಯಿದ್ದಂತೆ. ಇಲ್ಲಿ ಪಿಶಾಚಿಗಳು ಸಹಜವಾಗಿ ಪ್ರವೇಶಿಸಬಹುದು. ನಮ್ಮ ಭಾರತದಲ್ಲಿ ಇದರ ಬಗೆಗೆ ಪುರಾತನ ವಾಙ್ಮಯದಲ್ಲಿ ವಿಮರ್ಶಾತ್ಮಕ ವಿಧಾನದಲ್ಲಿ ಮಾರ್ಮಿಕವಾಗಿ ವರ್ಣಿಸಲ್ಪಟ್ಟಿದೆ. ಆದರೆ ನಮ್ಮಲ್ಲಿ ಕೆಲವು ಜನ ಚಾರ್ವಾಕಾನುಯಾಯಿಗಳು, ಆಧುನಿಕ ಭೌತಿಕ ಶಾಸ್ತ್ರಜ್ಞರೂ ಆದರಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿದ್ದಾರೆ.

ಇಲ್ಲಿ ಚಾರ್ವಾಕ ಪಕ್ಷದವರ ಅಭಿಪ್ರಾಯದಂತೆ "ಯಾವಜ್ಜೀವಂ ಸುಖಂ ಜೀವೇದೃಣಂ ಕೃತ್ವಾ ಘೃತಂ ಪ್ರಿಬೇತ್,। ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ॥" ಇಂತಹ ಸ್ವಾರ್ಥಪರ ತತ್ವಗಳ ಪ್ರಚಾರದಿಂದ ಪಾಪ-ಪುಣ್ಯಗಳ ಭೀತಿಯಿಲ್ಲದೆ ಅನೈತಿಕ ವಾತಾವರಣ ನಿರ್ಮಿಸಲು ಕಾರಣವಾಗಿದೆ. ಇದನ್ನರಿತುಕೊಂಡು ಸುಜ್ಞಾನಿಗಳಾದ ಮಹಾತ್ಮರು ನೀತಿ ಶಾಸ್ತ್ರದ ತಳಹದಿಯನ್ನೇ ಭದ್ರವಾಗಿಟ್ಟುಕೊಂಡು ಜಗತ್ಕಲ್ಯಾಣಕ್ಕಾಗಿ ಪರಿಶ್ರಮಿಸುತ್ತಿರುವರು.

ಸಂಸ್ಕೃತವನ್ನಭ್ಯಾಸಮಾಡಿ, ಪಾಂಡಿತ್ಯದ ಪ್ರಭಾವದಿಂದ ಮನಬಂದಂತೆ ಶ್ಲೋಕಗಳನ್ನು ರಚಿಸಿ, ಜನಸಾಮಾನ್ಯರಿಗೆ ತಪ್ಪು ಕಲ್ಪನೆಯಾಗುವಂತೆ ಪ್ರಸಾರ ಮಾಡುವುದು ಸ್ವಾರ್ಥಿಗಳ ಲಕ್ಷಣವಾಗಿದೆ. ಇಂತಹ ಸ್ವಾರ್ಥಿಗಳು ರಚಿಸಿರುವ ಶ್ಲೋಕಗಳನ್ನು ಗಮನಿಸದೆ, ಸತ್ಯ ಸಂಗತಿಯನ್ನು ಶೋಧಿಸಿ ಸಮಯೋಚಿತವಾಗಿ ನಡೆದುಕೊಳ್ಳುವುದು ಮಾನವ ಧರ್ಮವಾಗಿದೆ.

ಸಂಸ್ಕೃತದಲ್ಲಿ ಬರೆಯಲ್ಪಟ್ಟಿದೆಯೆಂದು ಎಲ್ಲವೂ ಒಳ್ಳೆಯದೆಂದು ಹೇಳಲಿಕ್ಕೆ ಬರುವುದಿಲ್ಲ. ಈ ಒಳ್ಳೆಯದು ಕೆಟ್ಟದು ಎಂಬುದನ್ನು ಒಳ್ಳೇ ಸಂಸ್ಕಾರದ ಪರಿಸರದಲ್ಲಿ ಕಂಡುಕೊಳ್ಳಬಹುದಾಗಿದೆ. ನಾವು ನಮ್ಮ ಆತ್ಮವನ್ನು ಕಳೆದುಕೊಳ್ಳುವ ಸಮಯವನ್ನು ಗುರುತಿಸಲಿಕ್ಕಾಗುವುದಿಲ್ಲ. ಆದುದರಿಂದ ನಾವು ಜೀವಿಸಿಕೊಂಡಿರುವವರೆಗೆ ಸಾಧ್ಯವಿದ್ದ ಮಟ್ಟಿಗೆ ಒಳ್ಳೇ ಸಂಸ್ಕಾರದ ಪರಿಸರದಲ್ಲಿಯೇ ಕಾಲ ಕಳೆಯಬೇಕು. ಇದರಿಂದ ಅಚಾತುರ್ಯ ಕೃತಿಗಳಿಗವಕಾಶವಿಲ್ಲದಂತಾಗುತ್ತದೆ.

೪೯. ಯುವಕರ ಸೂಕ್ತ ಚಟುವಟಿಕೆಯಿಂದ ಪ್ರಜಾಪ್ರಭುತ್ವ ಯಶಸ್ವಿಯಾಗಬಲ್ಲದು.

ಈ ಪ್ರಪಂಚದಲ್ಲಿ ಯಾವ ಸಂಗತಿಯೂ ಅತಿಯಾಗಬಾರದು. ಸಂಸಾರದ ಅತಿ ಮೋಹದ ಬಲೆಯಲ್ಲಿ ಸಿಲುಕಿ ತನ್ನ ಸುಖದ ಸಿಹಿಫಲವನ್ನನುಭವಿಸುವ ಭರದಲ್ಲಿ ಪರರಿಗೆ ತೊಂದರೆ ಕೊಟ್ಟು, ಪರಧನವನ್ನು ಅನ್ಯಾಯವಾಗಿ ಅಪಹರಿಸಿ, ಸುಖಪಡೆಯಬೇಕೆಂಬ ಆಶೆ ಮಾಡಬಾರದು. ತನ್ನ ಸುಖಕ್ಕಿಂತ ಪರರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದೇ ನಿಜವಾದ ಮಾನವ ಧರ್ಮ.

ಅತಿ ಹಣದ ಆಶೆಯುಳ್ಳವನು ಬಂಧು-ಬಳಗ, ಗುರು-ಶಿಷ್ಯ, ಮೊದಲಾದವರನ್ನು ಸಹ ನೋಡುವದಿಲ್ಲ. ಅತಿ ಕಾಮಿಯು ಭಯವನ್ನು, ನಾಚಿಕೆಯನ್ನು ಬಿಟ್ಟು ಬಿಟ್ಟಿರುತ್ತಾನೆ. ಅತಿ ಹೊಟ್ಟೆ ಹಸಿವೆಯಾದವನು ರುಚಿಯ ಕಡೆಗೆ ಗಮನಿಸದೆ ಏಕಚಿತ್ತದಿಂದ ಕಂಡ ಕಂಡ ಆಹಾರ ಸೇವಿಸುತ್ತಾನೆ.

ಆವರವರ ಪೂರ್ವಜನ್ಮದ ಋಣವಿಶೇಷತೆಯಿಂದ ಹೆಂಡತಿ ಮಕ್ಕಳು, ಹೊಲ-ಮೊದಲಾದವುಗಳು ಲಭಿಸುವವು; ಅಂತಹ ಋಣ ತೀರಿದ ಕೂಡಲೇ ಅದೆಲ್ಲವು ಕೈ ಬಿಡುತ್ತವೆ; ಇದಕ್ಕಾಗಿ ಸಂಸಾರದಲ್ಲಿ ಅತಿ ಮೋಹವುಳ್ಳವನು ಸುಮ್ಮನೇ ಕೊರಗಿ ಸಾಯುವನು; ಆದ್ದರಿಂದ ಇದನ್ನರಿತುಕೊಂಡು ಕಳೆದು ಹೋದುದಕ್ಕಾಗಿ ಅತಿ ದುಃಖಪಡದೆ ಅದೆಲ್ಲವನ್ನು ಮರೆತು, ಗುರು ಹಿರಿಯರಲ್ಲಿ ಭಕ್ತಿ ವಿಶ್ವಾಸಗಳಿಂದ ಧೈರ್ಯವಾಗಿರಬೇಕು.

ಭಕ್ತರಿಗೆ ನಿಜವಾದ ಭಕ್ತಿಯೊಂದೇ ಇರಬೇಕಾದ ಅರ್ಹತೆ. ಜಾತಿ-ಮತ-ಪಂಥಗಳಲ್ಲಿ ನಿರ್ಮಲ ಭಕ್ತಿ ಮತ್ತು ಉತ್ತಮ ಕೃತಿಗಳನ್ನು ಪರಮಾತ್ಮನು ಇಚ್ಛಿಸುತ್ತಾನೆ. ಜಾತಿ-ಧರ್ಮಗಳ ಸ್ವಾರ್ಥಪರ ರೀತಿ ಡಾಂಭಿಕ ಪೂಜೆ ಇವುಗಳನ್ನು ನೋಡಿ ಆ ದೇವರು ಮೆಚ್ಚುವುದಿಲ್ಲ. ಈ ಡಾಂಭಿಕ ರೀತಿ-ನೀತಿಗಳು ರಾಷ್ಟ್ರೀಯ ಸಚ್ಚಾರಿತ್ರ್ಯವನ್ನು ದುರ್ಬಲಗೊಳಿಸುತ್ತಿದ್ದರೆ ಅದರ ವಿರುದ್ಧ ಹೋರಾಡತಕ್ಕವರೇ ನಿಜವಾದ ರಾಷ್ಟ್ರಭಕ್ತರು ; ಅವರೇ ಈ ರಾಷ್ಟ್ರದ ಹಿತಚಿಂತಕರು.

ಧನ ಮತ್ತು ಅಧಿಕಾರ ಪ್ರಧಾನವಾದ ಸಾರ್ವತ್ರಿಕ ರಾಜಕೀಯ ಚಾರಿತ್ರ್ಯವನ್ನು ಗೌಣವಾಗಿಸಿ ಸ್ವಾರ್ಥವೇ ಜೀವನದಲ್ಲಿ ಕೇಂದ್ರೀಕೃತವಾಗುವಂತೆ ಮಾಡಿದ್ದರ ಪರಿಣಾಮದಿಂದ ರಾಷ್ಟ್ರೀಯ ಗುಣಗಳು ಪ್ರಕಟವಾಗುವಂತೆ ಪರಿಸ್ಥಿತಿಯು ನಿರ್ಮಾಣವಾಗಿದೆಯೆಂಬುದನ್ನು ಕಳಕಳಿಯಿಂದ ನುಡಿಯುತ್ತ ರಾಷ್ಟ್ರನಾಯಕರು ತಮ್ಮ ದಿವ್ಯ ವ್ಯಕ್ತಿತ್ವವನ್ನು ಜನತೆಯ ಎದುರಿಗೆ ವ್ಯಕ್ತಗೊಳಿಸುವುದವಶ್ಯವಿದೆ. ಇಲ್ಲಿ ವೈಯಕ್ತಿಕ ದೋಷಾರೋಪಣೆಗೆ ಅವಕಾಶವಿಲ್ಲ. ಈಗ ಸಮಾಜದ ಐಕ್ಯತೆಗಾಗಿ ಧರ್ಮಾಧಿಕಾರಿಗಳು ಹೋರಾಡುವ ಸಮಯ ಬಂದಿದೆ.

ರಾಷ್ಟ್ರೀಯ ಚಾರಿತ್ರ್ಯ ಪತನವಾಗುತ್ತಿರುವ ಸಮಯದಲ್ಲಿ ತಮ್ಮ ವೈಯಕ್ತಿಕ ಮುಕ್ತಿಗಾಗಿ ಏಕಾಂತದಲ್ಲಿ ಮೌನ ವ್ರತವನ್ನಾಚರಿಸುತ್ತ ಕುಳಿತರೆ ಧರ್ಮದ ಏಳ್ಗೆಯಾಗಲಾರದು. ನಮ್ಮ ರಾಷ್ಟ್ರದ ಯುವಕರು ತ್ಯಾಗ, ನೀತಿ, ಸೌಜನ್ಯದ ತತ್ವಗಳನ್ನು ರೂಪಿಸಿಕೊಂಡು ಸುಭದ್ರವಾದ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ತೊಡಗಿದರೆ ರಾಷ್ಟ್ರಕಲ್ಯಾಣಕ್ಕೊಂದು ಶಕ್ತಿ ದೊರೆಯುತ್ತದೆನ್ನಬಹುದು. ಯಾಕೆಂದರೆ ಒಳ್ಳೇ ರಾಷ್ಟ್ರ ಕಟ್ಟಬಲ್ಲ ಕರ್ತವ್ಯ ದಕ್ಷತೆ, ಉತ್ಸಾಹಗಳ ಪ್ರತಿ ಮೂರ್ತಿಗಳಾಗಿದ್ದಾರೆ ಯುವಕರು. ಇವರಿಗೆ ಒಳ್ಳೇ ಸಂಸ್ಕೃತಿಯ ಫಲವು ಪ್ರಾಪ್ತವಾದರೆ ನಿಜಕ್ಕೂ ಈ ಯುವಕರು ರಾಷ್ಟ್ರದ ಆಧಾರಸ್ತಂಭಗಳಾಗಿ ರಾಷ್ಟ್ರದ, ಧರ್ಮದ ಭದ್ರತೆಯು ನೆಲೆಗೊಳ್ಳುವುದು. ರಾಷ್ಟ್ರ ಪುರುಷರು ಇಂತಹ ಯುವಕರ ಸದುಪಯೋಗ ಮಾಡಿಕೊಳ್ಳಬೇಕು. ಇದಕ್ಕೆ ಧರ್ಮಾಧಿಕಾರಿಗಳು ಕೂಡಾ ಪೂರ್ಣ ಬೆಂಬಲ ಕೊಟ್ಟು ಶುಭಾಶೀರ್ವಾದಗೈಯಬೇಕು.

ರಾಷ್ಟ್ರವನ್ನು ಶಿಥಿಲಗೊಳಿಸುವ ಘಾತುಕರ ಗುಂಪಿಗೆ ಸೇರಿಕೊಳ್ಳದಂತೆ ಈ ಯುವಕರ ಸಂಘಟನಾ ಶಕ್ತಿಯನ್ನು ಪ್ರಬಲಗೊಳಿಸಿ, ಪೂರ್ಣವಾಗಿ ಘಾತುಕರ ಸದ್ದನ್ನೇ ಅಡಗಿಸಿ ರಾಷ್ಟ್ರದ ಪ್ರಗತಿಯನ್ನು ಸಾಧಿಸಬೇಕು. ಇದಕ್ಕಾಗಿ ರಾಷ್ಟ್ರನಾಯಕರು ಯುವಕರ ಸೂಕ್ತ ಚಟುವಟಿಕೆಗಳನ್ನು ಬಳಸಿಕೊಳ್ಳುವುದವಶ್ಯವಿದೆ. ಇದರಿಂದ ಪ್ರಜಾಪ್ರಭುತ್ವವು ಯಶಸ್ವಿಯಾಗಬಲ್ಲದು.

೫೦. ಭಾರತ ರಾಷ್ಟ್ರವು ದುರ್ಬಲವಾಗದಿರಲಿ.

ಈ ಪ್ರಾಪಂಚಿಕ ಬಂಧನದ ನವಯುಗದ ವಿಷಮ ಸ್ಥಿತಿಯಲ್ಲಿ ಬಹು ಜನರು ಪಾಪ-ಪುಣ್ಯಗಳೆರಡನ್ನೂ ದೇವರ ತಲೆಯ ಮೇಲೆ ಹೊರಿಸಿ ಬಿಡುತ್ತಾರೆ. ತಾವು ಪದ್ಮ ಪತ್ರದ ಮೇಲಿರುವ ನೀರಿನ ಹಾಗೆ ನಿರ್ಲಿಪ್ತರಾಗಿದ್ದೇವೆಂದು ಭಾವಿಸುತ್ತಾರೆ. ನಿಜಕ್ಕೂ ಸರ್ವದಾ ಪರಿಶುದ್ಧ ಭಾವದಲ್ಲಿರಬಲ್ಲವನಾದರೆ ಅವನು ಮುಕ್ತನೇ ಸರಿ ; ಆದರೆ ಒಳ್ಳೆಯ ಸಮಯ

ದಲ್ಲಿ "ನಾನು" ಕೆಟ್ಟ ಸಮಯದಲ್ಲಿ "ನೀನು" ಎಂಬ ಭಾವ ವ್ಯಕ್ತವಾಗುವದಿದು ವಿಚಿತ್ರವೇ ಸರಿ.

ಜನರು ನಮ್ಮನ್ನು ಸ್ತುತಿಸಲಿ, ನಿಂದಿಸಲಿ. ನಮ್ಮ ಮೇಲೆ ಲಕ್ಷ್ಮಿಯ ಕೃಪೆಯಾಗಲಿ; ಆಗದಿರಲಿ. ಇಂದೇ ಮರಣವಾಗಲಿ, ಅಥವಾ ಮತ್ತೊಂದು ಯುಗದಲ್ಲಿ ಮರಣವಾಗಲಿ; ಆದರೆ ನ್ಯಾಯವಾದ ಮಾರ್ಗ ಮಾತ್ರ ಬಿಟ್ಟು ಹೋಗಬಾರದು. ಅದೆಷ್ಟೋ ಬಿರುಗಾಳಿಗಳನ್ನು ತಟಾಯಿಸಿದ ಮೇಲೆ ಶಾಂತಿ ಸುಧೆಯು ದೊರೆಯುವದು! ಯಾರು ಯಾರು ಎಷ್ಟೆಷ್ಟು ದೊಡ್ಡವರೆನಿಸಿಕೊಳ್ಳುವರೋ, ಅವರು ಅಷ್ಟಷ್ಟು ಕಠಿಣವಾದ ಕಷ್ಟ ಕಾರ್ಪಣ್ಯಗಳ ಪರೀಕ್ಷೆಗೆ ಗುರಿಯಾಗುತ್ತಾರೆ. ಈ ಪರೀಕ್ಷೆಯೆಂಬ ಒರೆಗಲ್ಲಿನಲ್ಲಿ ಅವರ ಜೀವನವನ್ನು ಉಜ್ಜಿ ನೋಡಿದ ಮೇಲೆ ಜಗತ್ತು ಅವರನ್ನು ದೊಡ್ಡವರೆಂದು ಒಪ್ಪಿಕೊಳ್ಳುತ್ತದೆ. ನಿಜವಾದ ದೊಡ್ಡವರಲ್ಲಿ ಅಹಂಭಾವವಿರುವದಿಲ್ಲ. ಇವರಲ್ಲಿ ಜ್ಞಾನೋದಯವಾಗಿರುತ್ತದೆ. ಇಂತಹ ಜ್ಞಾನಿಗಳಿಂದಲೇ ಸಮಾಜವು ಸುಸಂಸ್ಕೃತವಾಗಲು ಸಾಧ್ಯ. ಸುಸಂಸ್ಕೃತ ಸಮಾಜಗಳಿಂದ ನಗರ ಸುಧಾರಣೆಯಾಗುವುದಲ್ಲದೆ, ರಾಜ್ಯದ ಎಲ್ಲ ವಿಭಾಗಗಳು ಸುಧಾರಣೆಗೊಳ್ಳುವುದರಿಂದ ರಾಷ್ಟ್ರಕಲ್ಯಾಣಕ್ಕೆ ಒಳ್ಳೇ ಸಹಾಯವಾಗುವುದು.

ಯಾವ ರಾಷ್ಟ್ರದಲ್ಲಿ ಸ್ತ್ರೀಯರು ಒಬ್ಬಂಟಿಗರಾಗಿ ನಿರ್ಭಯದಿಂದ ಬೀದಿಗಳಲ್ಲಿ ಅಲೆದಾಡಲು ಸಾಧ್ಯವಿದೆಯೋ ಆ ರಾಷ್ಟ್ರವು ಸುಸಂಸ್ಕೃತ ರಾಷ್ಟ್ರವೆಂಬುದನ್ನರಿತುಕೊಂಡು ಭಾರತವೂ ಒಂದು ಆದರ್ಶವಾದ ಸುಸಂಸ್ಕೃತ ರಾಷ್ಟ್ರವಾಗುವಂತೆ ನಾವೆಲ್ಲರೂ ಅವಿಶ್ರಾಂತ ಪರಿಶ್ರಮ ತೆಗೆದುಕೊಳ್ಳಬೇಕು.

ಪ್ರಸ್ತುತ ಸಮಯದಲ್ಲಿ ಕೇವಲ ಬೃಂದಾವನದೊಳಗೆ ಕೊಳಲನ್ನು ಊದುವ ಕೃಷ್ಣನನ್ನೇ ನೋಡುತ್ತ ಕುಳಿತರೆ ನಡೆಯುವುದಿಲ್ಲ. ಅದರಿಂದ ಜೀವನದ ಉದ್ಧಾರವಾಗಬೇಕೆಂಬುದನ್ನು ನಾವು ಗಮನಿಸಬೇಕು. ಈಗ ಬೇಕಾದುದು ಸಿಂಹನಾದ ಮಾಡುತ್ತಿರುವ ಶ್ರೀ ಕೃಷ್ಣನ ಪೂಜೆ! ಧನುರ್ಧಾರಿಯಾದ ವೀರ ಶ್ರೀರಾಮನ ಪೂಜೆ!! ತಾಂಡವ ನೃತ್ಯಗೈವ ನಟರಾಜನ ಪೂಜೆ!!! ರೌದ್ರಮೂರ್ತಿ ಮಹಾ ಕಾಳೀಮಾತೆಯ ದಿವ್ಯತಮ ನಿರ್ಮಲ ಪೂಜೆ!!!! ಕೈಗೊಂಡರೆ ಮಾತ್ರ ಜನರು ವಿಶೇಷವಾಗಿ ಪ್ರಾಮಾಣಿಕ ಉದ್ಯಮಶೀಲ, ಕರ್ಮಶೀಲ, ಶಕ್ತಿಸಂಪನ್ನರಾಗಿ ಎದ್ದು ನಿಲ್ಲುವರು; ಇದಕ್ಕಾಗಿ ಜ್ಞಾನದ ಅವಶ್ಯಕತೆಯಿದೆ.

ಜ್ಞಾನವೇನೋ ಒಳ್ಳೆಯದೇ; ಆದರೆ ಅದು ಅಹಂಕಾರಕ್ಕೆಡೆಗೊಡಬಾರದು. ಜ್ಞಾನದ ಆವೇಗದಲ್ಲಿ ಹೆತ್ತ ಮಾತೆಯ ಮರೆದು ಕಾಲವನು ಕಳೆಯದಿರು. ಮತ್ತೆ ಮಡದಿಯ ಮೋಸದ ಬಲೆಯೊಳಗೆ ಸಿಲುಕದಿರು. ನಿನ್ನಲ್ಲಿ ಧನವಿರಲು ಸುತ್ತುವರು ನಿನ್ನನ್ನು; ಧನವಳಿದ ಮರುದಿನವೇ ನಿನ್ನನ್ನು ತೊರೆಯುವರು. ಇದನರಿತು ಮೋಸ ಮಂತ್ರದ ಕಪಟ ನಾಟಕದ ಸುಳಿವನ್ನು ಹೇಸಿ ಬದುಕನು ವಿಕಟ ರೂಪದಲಿ ತರದಿರು. ಹಣದಿಂದ ಕಲೆಯ ಮೌಲ್ಯವನು ಅಳೆಯದಿರು. ಘನಶೀಲ ಸೌಜನ್ಯ ಸಂಸ್ಕೃತಿಗೆ ಬೆಲೆ ಕೊಡು. ಯುವಕ-ಯುವತಿಯರು ಕೆಟ್ಟರಾ ರಾಷ್ಟ್ರ ದುರ್ಬಲ! 'ಕವಿ ಶಿಲ್ಪಿಗಳು ಕೆಟ್ಟರೆ ಆ ರಾಷ್ಟ್ರ ದುರ್ಬಲ!! ಮಾನ ಸನ್ಮಾನವಿಲ್ಲದಾ ರಾಷ್ಟ್ರ ದುರ್ಬಲ!!! ಜ್ಞಾನಿಗಳ ಕೊರತೆಯುಳ್ಳಾ ರಾಷ್ಟ್ರ ದುರ್ಬಲ!!!!

ಇದನ್ನರಿತುಕೊಂಡು ನಮ್ಮ ರಾಷ್ಟ್ರವು ದುರ್ಬಲವಾಗದಂತೆ ಸರ್ವತೋಮುಖವಾಗಿ ನಾವು ಜಾಗ್ರತರಾಗಿರುವುದು ಒಳ್ಳೆಯದು. ಒಟ್ಟಿನಲ್ಲಿ ಭಾರತವು ದುರ್ಬಲರಾಷ್ಟ್ರವಾಗದಿರಲಿ.

೫೧. ನಮ್ಮ ಸ್ವಾತಂತ್ರ್ಯವು ಸುಸಂಸ್ಕೃತವಾಗಿ ಸುಭದ್ರವಾಗಲಿ.

ದೇವರ ಸಮಷ್ಟಿಯ ದೃಷ್ಟಿಯೆಂದರೆ ಜಗತ್ತು. ಅದನ್ನು ಪೂಜಿಸುವುದೆಂದರೆ ಸೇವಿಸುವುದು. ಇದೇ ನಿಜವಾದ ಕರ್ಮ. ದೇವರ ಮುಂದೆ ಅನ್ನದ ತಟ್ಟೆಯನ್ನು ಕೆಲವು ನಿಮಿಷಗಳವರೆಗೆ ಅಥವಾ ಅರ್ಧ ಘಂಟೆಯವರೆಗೆ ಇಟ್ಟಿರಬೇಕೆಂದು ಅನುಮಾನಿಸುವುದು ಕರ್ಮವಲ್ಲ. ಅದೊಂದು ಬಗೆಯ ಹುಚ್ಚುತನ. ಇಂತಹ ಕರ್ಮಕ್ಕೂ ನಿಜವಾದ ಧರ್ಮಕ್ಕೂ ಮಹದಂತರವಿದೆ. ಧರ್ಮದ ಬಗ್ಗೆ ಜನತೆಯಲ್ಲಿ ಸಮಂಜಸವಾದ ಕಲ್ಪನೆಯಿಲ್ಲದಿರುವುದೇ ದುಷ್ಕರ್ಮಕ್ಕೆಡೆಯುಂಟಾಗುತ್ತದೆನ್ನಬಹುದು.

ಇದೀಗ ಧರ್ಮ ಕೆಣಕುವುದೊಂದು ಕಲಿಯುಗದ ಆಧುನಿಕ ರೀತಿಯಾಗಿದೆ. ಮರ್ಮಭೇದವೆಂಬುದು ಜನತೆಯಲ್ಲಿ ಸಹಜವಾಗಿದೆ. ಸುಳ್ಳು ಸಾಧಕರಿಗೆ ಸಂಪತ್ತು ಒಲಿಯುತ್ತಿದೆ. ಸಜ್ಜನರ ಪ್ರಗತಿಗೆ ಆಪತ್ತು ಘಟಿಸುತ್ತಿದೆ. ಪಾಪಾತ್ಮ ಮನುಜರಿಗೆ ತಾಪತ್ರಯವಿಲ್ಲದಾಗಿದೆ. ದುರುಳು ಮಾನವರಿಗೆ ಶರಣರ ಭಯವಿಲ್ಲದಾಗಿದೆ. ಪುಂಡ-ಪೋಕರಿ ಜನಕೆ ಸಹ ಬಹುಮಾನ ಸನ್ಮಾನ ದೊರೆಯುತಿದೆ. ಶಿಷ್ಟರಿಗೆ ದುರ್ಗತಿಯು ಒದಗುವ ಕಾಲವಿದು! ದುಷ್ಟರಿಗೆ ಶ್ರೇಷ್ಠಪದ ದೊರಕುವ ಸಮಯವಿದು!! ಇಷ್ಟಬಾಂಧವರನ್ನು ದೂರಿಡುವ ಕಾಲವಿದು!!! ಕಷ್ಟ ಕೊಡುವವರಿಗನುಕೂಲ ಕಾಲವಿದು. ಇದನ್ನರಿತು ಸಮಯೋಚಿತ ಮಾರ್ಗದಲ್ಲಿ ಚಲಿಸುವದೊಳ್ಳೆಯದು.

ಈ ಪ್ರಸ್ತುತ ಸಮಯದ ಪ್ರಜಾಸತ್ತಾತ್ಮಕ ಯುಗದಲ್ಲಿ ಧರ್ಮಗುರುಗಳು ಕೂಡಾ ಸರಕಾರದ ರೂಪರೇಷೆಗಳಿಗೆ ಹೊಂದಿಕೊಳ್ಳುವ ಸಮಯ ಬಂದಿದೆ. ದೇವಾಲಯ, ಮಠ ಮೊದಲಾದವುಗಳು ಕೂಡಾ ಈಗ ಪಬ್ಲಿಕ್ ಟ್ರಸ್ಟ್ ಆಗುತ್ತಿವೆ. ಇನ್ನು ಕೆಲವೇ ವರ್ಷಗಳಲ್ಲಿ ಮಠಾಧಿಪತಿಗಳು, ಧರ್ಮಪೀಠಾಧಿಕಾರಿಗಳು ಕೂಡಾ ಸರ್ಕಾರದ ಚಟುವಟಿಕೆಗಳಿಗನುಗುಣವಾಗಿ ಒಂದು ಧರ್ಮ ಪೀಠದಿಂದ ಮತ್ತೊಂದು ಧರ್ಮಪೀಠಕ್ಕೆ ವರ್ಗಾವಣೆಯಾಗುವ ಪ್ರಸಂಗ ಬಂದರೂ ಬರಬಹುದು. ಇದನ್ನರಿತುಕೊಂಡು ಜಗದ್ಗುರುಗಳು ಸಾರ್ವಜನಿಕ ಹಿತಚಿಂತಕರಾಗಿ, ರಾಷ್ಟ್ರ ಹಿತಚಿಂತಕರಾಗಿ ಕಳಕಳಿಯಿಂದ ತಮ್ಮ ಚಟುವಟಿಕೆಗಳಲ್ಲಿ ಮಾರ್ಪಾಟು ಮಾಡಿಕೊಳ್ಳಬೇಕಾಗುತ್ತದೆ; ಆದರೆ ಸರಕಾರದವರು ಈ ಧರ್ಮಗುರುಗಳ ನಿರ್ವಂಚನೆಯ ಯೋಗ್ಯ ಚಟುವಟಿಕೆಗಳ ಸದುಪಯೋಗ ಮಾಡಿಕೊಂಡರೆ ಮಾತ್ರ ನಮ್ಮ ರಾಷ್ಟ್ರದ ಕಲ್ಯಾಣ ಸಾಧಿಸಬಹುದು. ಗುರುಬಲವಿಲ್ಲದ ರಾಷ್ಟ್ರ ಕರಿಬೀಳುವದರಲ್ಲಿ ಸಂದೇಹವಿಲ್ಲ; ಆದರೆ "Character is the crown of life" ಶೀಲವು ಜೀವನದ ವೈಭವಕ್ಕೆ ಕಳಸವಿದ್ದಂತೆ" ಎಂಬುದನ್ನು ಧರ್ಮಗುರುಗಳು, ಸರಕಾರದವರು, ಪ್ರಜೆಗಳೂ ಗಮನಿಸಿ ಸಮಯೋಚಿತವಾದ ಚಟುವಟಿಕೆಗಳನ್ನು ಕೈಗೊಳ್ಳುವದವಶ್ಯವಿದೆ.

ಕೆಲವು ಧರ್ಮಾಧಿಕಾರಿಗಳು ಈಗಾಗಲೇ ಬಡವರ, ದೀನದಲಿತರ ಹಿತಚಿಂತಕರಾಗಿ ಸಾರ್ವಜನಿಕ ಸೇವೆಯನ್ನು ಉತ್ತಮ ರೀತಿಯಲ್ಲಿ ವ್ಯಕ್ತಗೊಳಿಸುತ್ತಿರುವುದು ಸ್ತುತ್ಯವಾದ

ಕಾರ್ಯ ; ಆದರೆ ಇತ್ತೀಚೆಗೆ ದೇಶಮಧ್ಯದಲ್ಲಿ ಅನ್ಯಾಯದ, ಅನೀತಿಯ ಅನಾಗರಿಕತೆಯ ದುಷ್ಟ ಚಟುವಟಿಕೆಗಳೂ, ಘಕಾಯತರ ದೌರ್ಜನ್ಯದ ಕ್ರೂರಕೃತಿಗಳೂ ಹೆಚ್ಚಾಗತೊಡಗಿವೆ. ಇದನ್ನು ಪ್ರತಿಭಟಿಸುವ ಎದೆಗಾರಿಕೆಯು ಜನತೆಯಲ್ಲಿ ಇಲ್ಲದಿರುವುದು ವಿಷಾಧಕರ. ಇಂಥ ಸಮಯದಲ್ಲಿ ಪರಮ ಪೂಜ್ಯ ಜಗದ್ಗುರುಗಳು ಕಳಕಳಿಯಿಂದ ತಮ್ಮ ತಪಸ್ಸಿನ ಫಲದಿಂದ ಸದ್ಬೋಧೆಯಿಂದ ಕ್ರೂರಕರ್ಮಿಗಳ ಮನಸ್ಸನ್ನು ಪರಿವರ್ತನೆಗೊಳಿಸಿ ಸಂಬಂಧಿಸಿದ ಆಡಳಿತ ಗಾರರಿಗೆ ಪರೋಕ್ಷವಾಗಿ ನೆರವಾದರೆ ನಮ್ಮ ರಾಷ್ಟ್ರೋದ್ಧಾರವಾಗಬಹುದು. ಪರಮ ಪೂಜ್ಯ ಜಗದ್ಗುರುಗಳ ತಪೋಬಲದಿಂದ ನಮ್ಮ ದೇಶವು ಗಂಡಾಂತರದಲ್ಲಿ ಮುಳುಗದೆ ದೊರೆತ ಸ್ವಾತಂತ್ರ್ಯವು ಸುಸಂಸ್ಕೃತವಾದ ಸುಭದ್ರ ಸ್ವರೂಪವನ್ನು ಹೊಂದುವಂತಾಗಲೆಂದು ಹಾರೈಸುವಾ.

(ಮುಗಿಯಿತು.)

ಗುರು ಮಹಿಮೆ

ಎಂಥಾ ಮಾಟ ಮಾಡಿದಳವ್ವಾ ಗುರು ?
ಮಾತೆ ಮಹಾದೇವಿ ಮಾಡಿದ್ದ ನೋಡವ್ವಾ ! ॥ ಪ ॥

ಎನ್ನಯ ಭವಗೆಡಿಸಿ ಬಿಟ್ಟಳವ್ವಾ ತಂಗಿ
ಎನ್ನನ್ನು ತನ್ನಂತೆ ಮಾಡಿದಳವ್ವಾ ತಂಗಿ ॥ ಅ. ಪ ॥

ಭಕ್ತಿಯೋಗ ಕಲಿಸಿದಳವ್ವಾ ಎನಗೆ
ಭವ ಬಂಧನವ ಬಿಡಿಸಿಹಳವ್ವಾ ಎನಗೆ
ಹೊಸ ಬೆಳಕು ತೋರಿದಳವ್ವಾ ಎನಗೆ
ಹೊಸ ಜನುಮ ನೀಡಿದಳವ್ವಾ ಎನಗೆ ॥ ೧ ॥

ಕರ್ಮವನು ಹರಿದಿಹಳವ್ವಾ ತಂಗಿ
ಧರ್ಮವನು ಕೊಟ್ಟಳವ್ವಾ ತಂಗಿ
ಕಾಯಕದ ಮರ್ಮ ತಿಳಿಸಿದಳವ್ವಾ
ಜೀವನ ಧರ್ಮ ಅರುಹಿದಳವ್ವಾ ॥ ೨ ॥

ಬಯಲನು ರೂಪವ ಮಾಡಿಹಳವ್ವಾ
ಬಯಲಿಗೆ ನಿರ್ಭಯಲು ಮಾಡಿಹಳವ್ವಾ
ಬಯಲು ಗುಲಬರ್ಗದ ಆಲಯದಲ್ಲಿ
ತಿಳಿಯಲು ಮುಕುತ ನಾನಾದೆನವ್ವಾ ॥ ೩ ॥

– **ಮುಕುಂದ ಕೆ. ಕಮ್ಮಾರ, ಬಿ.ಕಾಂ.,**
ಎಂ. ಬಿ. ನಗರ, ಗುಲ್ಬರ್ಗಾ

ರೂ. 151-00 ಸಲ್ಲಿಸಿ ಕಲ್ಯಾಣ ಕಿರಣಕ್ಕೆ ಆಜೀವ ಸದಸ್ಯರಾದ ಸದ್ಭಕ್ತರು

ಶರಣ/ಶರಣೆಯರುಗಳಾದ—

1626 ಬಸವರಾಜ ಮೂಲಗೆ, ಗುಲ್ಬರ್ಗಾ
1627 ಎಂ. ಎನ್. ಶ್ರೀಯಾನ್, ಬಿ.ಎ., ಮಂಗಳೂರು
1628 ಸಂಗಣ್ಣ ಪರಶಿವಪ್ಪಗೋಳ್, ಗುಲ್ಬರ್ಗಾ
1629 ಶ್ರೀ ಹರವೀ ಬಸವೇಶ್ವರ ಟ್ರೇಡಿಂಗ್ ಕಂ., ಗುಲ್ಬರ್ಗಾ
1630 ಮಲ್ಲಿಕಾರ್ಜುನ ಹನುಮಂತಪ್ಪಾ, ಆಲೂರು
1631 ಸಿ. ಸತ್ಯನಾರಾಯಣ, ರಾಯಚೂರು
1632 ಮಲ್ಲಿಕಾರ್ಜುನ ಜವಳಗಡ್ಡಿ, ರಾಯಚೂರು
1633 ಸೋಮಲಿಂಗ ರಾಮಲಿಂಗ, ಬೆಳಗಾಂವಿ
1634 ಸಿದ್ಧರಾಮಯ್ಯ, ಗುಲ್ಬರ್ಗಾ
1635 ಡಾ॥ ಮಹಾದೇವಿ ಮಲಕರೆಡ್ಡಿ, ಗುಲ್ಬರ್ಗಾ
1636 ಎಸ್. ಎಸ್. ಇಬ್ರಾಹಿಂಪೂರ, ಗುಲ್ಬರ್ಗಾ
1637 ಇಂದಿರಾ ಸಂಗಪ್ಪ ಸಲ್ಲರ, ಗುಲ್ಬರ್ಗಾ
1638 ಶಿವಲೀಲಾ ಅ. ತೇರದಾಳ, ಗುಲ್ಬರ್ಗಾ
1639 ಎಸ್. ಕೆ. ಅರುಣ, ಗುಲ್ಬರ್ಗಾ
1640 ಆಶಾದೇವಿ ಎಂ. ನೂಲಾ, ಗುಲ್ಬರ್ಗಾ
1641 ಗುರುಬಸಪ್ಪಾ ಕಲ್ಲಪ್ಪ ಕಂಬದ, ಸೋಲಾಪೂರ
1642 ಶಿವಲಿಂಗಪ್ಪಾ ಗುರುಲಿಂಗಪ್ಪಾ ಹುಡುಗೆ, ಗುಲ್ಬರ್ಗಾ
1643 ನೀಲ ಬಸವರಾಜ್ ಗಡ್ಗಲ್, ಗುಲ್ಬರ್ಗಾ
1644 ವೀರೇಶ. ವಿ. ರಾಮಪೂರ್, ಗುಲ್ಬರ್ಗಾ
1645 ಶಿವರಾಯ ಬಾಬಜಿ, ಗುಲ್ಬರ್ಗಾ
1646 ವಿ. ವಿ. ಕಿರಣಗಿ, ಗುಲ್ಬರ್ಗಾ
1647 ನೀಲಕಂಠ ದೇವರಗುಡಿ, ಗುಲ್ಬರ್ಗಾ
1648 ರೇವಪ್ಪ ವೀರಪ್ಪ ಬಿರಾದಾರ, ಗುಲ್ಬರ್ಗಾ
1649 ಪಿ. ಗಣಪತಿ, ಗುಲ್ಬರ್ಗಾ
1650 ಶ್ರೀಮಂತ, ಡ್ರೈವರ್, ಗುಲ್ಬರ್ಗಾ
1651 ಎಚ್. ಮಹಾದೇವಪ್ಪಾ, ಜೆ.ಇ., ಗುಲ್ಬರ್ಗಾ
1652 ಶಾಂತಪ್ಪಾ ತಕಳ್ಳಿ, ಜೆ.ಇ., ಗುಲ್ಬರ್ಗಾ
1653 ಸೋಮಶೇಖರ ಪಾಟೀಲ, ಗುಲ್ಬರ್ಗಾ
1654 ಶಂಕರಪ್ಪಾ ಮಹಾಂತಗೋಳ್, ಗುಲ್ಬರ್ಗಾ

1655 ಸಂಗಪ್ಪಾ ನಾಗಮ್ಮಗುಡ್ಡಾ, ಗುಲ್ಬರ್ಗಾ
1656 ಯಶವಂತರಾವ್ ಜಿ. ಹರಸೂರು, ಗುಲ್ಬರ್ಗಾ
1657 ನಿಂಗಣ್ಣ ಶಂಕರಪ್ಪಾ ಪೂಜಾರಿ, ಗುಲ್ಬರ್ಗಾ
1658 ಬಸಮ್ಮಾ ಸೂರ್ಯಕಾಂತ, ಗುಲ್ಬರ್ಗಾ
1659 ಸಂಗಪ್ಪಾ ಚಿಗೋಣ, ಗುಲ್ಬರ್ಗಾ
1660 ಬಸಣ್ಣ ಗಡ್ಡದ, ಗುಲ್ಬರ್ಗಾ
1661 ಶಿವಶರಣಪ್ಪಾ, ಮುಖ್ಯೋಪಾಧ್ಯಾಯರು, ಗುಲ್ಬರ್ಗಾ
1662 ಪಾರ್ವತಿ ಬಿ. ಚಕ್ಕಿ, ಗುಲ್ಬರ್ಗಾ
1663 ಸಂಗಪ್ಪಾ, ಅಟೆಂಡರ್, ಗುಲ್ಬರ್ಗಾ
1664 ರೇವಪ್ಪಾ ಭೀಮಣ್ಣಾ, ಗುಲ್ಬರ್ಗಾ
1665 ಎಸ್. ಎಸ್. ನಂದಿಕೂರ, ಗುಲ್ಬರ್ಗಾ
1666 ಎಸ್. ಜಿ. ಮೇಳಕುಂದಿ, ಗುಲ್ಬರ್ಗಾ
1667 ಮಲ್ಲಿಕಾರ್ಜುನ ರೇವಣಸಿದ್ಧಪ್ಪಾ ಸಜ್ಜನ್, ಗುಲ್ಬರ್ಗಾ
1668 ಟಿ. ಬಸವಲಿಂಗಣ್ಣಾ, ಇಂಜನೀಯರ್, ಗುಲ್ಬರ್ಗಾ
1669 ಪಿ. ಬಸವರಾಜ, ಜೆ.ಇ., ಗುಲ್ಬರ್ಗಾ
1670 ಶ್ರೀದೇವಿ ವೀರಣ್ಣ ಬೊಮ್ಮನಹಳ್ಳಿ, ಗುಲ್ಬರ್ಗಾ
1671 ಶ್ರೀ ಬಸವೇಶ್ವರ ಆಯಿಲ್ ಘಾಣ, ಗುಲ್ಬರ್ಗಾ
1672 ಸಿದ್ಧರಾಮಪ್ಪಾ ಗುರುಪಾದಪ್ಪಾ ಲಖಮಣ, ಗುಲ್ಬರ್ಗಾ
1673 ಸೋಮಶೇಖರ ಮಣ್ಣೂರ, ಗುಲ್ಬರ್ಗಾ
1674 ಕುಮಾರಿ ಎಸ್. ಉಷಾ, ದಾವಣಗೆರೆ
1675 ವೀರಣ್ಣ ಬಸಣ್ಣ ಅಳ್ಳೊಳ್ಳಿ, ಗುಲ್ಬರ್ಗಾ
1676 ಅಣ್ಣಾರಾವ ಬಸವಂತರಾವ ಪಾಟೀಲ, ಗುಲ್ಬರ್ಗಾ
1677 ಶರಣಪ್ಪಾ ರೇವಣಪ್ಪಾ ಬಗೋತಿ, ಗುಲ್ಬರ್ಗಾ
1678 ಚಂದ್ರಕಾಂತ ಸಿದ್ರಾಮಪ್ಪಾ ಪಾಟೀಲ, ಗುಲ್ಬರ್ಗಾ
1679 ಶಂಕರೆಪ್ಪಾ ಎಸ್. ಮೂಲಗೆ, ಮಾದನ ಹಿಪ್ಪರ್ಗಿ
1680 ಎಸ್. ಎಸ್. ಮುಗಳಿ, ಜೆ.ಇ., ಗುಲ್ಬರ್ಗಾ
1681 ಬಿ. ಬಸಪ್ಪಾ, ಜೆ.ಇ., ಗುಲ್ಬರ್ಗಾ
1682 ಶಿವರಾಜ ಜಗನ್ನಾಥರಾಜ ನಂದ್ಯಾಳ, ಗುಲ್ಬರ್ಗಾ
1683 ಗುರುಲಿಂಗಪ್ಪಾ ಹನುಮಂತರಾವ ಬಿರಾದಾರ, ಗುಲ್ಬರ್ಗಾ
1684 ಬಸವರಾಜ ಶಂಕರೆಪ್ಪಾ ಪಾಟೀಲ, ರಾಯಚೂರು
1685 ಸಿದ್ರಾಮಪ್ಪಾ ಸಿದ್ರಾಮಗೋಳ್, ಗುಲ್ಬರ್ಗಾ
1686 ಶ್ರೀಕಂಠಶೆಟ್ಟಿ, ನಿರೀಕ್ಷಕರು, ಗುಲ್ಬರ್ಗಾ

1687 ಪಾಣಿಕರೆಡ್ಡಿ ಜಟ್ಟೂರಕರ್, ಗುಲ್ಬರ್ಗಾ
1688 ಶಾಂತ ಶಿವಶರಣಪ್ಪಾ ಹಿಂಡಿ, ಗುಲ್ಬರ್ಗಾ
1689 ಚಂದ್ರಶೇಖರ ಗುರುಲಿಂಗಪ್ಪಾ, ಗುಲ್ಬರ್ಗಾ
1690 ಕಾಶಪ್ಪಾ ಅಪ್ಪಾರಾವ, ಗುಲ್ಬರ್ಗಾ
1691 ಗೌರಿಶಂಕರ ಚನ್ನಬಸಪ್ಪಾ ಕಕ್ಕಳ್ಳಿ, ಗುಲ್ಬರ್ಗಾ
1692 ಬಸವಂತರಾವ ಯಶವಂತರಾವ, ಅಂಬಲಗಿ
1693 ಚನ್ನಪ್ಪಾ ಪಾಟೀಲ, ವಿ. ಕೆ. ಸಲಗರ್
1694 ಸುರೇಶಕುಮಾರ ಸುಭಾಷ್ಚಂದ್ರ ಮುನಳ್ಳಿ, ಗುಲ್ಬರ್ಗಾ
1695 ಗಿರಿಜಾದೇವಿ ಹಡಗಲಿ ಮಠ, ಗುಲ್ಬರ್ಗಾ
1696 ನಾಗಭೂಷಣ ಶಿವಶಂಕರಪ್ಪಾ ನಿಗ್ಗುಡಗಿ, ಗುಲ್ಬರ್ಗಾ
1697 ಶಿವಕುಮಾರ ಜಿ. ದೋಶೆಟ್ಟಿ, ಗುಲ್ಬರ್ಗಾ
1698 ಆರ್. ಎಸ್. ಚನ್ನಬಸಪ್ಪಾ, ಜೆ.ಇ., ಗುಲ್ಬರ್ಗಾ
1699 ನಾಗೇಂದ್ರಪ್ಪಾ ಕಲ್ಯಾಣಪ್ಪಾ ಹುನಳ್ಳಿ, ಗುಲ್ಬರ್ಗಾ
1700 ಚನ್ನಮಲ್ಲಪ್ಪಾ ಗುರಪ್ಪ ಜಂಗಳಿ, ಗುಲ್ಬರ್ಗಾ
1701 ವಿಜಯಕುಮಾರ ಮಲ್ಲೇಶಪ್ಪ ಹುನಳ್ಳಿ, ಗುಲ್ಬರ್ಗಾ
1702 ಶರಣಬಸಪ್ಪಾ ಶಿವಲಿಂಗಪ್ಪಾ ಹುನಳ್ಳಿ, ಗುಲ್ಬರ್ಗಾ
1703 ನಾಗೇಂದ್ರಪ್ಪ ಶರಣಪ್ಪ ನಿಂಗಾಳ ಗೋಳ್, ಗುಲ್ಬರ್ಗಾ
1704 ಗುರುಶಾಂತಪ್ಪಾ ಶರಣಪ್ಪಾ, ಗುಲ್ಬರ್ಗಾ
1705 ಬಸವಣ್ಣಪ್ಪಾ ಗುರಪ್ಪಾ ಹಡಪದ, ಗುಲ್ಬರ್ಗಾ
1706 ಶರಣಪ್ಪಾ ಗುರಪ್ಪಾ ಡೋಣ್ಣೂರ, ಗುಲ್ಬರ್ಗಾ
1707 ಶರಣಪ್ಪಾ ಶಂಕರೆಪ್ಪಾ ಪಾಟೀಲ, ಗುಲ್ಬರ್ಗಾ
1708 ಬಸವರಾಜ ಶಿವಶರಣಪ್ಪಾ ವಜಾಪೂರ, ಗುಲ್ಬರ್ಗಾ
1709 ಸಿದ್ರಾಮಪ್ಪಾ ಶರಣಪ್ಪಾ ಹುನಳ್ಳಿ, ಗುಲ್ಬರ್ಗಾ
1710 ಸಿದ್ಧಣ್ಣ ಶಾಂತಪ್ಪಾ ಪಾಟೀಲ, ಗುಲ್ಬರ್ಗಾ
1711 ಶಂಕರೆಪ್ಪಾ ಉಳಿಪ್ಪಾ ಬುಳ್ಳಾ, ಗುಲ್ಬರ್ಗಾ
1712 ಚಂದ್ರಶೇಖರ ಮಲ್ಲೇಶಪ್ಪಾ ಹುನಳ್ಳಿ, ಗುಲ್ಬರ್ಗಾ
1713 ನಾಗೇಂದ್ರಪ್ಪಾ ಸಂಗಣ್ಣ ಹೆಂಬಾಡಿ, ಗುಲ್ಬರ್ಗಾ
1714 ಶ್ರೀ ಮಲ್ಲಿಕಾರ್ಜುನ ತರುಣ ಸಂಘ, ಗುಲ್ಬರ್ಗಾ
1715 ಶಂಕರಗೌಡ ಪಾಟೀಲ, ಗುಲ್ಬರ್ಗಾ
1716 ಅನ್ನಪೂರ್ಣ ಎಸ್. ಖಾನಾಪೂರ, ಗುಲ್ಬರ್ಗಾ
1717 ಸುಭಾಷ ಶಟಕಾರ, ಗುಲ್ಬರ್ಗಾ
1718 ವಿರುಪಾಕ್ಷಪ್ಪಾ ಜಂಬಣ್ಣ ನಾಗ್ಲೀಕರ್. ಗುಲ್ಬರ್ಗಾ

ಶರಣ/ಶರಣೆಯರುಗಳಾದ—

1719 ಪಾರ್ವತಿ ಬಸವರಾಜ ಮೆಹೆತ್ರೆ, ಗುಲ್ಬರ್ಗಾ
1720 ವೀರಣ್ಣಾ ಶಂಕರೆಪ್ಪಾ ಖಂಡೆರಾವ, ಗುಲ್ಬರ್ಗಾ
1721 ಶ್ರೀ ವಾಸವಿ ಪ್ರಿಂಟರ್ಸ್, ಗುಲ್ಬರ್ಗಾ
1722 ಭಾಗ್ಯಶ್ರೀ ಪೈನಾನ್ಸ್, ಗುಲಬರ್ಗಾ
1723 ಶ್ರೀ ಕನ್ಯಕಾ ಫೈನಾನ್ಸ್, ಗುಲ್ಬರ್ಗಾ
1724 ಮಹಾದೇವಿ ಸುಭಾಶ್ಚಂದ್ರ ಉಪ್ಪಿನ, ಗುಲ್ಬರ್ಗಾ
1725 ಶಾರದಾ ಕೃಷ್ಣಮೂರ್ತಿ, ಬೆಂಗಳೂರು
1726 ಎಂ. ಮಹಾಂತೇಶ್, ವಕೀಲರು, ಗುಲ್ಬರ್ಗಾ
1727 ಜಗನ್ನಾಥ ಮಾಲಿ ಪಾಟೀಲ, ಹಾಗರಗಿ
1728 ಬಿ. ಸಿ. ಮುರುಗೋಡ್, ಪ್ರಿನ್ಸಿಪಾಲ್, ಅಣ್ಣಿಗೇರೆ

(ಮುಂದುವರೆದಿದೆ)

ಮಾತೃ ಹೃದಯಕ್ಕೆ ಮಣಿದು

ಜ್ಞಾನ ತೃಷೆಯನ್ನು ಹಿಂಗಿಸಿದೆ ತಾಯೆ
ವಚನಾಮೃತವ ಕುಡಿಸಿ ನೀಡಿದೆ ದಯೆ ॥ ಪ ॥

ಧರ್ಮದ ದಾರಿಯನು ತೋರಿಸಿದೆಯಮ್ಮಾ ।
ಮರ್ಮತಿಳಿಸಿ ಹೊಸ ರೂಪ ಕೊಟ್ಟೆಯಮ್ಮಾ ।
ಕರ್ಮ ಜಾಲದೀದ ಎಮ್ಮ ತಪ್ಪಿಸಿದೆಯಮ್ಮಾ ।
ನಿರ್ಮಲಾಂತಃ ಕರುಣದಿ ಕಂಡೆಯಮ್ಮಾ । ॥ ೧ ॥

ಬಸವನಾ ತತ್ವವು ದಿಸೆ ದಿಸೆಗೆ ಹಬ್ಬಿತಮ್ಮಾ ।
ರಸವತ್ತಾದ ನಿಮ್ಮ ಶೈಲಿ ಆಕರ್ಷಿತವಮ್ಮಾ ।
ಕಸವಾದ ಜನರನ್ನು ದಿವ್ಯ ಪುರುಷರನ್ನಾಗಿಸಿತಮ್ಮಾ ।
ಹಸನಾದ ಬದುಕು ನಡೆಸುವಂತೆ ಮಾಡಿತಮ್ಮಾ । ॥ ೨ ॥

ಶರಣರನುಭವ ಕೇಳಿದೆವು ನಿಮ್ಮಿಂದ ।
ಹರಣವಾದವು ದುಷ್ಟಗುಣಗಳು ಇಂದಿನಿಂದ ।
ಕಿರಣಪಸರಿಸಿ ಅನುಭಾವ ಸ್ಫುರಿಸಿತು ಹೃದಯದಿಂದ ।
ಅರಿವಿನ ಸೆಲೆ ಚಿಮ್ಮಿತು ತಾಯೆ ನಿಮ್ಮ ವಾಣಿಯಿಂದ । ॥ ೩ ॥

– **ಶಿವರಾಜ ಪಾಟೀಲ,** ಮಹಾಂತಪೂರ

ಬಸವನಾಡಿನಲ್ಲಿ ವಿಶ್ವಧರ್ಮ ಪ್ರವಚನ

ವರದಿ : **ಶಿವರಾಜ ಪಾಟೀಲ,** ಮಹಾಂತಪೂರ

ಕಲ್ಯಾಣದ ಕಡೆಯ ಬಾಗಿಲಾದ ಕಲಬುರ್ಗಿ, "ಶರಣರ ನಾಡು ಅಡೂಂಬೋಲನದ ಬೀಡು" ಎನ್ನಿಸಿಕೊಂಡಿದೆ. ಅಂಥ ಕಲಬುರ್ಗಿಯಲ್ಲಿ ವಿಶ್ವಧರ್ಮ ಪ್ರವಚನ. ಬಸವಾದಿ ಪ್ರಮಥರ ಅನುಭವದ ದಾಸೋಹ ನಡೆದದ್ದು ಎಲ್ಲರಿಗೂ ಸಂತೋಷ ತಂದಿದೆ. ವಿಶ ಕಲ್ಯಾಣ ಮಿಷನ್ ಸಂಸ್ಥೆಯ ಸಂಸ್ಥಾಪಕರೂ, ಏಕೈಕ ಮಹಿಳಾ ಜಗದ್ಗುರುಗಳೂ ಆದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ವಿಶ್ವಧರ್ಮವನ್ನು ಕುರಿತು ಪ್ರವಚನ ಮಾಡಿರುವುದು ಹೊಸ ಅನುಭವ ಹೊಸ ಪರಿಸರವನ್ನುಂಟುಮಾಡಿದೆ. ಗುಲ್ಬರ್ಗಾದ ನಾಗರಿಕರು ಮುಗ್ಧ ಮತ್ತು ಮೂಢ ಭಕ್ತಿಯಿಂದ ಕಾಲ ಕಳೆಯುತ್ತಿರುವಾಗ ಶರಣರ ಕ್ರಾಂತಿ ಕಾರಕ ಪ್ರಗತಿಪರ ವಿಚಾರಗಳನ್ನು ತಿಳಿಸಿ ಪೂಜ್ಯ ಮಾತಾಜಿಯವರು ಜಡ ಸಂಪ್ರದಾಯ ಮೂಢ ನಂಬಿಕೆಗಳನ್ನು ಕಿತ್ತು ಹಾಕಿದ್ದಾರೆ. ಈಗ ಜನತೆಯಲ್ಲಿ ವಿಚಾರ ಕ್ರಾಂತಿ ಮೂಡಿದೆ. ಅವರ ಪ್ರವಚನ ವಿಚಾರ ಕ್ರಾಂತಿಗೆ ಆಹ್ವಾನವಿತ್ತಂತೆಯಾಗಿತ್ತು.

ದಿನಾಂಕ ೪-೧೧-೮೪ ರಂದು ಪ್ರಾರಂಭವಾದ "ವಿಶ್ವಧರ್ಮ ಪ್ರವಚನ" ಕಾರ್ಯಕ್ರಮವು ನಗರದ ವಿಶಾಲವಾದ ಸ್ಥಳವನ್ನೊಳಗೊಂಡು ಸೂಪರ್ ಮಾರ್ಕೆಟ್‌ಗೆ ಕಳೆ ತಂದಂತಿತ್ತು. ನಗರದ ಮೇಯರ್ ಆದ ಶ್ರೀ ಸಿದ್ಧರಾಮಪ್ಪ ಐರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಶರಣರಾದ ಶ್ರೀ ಎಸ್. ಆರ್. ಗುಂಜಾಳರೂ ಭಾಗವಹಿಸಿದ್ದರು. ನಂತರ ನಗರದ ಅನೇಕ ಸಂಘ ಸಂಸ್ಥೆಗಳವರು ಪೂಜ್ಯ ಮಾತೆಯವರಿಗೆ ಹೂಮಾಲೆ ಅರ್ಪಿಸಿ ಸ್ವಾಗತಿಸಿದರು. ನಂತರ ಮಾತೆಯವರು ವಿಶ್ವಧರ್ಮ ಪ್ರವಚನದ ಉದ್ದೇಶ, ಗುರಿ, ಸಾಧನೆ, ಈಗ ಮುಂದಿರುವ ಕೆಲಸ ಎಲ್ಲವನ್ನೂ ಪ್ರಸ್ತಾಪಿಸಿದರು. ಅಲ್ಲದೆ ಜನತೆಗೆ ಧರ್ಮವನ್ನು ತಿಳಿಸಲು ತಾವಾಗಿಯೇ ನಗರದವರೆಗೆ ಬಂದಿರುವುದನ್ನೂ ಹೇಳಿದರು.

ಪೂಜ್ಯ ಮಾತೆಯವರ ಅಮೃತವಾಣಿಯಿಂದ. ಶರಣರ ವಚನಾಮೃತ ಸವಿಯುವ ಭಾಗ್ಯ ಜನತೆಗೆ ಲಭಿಸಿತು. ಅಮೃತ ಪುತ್ರರಾಗುವ ಭಾಗ್ಯ ಸಿಕ್ಕಿತು. ಮಾತೆಯವರ ಪ್ರವಚನ ದಿನೇ ದಿನೇ ಜನರ ಮೇಲೆ ಹೆಚ್ಚು ಪರಿಣಾಮ ಬೀರುತ್ತ ಸಾಕಷ್ಟು ಜನತೆಯನ್ನು ಆಕರ್ಷಿಸಿತು. ಸಭೆಗೆ ದೃಷ್ಟಿ ತಾಕಿತೋ ಎನ್ನುವ ರೀತಿಯಲ್ಲಿ ನೈಸರ್ಗಿಕ ಛಳಿಯು ಕೊರೆಯ ತೊಡಗಿತು. ಜನರು ಗಡ ಗಡ ನಡುಗುತ್ತ ಮುದ್ದಿಯಾಗಿಯೇ ಬಂದು ಕುಳಿತುಕೊಳ್ಳ ತೊಡಗಿದರು. ಆಗ ಮಾತೆಯವರು ಬಸವೇಶನಲ್ಲಿ ಮೊರೆಯಿಟ್ಟರು. ಧರ್ಮದಲ್ಲಿ ಶ್ರದ್ಧೆ ಬೆಳೆಸಿಕೊಂಡು ಪ್ರವಚನ ಕೇಳಬೇಕು ಎಂದಾಗ ಇದೇನು ತೊಂದರೆ ತಂದೆ ? ಎಂದು ಕಳವಳಗೊಂಡರು. ಪವಾಡವೇನೋ ಎನ್ನುವಂತೆ ಛಳಿ ಮಾಯವಾಯಿತು. ಮತ್ತೆ ಮೊದಲಿನಂತೆ ಹತ್ತಾರು ಸಹಸ್ರ ಜನ ಸೇರತೊಡಗಿದರು.

ಈ ಮಧ್ಯೆ ಮಾತೆಯವರು ಸಾಮೂಹಿಕ ಪೂಜೆ ಪ್ರಾರ್ಥನೆಗಳನ್ನು ಮಾಡಿಸಿದರು. ಜನರಿಗೆ ಪ್ರತ್ಯಕ್ಷ (Practical) ವಾಗಿ ಪೂಜಾ ವಿಧಾನವನ್ನು ತೋರಿಸಿಕೊಟ್ಟರು. ಗುಲ್ಬರ್ಗಾ ನಗರದಲ್ಲಿ ವಿಶಾಲವಾದ ಸಭಾಂಗಣವೊಂದು ಇಲ್ಲದ ಕಾರಣ ಪೂಜ್ಯರು ಭವ್ಯವಾದ ಮಂಟಪವೊಂದನ್ನು ಹಾಕಿಸಿದರು. ಒಂದು ಸಾವಿರ ಜನರನ್ನು ಹಿಡಿಸಬಹುದಾದ ಮಂಟಪ ಏತಕ್ಕೂ ಸಾಲದಾಯಿತು. ದಿನಾಂಕ ೩೦-೧೨-೧೯೮೪ ರ ಭಾನುವಾರದಂದು ನಡೆದ ಸಾಮೂಹಿಕ ಲಿಂಗಪೂಜೆ ಪ್ರತ್ಯಕ್ಷ ಕೈಲಾಸವೆನಿಸಿತು. ಅಂದವಾದ ಪೂಜಾ ಮಂಟಪವು ಪೂಜ್ಯ ಮಾತೆ ಗಂಗಾದೇವಿಯವರ ಪ್ರತಿಭೆಯ ಫಲವಾಗಿ ಅಲಂಕರಿಸಲ್ಪಟ್ಟು ಮಂಟಪದಲ್ಲಿ ಆಸೀನರಾಗಿ ಕುಳಿತು ಪೂಜೆಯನ್ನು ಮಾಡಿ ತೋರಿಸಿದ ಪೂಜ್ಯ ಜಗದ್ಗುರು ಮಾತೆಯವರು ತಪಸ್ಸಿಗೆ ಕುಳಿತ ಉಮೆಯಂತೆ ಕಂಡರು. ಜನರು ತಾವೂ ಪೂಜೆಯಲ್ಲಿ ಭಾಗಿಗಳಾದರು. ಹಾಡಿ ತಣಿದರು. ಕೈಯ್ಯಾರೆ ಪೂಜಿಸಿ ತಣಿದರು. ತೀರ್ಥ-ಪ್ರಸಾದಗಳನ್ನು ಸ್ವೀಕರಿಸಿ ಆನಂದದ ಸರಸಿಯಲ್ಲಿ ಮಿಂದರು. ಹೀಗೆ ಪ್ರಾರ್ಥನೆ, ಪೂಜೆ, ಪ್ರವಚನಗಳು ಒಂದಕ್ಕಿಂತ ಒಂದು ಪರಿಣಾಮಕಾರಿಯಾಗಿ ಸಾಗಿ ಜನರಿಗೆ ಧರ್ಮದ ಬಹುಮುಖ ದರ್ಶನವನ್ನು ಮಾಡಿಸಿದವು.

ಪೂಜೆ-ದೀಕ್ಷೆ ಎಂದರೆ ಮುಮ್ಮಾರು ಹಾರುತ್ತಿದ್ದ ಜನರು ಅಧಿಕಾಧಿಕ ಸಂಖ್ಯೆಯಲ್ಲಿ ದೀಕ್ಷೆ ಪಡೆದರು. ಎಲ್ಲ ವಯಸ್ಸಿನವರೂ ಪೂಜೆ, ಜಪಗಳನ್ನು ಆಚರಿಸಲಾರಂಭಿಸಿದರು. "ಅವತಾರಿಕರೆಂದರೆ ದೈವೀಶಕ್ತಿಯ ಲೀಲೆಯನ್ನು ತೋರಿಸಲೆಂದು ಬಂದವರು" ಎಂಬ ಅರವಿಂದಾಶ್ರಮದ ಶ್ರೀ ಮಾತೆಯವರ ವಾಣಿಯಂತೆ ಪೂಜ್ಯ ಮಾತೆಯವರು ಅಸಂಖ್ಯಾತರನ್ನು ದೈವೀಪಥಕ್ಕೆ ಆಕರ್ಷಿಸಿದರು. ದಿವ್ಯ ಜೀವನದ ಪರಿಚಯ ಮಾಡಿಕೊಟ್ಟರು. ಹೀಗಾಗಿ ಪ್ರವಚನವು ಜನತೆಗೆ ಹೆಚ್ಚು ಉಪಯುಕ್ತವೆನಿಸಿತು. ಮಾತೆಯವರ ಶ್ರಮ, ದುಡಿಮೆ ಕಂಡ ಜನ, ಸಂಘ, ಸಂಸ್ಥೆಗಳು ಸನ್ಮಾನಿಸಿದವು. ಒಂದಾದ ಮೇಲೊಂದರಂತೆ ಸನ್ಮಾನಗಳ ಸುರಿಮಳೆಯಾಯಿತು.

ಹೀಗೆ ಅವ್ಯಾಹತವಾಗಿ ಸುಮಾರು ಎರಡೂವರೆ ತಿಂಗಳ ಕಾಲ ಪ್ರವಚನವು ಮುಂದುವರೆದು ಬಂತು. ಆಂದರೆ ದಿನಾಂಕ ೧೪-೧-೮೫ ಮಕರ ಸಂಕ್ರಾಂತಿಯ ಶುಭದಿನದಂದು ಸರ್ವರೂ ಸವಿಯಾದ ಎಳ್ಳು-ಬೆಲ್ಲ ತಿಂದು ಪ್ರೀತಿ ಸೌಹಾರ್ದಯುತವಾದ ಭೇಟಿಯೊಂದಿಗೆ ಪ್ರವಚನ ಮಂಗಲದಲ್ಲಿ ಪಾಲ್ಗೊಂಡರು.

ಮುಕ್ತಾಯಕ್ಕೆ ಎಂಟು ದಿನ ಮುಂಚೆ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳವರ ಆಗಮನವಾಯಿತು. ಪೂಜ್ಯ ಗುರೂಜಿಯವರಿಗೆ ಸುಮಂಗಲೆಯರು ನೂರಾರು ಕಲಶಗಳೊಂದಿಗೆ ಆರತಿ ಮಾಡಿ ಸ್ವಾಗತಿಸಿದರು. ಸಭೆಗೆ ಆಗಮಿಸಿ ವೇದಿಕೆಗೆ ಬಂದಾಗಲಂತೂ ಜನತೆಯಿಂದ ಚಪ್ಪಾಳೆಗಳ ಸುರಿಮಳೆ, ಅಲ್ಲದೆ ಹೂಮಳೆ "ಪುಷ್ಪವೃಷ್ಟಿ" ಒಂದೇ ಸಮನೆ ಆಯಿತು. ಪೂಜ್ಯ ಗುರೂಜಿಯವರು ಜನತೆಯನ್ನುದ್ದೇಶಿಸಿ ಪಂಚ ಆಚಾರಗಳ ಬಗ್ಗೆ ಮಾತನಾಡಿದರು. ಅವರ ಎಂಟು ದಿನದ ಅಮೋಘ ಪ್ರವಚನ ಹೊಸ ವಿಚಾರಕ್ಕೆ ತಿರುವು ಕೊಟ್ಟಿತು. ಚಿಂತನ, ಮಂಥನಕ್ಕೆ ಅವಕಾಶ ಕಲ್ಪಿಸಿತು.

ದಿನಾಂಕ ೧೪-೧-೧೯೮೫ ಮಕರ ಸಂಕ್ರಮಣದ ಸಿದ್ಧರಾಮ ಜಯಂತಿಯಂದು ಮುಕ್ತಾಯ ಸಮಾರಂಭ. ನಗರದ ಅನೇಕ ಗಣ್ಯರು ಆಗಮಿಸಿದ್ದರು. ಸಂಸ್ಥೆಗೆ ಅನೇಕ ರೀತಿಯಿಂದ ಧನ ಸಹಾಯ ಮಾಡಿದರು. ಸಂಸ್ಥೆ ಬೃಹತ್ತಾಗಿ ಬೆಳೆದು ವ್ಯಾಪಕವಾಗಿ ಕೆಲಸ ಮಾಡಲಿ, ಧರ್ಮ ಪ್ರಚಾರ ಕೆಲಸವು ಬಹುಮುಖವಾಗಿ ನಡೆಯಲಿ ಎಂದು ಹಾರೈಸಿದರು. ಪ್ರಮುಖ ಉದ್ದಿಮೆದಾರರಾದ ಶ್ರೀ ಎಸ್. ಬಿ. ಪಾಟೀಲ್ ಮತ್ತು ಶ್ರೀ ಎಸ್. ಎಸ್. ಪಾಟೀಲರು ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದೇ ಅಲ್ಲದೆ ತಲಾ ೬೦೦೦-೦೦ ರೂಪಾಯಿ ಕಾಣಿಕೆ ಸಲ್ಲಿಸಿದರು. ವಿಶ್ವಕಲ್ಯಾಣ ಸಂಸ್ಥೆ ಅದೊಂದು ಚಲಿಸುವ ವಿಶ್ವವಿದ್ಯಾನಿಲಯವೆಂದು ಕೊಂಡಾಡಿದರು. ಗುಲ್ಬರ್ಗಾಕ್ಕೆ ಆಗಮಿಸಿದ ಪೂಜ್ಯದ್ವಯರಿಗೆ ಜನತೆ ತುಂಬು ಹೃದಯದ ಕೃತಜ್ಞತೆ ಸಲ್ಲಿಸಿತು.

ಗುಲ್ಬರ್ಗಾ ನಗರದಲ್ಲಿ ಆದ ಮಹಾಪೋಷಕರು

೧. ಗುಲಬರ್ಗಾ ನಗರದ ಪ್ರಮುಖ ಉದ್ದಿಮೆದಾರರುಗಳಾದ ಶರಣ ಎಸ್. ಬಿ. ಪಾಟೀಲ ಮತ್ತು ಶರಣ ಎಸ್. ಎಸ್. ಪಾಟೀಲರು, ವಿಶ್ವಕಲ್ಯಾಣ ಮಿಷನ್ ಸಂಸ್ಥೆಗೆ ಉಭಯತರು ತಲಾ ೬೦೦೦-೦೦ (ಆರು ಸಾವಿರ) ರೂಪಾಯಿಗಳನ್ನು ಸಲ್ಲಿಸಿದ್ದು, ಪುಸ್ತಕ ಪ್ರಕಟಣೆಗೆ ಈ ರೀತಿ ನೆರವು ನೀಡಿದ್ದಾರೆ.

೨. ಶರಣ ಸಿ. ಸತ್ಯನಾರಾಯಣ ರಾಯಚೂರು ಜಿಲ್ಲೆಯ ಶಕ್ತಿನಗರ (ದೇವಸುಗೂರು) ದಲ್ಲಿರುವ ಇಂಜಿನಿಯರು. ಚಿಕ್ಕನಾಯ್ಕನಹಳ್ಳಿಯವರಾದ ಇವರು ಕಾಯಕಕ್ಕಾಗಿ ಶಕ್ತಿನಗರದಲ್ಲಿದ್ದು ೩೦೦೧-೦೦ (ಮೂರು ಸಾವಿರದ ಒಂದು) ರೂಪಾಯಿ ದೇಣಿಗೆ ನೀಡಿ ಪುಸ್ತಕ ಪ್ರಕಟಣೆಗೆ ನೆರವು ನೀಡಿದ್ದಾರೆ.

ಧನಸಹಾಯಗೈದವರು

ಶರಣ / ಶರಣೆಯರಾದ

೧.	ಶಿವಬಸಯ್ಯಸ್ವಾಮಿ, ಲೆಕ್ಚರರು, ಗುಲಬರ್ಗಾ	೧೦೦೧-೦೦
೨.	ಬಸವರಾಜ ರಾಚಪ್ಪ ಪಾಟೀಲ (ಕಂದಗೂಳಕರ)	೧೦೦೧-೦೦
೩.	ಕಮಲಾದೇವಿ, ಗುಲಬರ್ಗಾ	೧೦೦೧-೦೦
೪.	ಶಾರದಾದೇವಿ ಶಿವನಾಗಪ್ಪ, ಗುಲಬರ್ಗಾ	೧೦೦೧-೦೦
೫.	ಶರಣಮ್ಮ ಶರಣಪ್ಪ ಪ್ರಧಾನಿ, ಗುಲಬರ್ಗಾ	೧೦೦೧-೦೦
೬.	ಶಿವಶರಣಪ್ಪ ಭಿ. ಜಂಗಳೆ, ರಾಜಾಪುರ	೧೦೦೧-೦೦
೭.	ವೀರಯ್ಯ ಗುರುಶಾಂತಯ್ಯ ಮಠ, ರಾಜಾಪುರ	೧೦೦೧-೦೦
೮.	ನಿಂಗಣ್ಣ ಶಂಕರಪ್ಪ ಪೂಜಾರಿ, ಗುಲಬರ್ಗಾ	೧೦೦೧-೦೦
೯.		

	ಶರಣ / ಶರಣೆಯರಾದ	
೯.	ಮಹಾದೇವ, ಗುಲಬರ್ಗಾ	೧೦೦೧-೦೦
೧೦.	ಶಾಂತಾಬಾಯಿ ಬಸವರಾಜ ರಾವೂರು	೧೦೦೧-೦೦
೧೧.	ಈಶ್ವರಪ್ಪ ಎಸ್. ಭಾವೀಕಟ್ಟಿ, ಗುಲಬರ್ಗಾ	೧೦೦೧-೦೦
೧೨.	ಕಾಂತಾಬಾಯಿ ಅಪ್ಪಾರಾವ ಪಾಟೀಲ	೧೦೦೧-೦೦
೧೩.	ಬಸವಾರೆಡ್ಡಿ ಇಟಗಿ, ಗುಲಬರ್ಗಾ	೧೦೦೧-೦೦
೧೪.	ಕಲ್ಲಪ್ಪ ಚಿಲ್ಲರಗಿ, ಎಕ್ಸಿಕ್ಯೂಟಿವ್ ಇಂಜಿನಿಯರ್	೧೦೦೧-೦೦
೧೫.	ಡಾ॥ ಬಿ. ವಿ. ಪಟೇಲ, ಗುಲಬರ್ಗಾ	೧೦೦೮-೦೦
೧೬.	ಡಾ॥ ಎ. ಶಿವಶಂಕರ್, ಗುಲ್ಬರ್ಗಾ	೧೦೦೧-೦೦
೧೭.	ಶಿವಶರಣಪ್ಪ ಪಾಟೀಲ, ಕಲ್ಲೂರು	೧೦೦೧-೦೦
೧೮.	ಮೆ॥ ಸಿದ್ಧರಾಮೇಶ್ವರ ಆ್ಯಂಡ್ ಕಂಪೆನಿ	೧೦೦೧-೦೦
೧೯.	ಎಸ್. ಶಶಿರೇಖಾ ಎನ್. ಜಿ. ಶಂಕರಪ್ಪ	೧೦೦೧-೦೦
೨೦.	ಶಂಕರಲಾಲ್ ಗಿಲ್ಡಾ, ಗುಲಬರ್ಗಾ	೧೦೦೧-೦೦
೨೧.	ರಾಮಗೋಪಾಲ ಮಾಲು, ಗುಲಬರ್ಗಾ	೧೦೦೧-೦೦
೨೨.	ಶಿವಲೀಲಾ ತೇರದಾಳ, ಗುಲಬರ್ಗಾ	೧೦೦೧-೦೦
೨೩.	ವೀರಭದ್ರಪ್ಪ ರುದ್ರಪ್ಪ ಕಮಡೊಳ್ಳಿ, ಹುಬ್ಬಳ್ಳಿ	೧೦೦೧-೦೦
೨೪.	ಗ್ರಂಥ ಪ್ರಕಟಣೆಗಾಗಿ ಗುಪ್ತದಾನ	೬೦೦೧-೦೦

ವಿಶ್ವಕಲ್ಯಾಣ ಮಿಷನ್ ಸಂಸ್ಥೆ ಕೈಗೊಂಡ ಧರ್ಮಪ್ರಚಾರದಲ್ಲಿ ಧನ ಸಹಾಯಗೈದು ನೆರವಾಗಿರುವ ಈ ಎಲ್ಲ ಉದಾರ ದಾನಿಗಳಿಗೆ ಮಂತ್ರಪುರುಷ ವಿಶ್ವಗುರು ಬಸವಣ್ಣನವರು ಆಯುರಾರೋಗ್ಯ ಭಾಗ್ಯವನ್ನು ದಯಪಾಲಿಸಲೆಂದು ಹೃತ್ಪೂರ್ವಕವಾಗಿ ಹಾರೈಸುವೆವು.

ಸದ್ಗುರು ಲಿಂಗಾನಂದ ಸ್ವಾಮಿಗಳು
ಛೇರ್ಮನ್, ವಿಶ್ವಕಲ್ಯಾಣ ಮಿಷನ್

- ಕಷ್ಟಗಳನ್ನನುಭವಿಸಿದ ಮೇಲೆ ದೊರೆತ ಸುಖವು ಕತ್ತಲೆಯಲ್ಲಿದ್ದು ದೀಪವನ್ನು ಕಂಡಂತೆ ಶೋಭಿಸುತ್ತದೆ. ಮೊದಲು ಸುಖದಲ್ಲಿದ್ದು ನಂತರ ಯಾವನು ದರಿದ್ರ ದೆಸೆಯನ್ನು ಹೊಂದುವನೋ ಅವನು ಸಜೀವ ಶವದಂತೆ ಇರುತ್ತಾನೆ.

— ಭಾಸ

- ಸಿರಿ ಬಂದ ಕಾಲಕ್ಕೆ ಕರೆದು ದಾನವಾ ಮಾಡು
ಪರಿಣಾಮವಕ್ಕು ಪದವಕ್ಕು ಕೈಲಾಸ
ನೆರೆಮನೆಯಕ್ಕು. ಸರ್ವಜ್ಞ ।

ಬೀದರದಲ್ಲಿ ವಿಶ್ವಧರ್ಮ ಪ್ರವಚನ

— ವರದಿ : **ಗುರುಲಿಂಗಪ್ಪ ಹೊಗ್ತಾಪುರ**

ಅವ್ಯಾಹತವಾಗಿ ೬೧ ದಿವಸಗಳ ಕಾಲ ಗುಲ್ಬರ್ಗಾದ ಸೂಪರ್ ಮಾರ್ಕೆಟ್ ಮೈದಾನದಲ್ಲಿ ಪ್ರವಚನಾಮೃತ ಧಾರೆಯನ್ನು ಹರಿಸಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ದಿನಾಂಕ ೧೫-೧-೧೯೮೫ ರಂದು ಪೂಜ್ಯ ಸದ್ಗುರುಗಳ ಘನ ಅಧ್ಯಕ್ಷತೆಯಲ್ಲಿ ಪ್ರವಚನ ಮಂಗಲವನ್ನು ಮಾಡಿ, ಕರ್ನಾಟಕದ ಕಿರೀಟವಾಗಿರುವ ಬೀದರದತ್ತ ಪಯಣಿಸಿದರು. ಸೋಮವಾರ ದಿನಾಂಕ ೨೧-೧-೧೯೮೫ ರಂದು ಪ್ರಾರಂಭೋತ್ಸವ. ಬೀದರ ಜಿಲ್ಲೆಯಲ್ಲಿ ಬಸವ ತತ್ತ್ವ ಉಳಿದು, ಬೆಳೆದು, ಹಬ್ಬಲು ಅಹೋರಾತ್ರಿ ಯತ್ನಿಸುತ್ತಿರುವ ವಯೋವೃದ್ಧ ಸ್ವಾಮಿಗಳಾದ ಭಾಲ್ಕಿಯ ಹಿರೇಮಠದ ಶ್ರೀ ಚನ್ನಬಸವ ಪಟ್ಟದ್ದೇವರ ಸನ್ನಿಧಿಯಲ್ಲಿ ಪ್ರವಚನದ ಆರಂಭ. ಅಧ್ಯಕ್ಷತೆ ಸರಕಾರಿ ಜೂನಿಯರ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ವೈಜನಾಥ ಶೀಲವಂತರದು. ಮುಖ್ಯ ಅತಿಥಿ ಸೆಷನ್ ಜಡ್ಜ್‌ರವರ ಪತ್ನಿ ಶ್ರೀಮತಿ ಶಾರದಾ ರೇವಣಕರರು. ಬಸವ ದಳದ ಅಧ್ಯಕ್ಷ ಶ್ರೀ ರಾಜಕುಮಾರರಿಂದ ಸ್ವಾಗತ. ಬಸವ ಮಂಟಪದ ಅಧ್ಯಕ್ಷ ಡಾ॥ ಐ. ಎಸ್. ಕೌಜಲಗಿಯವರಿಂದ ಮಾಲಾರ್ಪಣೆ. ನಗರದ ಹಲವಾರು ಸಂಘ-ಸಂಸ್ಥೆಗಳವರು ಮಾಲಾರ್ಪಣೆ ಮಾಡಿದರು. ೨೧-೧-೧೯೮೫ ರಂದು ಪ್ರಾರಂಭವಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಪ್ರವಚನವು ದಿನ ದಿನಕ್ಕೂ ಅಸಂಖ್ಯಾತ ಕೇಳುಗರನ್ನು ಆಕರ್ಷಿಸುತ್ತಿದೆ. ಸಂಜೆಯಾಗುತ್ತಲೇ ಸ್ತ್ರೀ-ಪುರುಷರು ಬಾಲಕರು, ವೃದ್ಧರು ತಮ್ಮ ತಮ್ಮ ಕೆಲಸಗಳನ್ನು ಪೂರೈಸಿ ಗಣೇಶ ಮೈದಾನದತ್ತ ಧಾವಿಸುವ ದೃಶ್ಯ ಚೇತೋಹಾರಿಯಾಗಿರುತ್ತದೆ. ಪ್ರವಚನ ಮುಗಿದಾಗ ಜನರು ತಂಡೋಪತಂಡವಾಗಿ ತೆರಳುವುದು ಕಣ್ಣಿಗೊಂದು ಹಬ್ಬವಾಗಿರುವುದಷ್ಟೇ ಅಲ್ಲ; ಇದೊಂದು ಜಾತ್ರೆ ಎನಿಸುತ್ತದೆ. ಇದು ಜ್ಞಾನದ ಜಾತ್ರೆ. ಇಲ್ಲಿ ಮೌಢ್ಯತೆಯಿಲ್ಲ; ವೈಚಾರಿಕತೆ ಇದೆ. ಯಾವುದೋ ಒಂದು ಭಾಗ್ಯ ಸಿಕ್ಕಿದೆ ಎಂಬಂತೆ, ಸುತ್ತಮುತ್ತಲಿನ ಪ್ರದೇಶದ ಜನರು ಸೈಕಲ್, ರಿಕ್ಷಾ, ಮೋಟರ್ ಬೈಕ್, ಬಸ್‌ಗಳಲ್ಲಿ ಧಾವಿಸುತ್ತಾರೆ.

೧೯೬೧ ನೆಯ ಇಸ್ವಿಯಲ್ಲಿ ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳು ಬಿತ್ತಿದ್ದ ಧರ್ಮಜಾಗೃತಿಯ ಬೀಜ, ಮೊಳಕೆಯೊಡೆದು ಇದೀಗ ತೆನೆ ತುಂಬಿದೆಯೇನೋ ಎಂಬಂತೆ ಜನರು ಮೈಯೆಲ್ಲ ಕಿವಿಯಾಗಿ ಪ್ರವಚನ ಕೇಳುವರು. ಧಾರ್ಮಿಕ ಸಭೆಗೆ ಇಂಥ ಶ್ರೋತೃವೃಂದವು ಬಂದುದು ಬೀದರದ ಚರಿತ್ರೆಯಲ್ಲೇ ಎರಡನೇ ಬಾರಿ. (ಪೂಜ್ಯ ಲಿಂಗಾನಂದ ಸ್ವಾಮಿಗಳು ಬಂದಾಗ ಮೊದಲೊಮ್ಮೆ ಇಂಥ ಸಭೆ ಕಂಡುದಿತ್ತು.) ವಿದ್ಯಾವಂತರೂ, ವೈಚಾರಿಕರು, ವಿದ್ಯಾರ್ಥಿಗಳೂ, ಬುದ್ಧಿಜೀವಿಗಳೂ, ಮುಮುಕ್ಷುಗಳು ಪ್ರವಚನದತ್ತ ಆಕರ್ಷಿತರಾಗುತ್ತಿರುವುದು ಒಂದು ವಿಶೇಷ ದೃಶ್ಯ. ವೈಜ್ಞಾನಿಕ ಹಿನ್ನೆಲೆಯಲ್ಲಿ ತರುಣ ಜನಾಂಗ ಶಿಕ್ಷಣ ಪಡೆಯುವ ಇಂದಿನ ಪರಿಸರದಲ್ಲಿ ನಾಸ್ತಿಕತೆಯ ಧಾಳಿಗೆ ಬಲಿಯಾಗುವ ಪ್ರಸಂಗ ಜಾಸ್ತಿಯಾಗಿರುವಾಗ ಪೂಜ್ಯರ ಪ್ರವಚನವು ಅತ್ಯಂತ ಸಕಾಲಿಕವೂ, ಉಪಯುಕ್ತವೂ ಆಗಿ ಜನರನ್ನು ಧಾರ್ಮಿಕ ಜೀವನದತ್ತ ಆಕರ್ಷಿಸುತ್ತಿದೆ.

ಗೋಕಾಕ ನಗರದಲ್ಲಿ
ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

— ವರದಿ : ಮೃತ್ಯುಂಜಯ

ಕರ್ನಾಟಕ ದೇವಿಯ ಮಡಿಲ ಮನೋಹರ ಮಗು ಬೆಳಗಾವ ಜಿಲ್ಲೆ. ಅದರಲ್ಲಿಯ ಸುಂದರ ತಾಲ್ಲೋಕು ಕೇಂದ್ರ ಗೋಕಾಕ. ಶಿಕ್ಷಣ, ಸಂಸ್ಕೃತಿ, ವ್ಯಾಪಾರ, ಉದ್ಯಮ – ಎಲ್ಲದರಲ್ಲಿಯೂ ಮುಂದುವರಿದೊಂದು ತಾಲ್ಲೋಕು – ಗೋಕಾಕ. ಇಂತಹ ಗೋಕಾಕಿನ ಸರಕಾರಿ ಕಿರಿಯ ಕಾಲೇಜ್ ಮೈದಾನದಲ್ಲಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಪ್ರವಚನ. ೧೫-೧-೧೯೮೫ ರಂದು ಗುಲ್ಬರ್ಗಾದಲ್ಲಿ ಶ್ರೀಸಿದ್ಧರಾಮೇಶ್ವರ ಜಯಂತಿಯಂದು ಪ್ರವಚನದ ಮಂಗಲ ಸಮಾರಂಭದಲ್ಲಿ ಭಾಗವಹಿಸಿದ ಪೂಜ್ಯ ಸದ್ಗುರುಗಳ ಜ್ಞಾನವಾಹಿನಿ ಗೋಕಾಕಿನತ್ತ ಹರಿಯಿತು. ದಿನಾಂಕ ೨೧-೧-೧೯೮೫ ರಂದು ಸಂಜೆ ೬-೩೦ ಕ್ಕೆ ಪ್ರಾರಂಭೋತ್ಸವ. ಮೊದಲ ದಿನದಂದು ಪಟ್ಟಣದ ಪ್ರಮುಖರು ಉತ್ಸಾಹಿಗಳಾಗಿ ಭಾಗವಹಿಸಿ, ಸ್ವಾಗತಿಸಿದರು. ಮೊದಲ ದಿನದಂದೇ ಅಗಾಧವಾದ ಸಂಖ್ಯೆಯಲ್ಲಿ ಶೋತೃವೃಂದ. ದಿನದಿನಕ್ಕೂ ಪ್ರಗತಿ. ತಾವೆಂದೂ ಕಂಡರಿಯದ ವಾಙ್ಮಯಧಾರೆಯಲ್ಲಿ ಜ್ಞಾನಸ್ನಾನ. ಪೂಜ್ಯ ಸದ್ಗುರುಗಳ ಪ್ರಸಾದವಾಣಿಯ ರಸಪಾಕವನ್ನುಂಡು ನೆತ್ತಿ-ಹೃದಯಗಳನ್ನು ತಣಿಸಿಕೊಳ್ಳುವ ಪ್ರಯತ್ನ. ಪ್ರಾರಂಭೋತ್ಸವದಂದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ॥ ಎ. ಆರ್. ಕಡಕೋಳರವರು ವಹಿಸಿದ್ದರು. ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರರಾದ ಶ್ರೀ ವಿಜಯಾ ಸಿರಿಯಣ್ಣನವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಬಾಳೇಶ ಲಕ್ಷೆಟ್ಟಿಯವರು ಸ್ವಾಗತಿಸಿ ಪರಿಚಯ ಮಾಡಿಕೊಟ್ಟರು. ಡಾ॥ ಸಿ. ಪಿ. ಪಟ್ಟಣಶೆಟ್ಟಿಯವರು ಇದೊಂದು ಮಹಾಸೌಭಾಗ್ಯದ ಅವಕಾಶ. ಪೂಜ್ಯ ಗುರೂಜಿಯವರು, ಎಳೆಗರುವು ಬಯಸಿದಾಗ ಧಾವಿಸಿ ಬಂದು ಹಾಲೂಡಿಸುವ ಹಸುವಿನಂತೆ, ಹಸಿದ ಜನತೆಯ ಬಳಿಗೆ ಧಾವಿಸಿ ಬಂದು ಪ್ರವಚನದ ಪ್ರಸಾದ ನೀಡುತ್ತಿದ್ದಾರೆ ಎಂದು ಕೊಂಡಾಡಿದರು.

ದಿನಾಂಕ ೨೧-೧-೧೯೮೫ ರಂದು ಪ್ರಾರಂಭವಾದ ಪೂಜ್ಯರ ಪ್ರವಚನ ದಿನದಿನಕ್ಕೂ ಶೋತೃಗಳ ಸಂಖ್ಯೆಯನ್ನು ವೃದ್ಧಿಸಿಕೊಳ್ಳುತ್ತ ಪ್ರಗತಿಪಥದಲ್ಲಿ ಸಾಗಿದೆ.

❖ "ಮಿತ್ರನಿಗೆ ದ್ರೋಹ ಬಗೆಯುವವನು, ಉಪಕಾರವರಿಯದವನು, ಇವರು ಆ ಚಂದ್ರಾರ್ಕ ಪರಿಯಂತ ನರಕದಲ್ಲಿ ವಾಸಿಸುವರು."

– ಸುಬೋಧಾಮೃತ

❖ "ನಮ್ಮಿಂದ ಸಹಾಯ ಮಾಡಲು ಅಸಾಧ್ಯವಿದ್ದಲ್ಲಿ, ನಾವು ಕನಿಷ್ಟ ಇತರರಿಗೆ ಅಡ್ಡಿಯನ್ನಾದರೂ ಮಾಡಬಾರದೆಂದು ನಿರ್ಧರಿಸಬೇಕು."

– ಗಾಂಧೀಜಿ

❖ "ಶಿಕ್ಷಣಕ್ಕಿಂತ ಮನುಷ್ಯನಿಗೆ ಶೀಲ ಚಾರಿತ್ರ್ಯಗಳು ಹೆಚ್ಚು ಅವಶ್ಯಕ."

– ಸ್ಪೆನ್ಸರ್

"ಕಲ್ಯಾಣ ಕ್ರಾಂತಿ"

— ಶಿವರಾಜ ಪಾಟೀಲ, ಮಹಾಂತಪೂರ

ನನ್ನಭಿಪ್ರಾಯದಲ್ಲಿ
"ಕಲ್ಯಾಣ ಕ್ರಾಂತಿ" ಒಂದು ಕಥೆಯನ್ನು ಚಿತ್ರಿಸುವ ಹೊತ್ತಿಗೆ. ಸುಮಾರು
ಪುಟ್ಟ ಕಾದಂಬರಿ. ಕಾದಂಬರಿ ಗಾತ್ರದಲ್ಲಿ ಪುಟ್ಟದಾದರೂ ವಸ್ತು ಹಿರಿದಾಗಿದೆ. ಮುದ್ರಿತ
೧೨೮ ಪುಟದಷ್ಟು ಹಬ್ಬಿದೆ. ಮುಖಪುಟದ ಚಿತ್ರ ಅರ್ಥವತ್ತಾಗಿ, ಸುಂದರವಾಗಿ ಒಂದರ ಮೇಲೆ
ವಾಗಿದೆ. ಮುಖಪುಟದ ಚಿತ್ರದಲ್ಲಿ ಎರಡು ಪಾದರಕ್ಷೆಗಳಿವೆ (shoes). ನೋಡಿದ ಕೂಡಲೆ
ಕಲ್ಯಾಣಮ್ಮ-ಇನ್ನೊಂದರ ಮೇಲೆ ಹರಳಯ್ಯ ಎಂದು ಬರೆಯಲಾಗಿದೆ. ಹೋದಂತೆ ಆಸಕ್ತಿ
ಏನಿದರ ಕಥಾವಸ್ತು ಎಂದು ಆಸಕ್ತಿ ಕೆರಳಿಸುತ್ತದೆ. ಪುಟ ತಿರುಗಿಸುತ್ತ ಮನಸ್ಸಾ
ಹೆಚ್ಚುತ್ತದೆ. ಹಾಗೆ ಓದುತ್ತ ಹೋದಂತೆ ಮುಗಿಯುವವರೆಗೆ ಕೆಳಗಿಡಲು ಮಹಾದೇವಿಯವರು.
ಗುವುದಿಲ್ಲ. ಇದನ್ನು ಬರೆದವರು ಪೂಜ್ಯ ಶ್ರೀ ಜಗದ್ಗುರು ಮಾತೆ ಅದರಿಂದ
ಕಥಾ ಪೀಠಿಕೆಯಲ್ಲಿ ಲೇಖಕರು ವಿಶ್ವದ ಎಲ್ಲ ಕ್ರಾಂತಿಗಳನ್ನು ಪ್ರಸ್ತಾಪಿಸಿ, ಹಚ್ಚುತ್ತಾರೆ.
ಕಲ್ಯಾಣ ಕ್ರಾಂತಿ ಹೇಗೆ ಭಿನ್ನವಾಗಿದೆ ಎಂಬುದನ್ನು ಓದುಗನಿಗೆ ವಿಮರ್ಶಿಸಲು ನೀಡುತ್ತಾರೆ.
ಕಲ್ಯಾಣ ಕ್ರಾಂತಿಯಾದುದು ಜನತೆಯ ಕಲ್ಯಾಣಕ್ಕಾಗಿ ಎಂಬ ಉತ್ತರವನ್ನೂ ಸರ್ವ ಸಮಾನತೆಗಾಗಿ
ಇದಕ್ಕೆ ನೇತಾರ ಬಸವಣ್ಣ. ಇದು ಮಾನವೀಯತೆಯ ಸ್ಥಾಪನೆ. ಸ್ಫೂರ್ತಿ ಚೇತನ
ನಡೆದ ವೈಚಾರಿಕ ಕ್ರಾಂತಿಯಾಗಿದೆ. ಇದನ್ನು ಬರೆಯುವಾಗ ಲೇಖಕರು ಮುನ್ನುಡಿಯು
ರಾಗಿ ಬರೆದಿದ್ದಾರೆ. ಓದಿದರೆ ಅವರ ಪ್ರವಚನ ಕೇಳಿದಂತಾಗುತ್ತದೆ. ಪ್ರಸ್ತಾಪಿಸಿದ
ಕಾದಂಬರಿಗೆ ಕೇವಲ ಕಲಾತ್ಮಕವಾದ ಪೀಠಿಕೆಯಾಗದೆ ವೈಚಾರಿಕ ಹಿನ್ನೆಲೆಯಲ್ಲಿ ಹೋಲಿಸಿ
ವಿಚಾರ ಕಹಳೆಯಾಗಿದೆ. ಏಸುವಿಗೂ - ಹರಳಯ್ಯ ಇತರ ಇಬ್ಬರು ಸಂತರಿಗೂ
ರುವುದು ತುಂಬಾ ಸಮರ್ಪಕವಾಗಿದೆ.

"ಅರಿದೊಡೆ ಶರಣ ಮರೆದೊಡೆ ಮಾನವ" ವೆಂಬ ಭಾಗದಲ್ಲಿ ಬಸವಣ್ಣನವರ ಹಿರಿಮೆ,
ಅವರ ವ್ಯಕ್ತಿತ್ವ ನಿರೂಪಣೆಗೊಂಡಿದೆ. ಕ್ರಾಂತಿಯ ಕಾರಣ ಪುರುಷನ ಬಗ್ಗೆ ಈ ಭಾಗ
ಬರೆದದ್ದು ಔಚಿತ್ಯಪೂರ್ಣವಾಗಿದೆ ಮತ್ತು ಕಾದಂಬರಿಗೆ ಪೂರಕವಾಗಿದೆ.

ಹೊಲೆಯರನ್ನು ಯಾರೂ ಮುಟ್ಟದಿದ್ದ ಕಾಲದಲ್ಲಿ ಬಸವಾನುಯಾಯಿಗಳು ಹೋಗಿ,
ಮುಟ್ಟಿ, ಮಾತನಾಡಿಸಿ, ಬಸವಣ್ಣನವರ ತತ್ವಗಳನ್ನು ಅವರಿಗೆ ತಿಳಿಸಿ, ಹೃದಯವನ್ನು
ಪರಿವರ್ತಿಸಿ, ಧರ್ಮಕ್ಕೆ ಕರೆದುಕೊಳ್ಳುವ (conversion) ರೀತಿ - ಇವನ್ನು ಮಾತಾಜಿ
ಯವರು ಹೃದಯಕ್ಕೆ ತಾಕುವ ಹಾಗೆ ಚಿತ್ರಿಸಿದ್ದಾರೆ. ಮಧ್ಯೆ ಮಧ್ಯೆ ವಚನಗಳ ಬಳಕೆ
ಮಾಡಿ, ತತ್ವವನ್ನು ಸಾಮಾನ್ಯರಿಗೆ ತಿಳಿಸುವ ರೀತಿ ಹೇಗೆ ಇರಬೇಕು ಎಂಬುದಕ್ಕೆ ಮಾತಾಜಿ
ಯವರ ಬರವಣಿಗೆ ಶೈಲಿ ಮಾದರಿಯಾಗಿದೆ.

"ಹರಳಯ್ಯನ ಒಂದು ಶರಣಾರ್ಥಿಯೇ ಇಡೀ ಕಲ್ಯಾಣ ಕ್ರಾಂತಿಗೆ ನಾಂದಿ ಹಾಡಿತು"
ಈ ಮಾತು ಅರ್ಥಪೂರ್ಣವಾಗಿದೆ. ಬಸವಣ್ಣನವರಂಥವರು ಕೀಳು ಕುಲದ ವ್ಯಕ್ತಿಗೆ
"ಶರಣು ಶರಣಾರ್ಥಿ" ಹೇಳಿದ್ದು ಹೇಗೆ ಪರಿಣಮಿಸಿತು ? ತತ್ಫಲವಾಗಿ ಅದೇತು ಹರಳಯ್ಯ

ನವರ ಹೃದಯವನ್ನು ತಟ್ಟಿತು. ಕಡೆಗೆ ತಮ್ಮ ಮೈ ಚರ್ಮ ಸುಲಿಯಲು ಹಚ್ಚಿತು. ಗುರು ಋಣ ತೀರಿಸಲು ಎಂತಹ ತ್ಯಾಗಕ್ಕೆ ಪ್ರೇರೇಪಿಸಿತು ಎಂಬ ನಿರೂಪಣೆ ತುಂಬಾ ಕಲಾತ್ಮಕವಾಗಿದೆ. ಸಾಹಿತ್ಯಿಕ ಭಾಷೆಯಲ್ಲಿದ್ದು ಓದುಗನನ್ನು ಓಡಿಸಿಕೊಂಡು ಹೋಗುತ್ತದೆ. ಬಸವಣ್ಣನವರ ಈ ಪರಿವರ್ತನ ರೀತಿ ಓದುಗನ ಹೃದಯವನ್ನೂ ಪರಿವರ್ತಿಸುತ್ತದೆ. ವೇಶ್ಯೆ, ನರ್ತಕಿ ಪಾಪಿಗಳೆಲ್ಲರನ್ನೂ ಪಾವನ ಮಾಡುವ ಬಸವಣ್ಣನವರ ಮಾರ್ದವ ಚಿತ್ರ ಕಣ್ಣಿಗೆ ಕಟ್ಟುವಂತೆ ಈ ಕೃತಿಯು ಚಿತ್ರಿಸುತ್ತದೆ.

ಕಾದಂಬರಿಯಲ್ಲಿ ನಾಟಕೀಯವಾಗಿ ರೂಪುಗೊಂಡ ಸಂಭಾಷಣೆಗಳು ಓದುತ್ತ ಹೋದ ಹಾಗೆ ಮನಸ್ಸಿನ ಮೇಲೆ ರಂಗಮಂಟಪವನ್ನೂ ತಾನಾಗಿಯೇ ಸ್ಥಾಪಿಸುತ್ತವೆ. ಪಾತ್ರಗಳು ಜೀವಂತವಾಗುತ್ತವೆ. ನಾಟಕ ನೋಡುತ್ತಿದ್ದಂತೆ ಭಾಸವಾಗುತ್ತದೆ. ಈ ಕಥಾ ಪುಸ್ತಕದಲ್ಲಿ ಪೂಜ್ಯ ಮಾತೆಯವರು ಜಾತಿಯ ಸಮಸ್ಯೆ ಭೂತಾಕಾರವಾಗಿರುವುದನ್ನು ಎಳೆ ಎಳೆಯಾಗಿ ಬಿಡಿಸಿ, ಬಸವಣ್ಣನವರು ಕಂಡುಕೊಂಡ ಪರಿಹಾರವನ್ನು ಸಮರ್ಪಕವಾಗಿ ಚಿತ್ರಿಸಿದ್ದಾರೆ.

ಈ ಕಾದಂಬರಿಯ ಮೂಲ ಜೀವಾಳ "ಹೃದಯ ಪರಿವರ್ತನೆ." ಇದರಿಂದಲೇ ಬಸವ ತತ್ವ ಹೆಚ್ಚು ಜನಪ್ರಿಯವಾಗಿರುವುದು. ಅಂತೆಯೇ ಕಾದಂಬರಿಯೂ ಜನಪ್ರಿಯವಾಗಿದೆ. ಕ್ರಮೇಣ ಓದುಗನ ಮೇಲೆ ಪರಿಣಾಮ ಬೀರುತ್ತ ಹೃದಯ ಪರಿವರ್ತನೆಯ ದಿಸೆಗೆ ಎಳೆದೊಯ್ಯುವ ಸಾಧನವಾಗಿದೆ. ಬ್ರಾಹ್ಮಣನಾದ ಮಧುವರಸ ಹರಳಯ್ಯನವರಿಂದ ಪುನರ್ಜನ್ಮ ಪಡೆಯುವ ರೀತಿ, ಬ್ರಾಹ್ಮಣ್ಯವನ್ನೇ ತೊರೆದು ರಕ್ತ ಸಂಬಂಧ ಬೆಳೆಸುವಷ್ಟರ ಮಟ್ಟಿಗೆ ಆದ ಬದಲಾವಣೆ ಭಾರತದ ಇತಿಹಾಸದಲ್ಲೇ ಮೊದಲು. ಇದನ್ನು ಬಸವಣ್ಣನವರ ಒಂದು ಪವಾಡವೆಂದೇ ಕರೆಯಬೇಕು. ಈ ಸಂದರ್ಭ ಚಿತ್ರಿಸುವಾಗ ಮಾತಾಜಿಯವರು ಬಸವಣ್ಣನವರ ಉಪಸ್ಥಿತಿ ತರದಿದ್ದರೂ ಹೆಜ್ಜೆ ಹೆಜ್ಜೆಗೂ ಬಸವಣ್ಣನವರು ಓದುಗನ ಮನದ ಮುಂದೆ ಇರುವಂತೆ ಮಾಡಿದ್ದಾರೆ. ಬಸವಣ್ಣನವರು ಕೇಂದ್ರ ಪಾತ್ರ. ಈ ಮೇಟಿಯ ಸುತ್ತಲೂ ಉಳಿದ ಪಾತ್ರಗಳು ತಿರುಗುತ್ತಿರುತ್ತವೆ. ಆದರೂ ಬಸವಣ್ಣನ ಪಾತ್ರಕ್ಕೆ ಮಹತ್ವ ಸಿಕ್ಕಷ್ಟೇ ರೀತಿಯಲ್ಲಿ ಉಳಿದ ಪಾತ್ರಗಳೂ ನಿರ್ಲಿಪ್ತವಾಗಿ, ಸಂದರ್ಭಕ್ಕೆ ತಕ್ಕಂತೆ ರೂಪುಗೊಂಡಿವೆ.

ಈ ಕಥೆಯಲ್ಲಿ ಅನುಭವ ಮಂಟಪ ಆಗಾಗ ಕಾಣಿಸಿಕೊಳ್ಳುತ್ತದೆ. ಅನುಭವ ಮಂಟಪದಲ್ಲಿ ಚರ್ಚಿತವಾದ ವಿಷಯಗಳು ಶರಣರ ಪ್ರಗತಿಪರ ಧೋರಣೆಗಳಾಗಿ ಸಂಪ್ರದಾಯದ ಕೋಟೆಯನ್ನು ಸುಡುವ ಬೆಂಕಿಯ ಕಿಡಿಗಳಾಗಿವೆ. 'ಸಮಾಜ ಇನ್ನೂ ಪರಿಪಕ್ವಗೊಂಡಿಲ್ಲ; ನಮ್ಮ ವಿಚಾರಗಳನ್ನು ಅರಗಿಸಿಕೊಳ್ಳಲು ಜನರಿಗೆ ಇನ್ನೂ ಸಾಧ್ಯವಿಲ್ಲ' ಎಂಬ ವಿಚಾರ ಎಲ್ಲರಿಗೂ ಗೊತ್ತು, ಅರಿತೂ ಈ ಕೆಲಸ ಎಸಗಿದ್ದೇ ಕಲ್ಯಾಣ ಕ್ರಾಂತಿಯ ವೈಫಲ್ಯಕ್ಕೆ ಕಾರಣ. ಇದೇ ಶರಣರ ಬಲಿದಾನದ ವೈಶಿಷ್ಟ್ಯ. ತತ್ವಕ್ಕಾಗಿ ಪ್ರಾಣ ಕೊಡಲು ಸಿದ್ಧರಾದ ಮಧುವಯ್ಯ, ಹರಳಯ್ಯ ತ್ಯಾಗ ಜೀವಿಗಳು. ಬಸವ ತತ್ವಕ್ಕೆ ಆತ್ಮಾರ್ಪಣೆ ಮಾಡಿಕೊಂಡ ಸಮರ್ಪಿತ ಚೇತನಗಳು. ಇಲ್ಲಿ ಜಯ-ಅಪಜಯ ಮುಖ್ಯವಲ್ಲ. ಸಾಧನೆ ಮುಖ್ಯ. ಆ ಸಾಧನೆಯಲ್ಲಿ ಕಲ್ಯಾಣ ಕ್ರಾಂತಿ ಯಶಸ್ವಿಯಾಗಿದೆ.

ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣನವರ ಮೇಲೆ ಹೊರಿಸುವ ಆರೋಪಗಳ ಪಟ್ಟಿ, ಚಿತ್ರಿಸುವ ಬಗೆ ಮನೋಜ್ಞವಾಗಿದೆ. ಒಂದು ನಾಟಕದ ದೃಶ್ಯವೇ ಸ್ಮೃತಿ ಪಟಲದ ಮೇಲೆ

ಪಾದುಹೋಗುತ್ತದೆ. ಪುರೋಹಿತರ, ಮಂತ್ರಿಗಳ ಚಿತ್ರ ಕಣ್ಣೆದುರಿಗೆ ಕಟೆದು ನಿಲ್ಲಿಸುವ ಬರವಣಿಗೆ ಪರಿಣಾಮಕಾರಿಯಾಗಿದೆ. ಆಸ್ಥಾನದಲ್ಲಾಗುವ ತೀರ್ಮಾನ, ಕಲ್ಯಾಣ ಕಟುಕರ ಕೀರಿಯಾಗುವ ಸೂಚನೆಗಳನ್ನೂ ಳಗೊಂಡಿದೆ. ಅಪರಾಧಿಗಳಲ್ಲದವರನ್ನು ಅಪರಾಧಿಗಳನ್ನಾಗಿ ಮಾಡಿದೆ. ತಪ್ಪಿತಸ್ಥರಲ್ಲದವರನ್ನು ತಪ್ಪಿತಸ್ಥರನ್ನಾಗಿ ಮಾಡಿದೆ. ನಿರಪರಾಧಿಗಳಿಗೆ ಅಪರಾಧದ ಆರೋಪದ ಸುರಿಮಳೆ. ಆದರೇನು ನಿರಪರಾಧಿಗಳಾದ ಶರಣರಿಗೆ ಭಯವೇ ಇಲ್ಲ. ಅಷ್ಟು ನಿರ್ಭೀತರಾಗಿದ್ದಾರೆ. ಬಸವಣ್ಣನವರಂತೂ ಮಂದಸ್ಮಿತವದನರಾಗಿದ್ದಾರೆ. ಚರ್ಚೆ ಮುಗಿದಾಗ ಪ್ರಧಾನಿಯ ಪಟ್ಟ ಬಿಡಲೂ ಸಿದ್ಧ. ಆದರೆ ತತ್ವ ಬಿಡಲಾರೆ ಎನ್ನುವ ಛಲ ತಾಳಿದ್ದಾರೆ.

ಇದನ್ನು ಕಂಡು ಬಿಜ್ಜಳನಿಗೆ ಪೇಚಾಟ. ಈ ಸಂದರ್ಭವನ್ನು ಚಿತ್ರಿಸುವ ಮಾತೆಯವರ ಬರವಣಿಗೆ ಹರಿತವಾಗಿದೆ. ಶೈಲಿ ಪ್ರಬುದ್ಧವಾಗಿದೆ. ಆಯಾ ಪಾತ್ರಗಳ ಯೋಗ್ಯತೆಗೆ ತಕ್ಕನಾದ ಭಾಷೆಯನ್ನು ಬಳಸಿದ್ದಾರೆ.

'ಸಿಂಹದ ಹೊಟ್ಟೆಯಿಂದ ಸಿಂಹದ ಮರಿಯೇ ಹುಟ್ಟುತ್ತದೆ.' ಇದು ಲಾವಣ್ಯಳಿಗೆ ತಕ್ಕ ಮಾತು. ಶರಣರಿಗೂ ಅಷ್ಟೇ ಅನ್ವಯಿಸುತ್ತದೆ. ಕಲ್ಯಾಣಮ್ಮ, ಲಾವಣ್ಯ, ಮುಂತಾದವರು ರೂಪದಲ್ಲಿ ಹೆಂಗಸರಾದರೂ ಧೈರ್ಯಶಾಲಿಗಳು. ತತ್ವಕ್ಕಾಗಿ ಪ್ರಾಣ ಕೊಡುವ ವೀರ ಮಹಿಳೆಯರು. ಬಸವಣ್ಣನವರಾದರೂ! ಸತ್ಯ ತತ್ವಗಳಿಗಿಂತ ಹೆಚ್ಚಿನದೇನೂ ಇಲ್ಲವೆಂದು ಘೋಷಿಸಿದ ಧೀರಯೋಗಿ. 'ಗಡಿಪಾರು' ರಾಯಸ ತಂದುಕೊಟ್ಟ ಅಧಿಕಾರಿಗೆ ಹಾಲು-ಹಣ್ಣು ಕೊಡಲು ಹೇಳಿದ ವಿಶಾಲ ಹೃದಯಿ. ಬಸವಣ್ಣನವರ ಗಡಿಪಾರನ್ನು ಸಹಿಸದ ಮಾಚಿದೇವನ ಉದ್ವಿಗ್ನತೆಯನ್ನು ಬಸವಣ್ಣನವರು ಮೃದು ಮಾತಿನಿಂದ ಸಮಾಧಾನಗೊಳಿಸುವರು. ಕಲ್ಯಾಣದಿಂದ ಬಸವಣ್ಣನವರು ಏಕೆ ಹೊರಟರು? ಎಂಬುದೊಂದು ದೊಡ್ಡ ಸಮಸ್ಯೆ. ಈ ಸಮಸ್ಯೆಗೆ ಪೂಜ್ಯ ಮಾತಾಜಿಯವರು ತೃಪ್ತಿಕರವಾಗಿ ಪರಿಹಾರ ನೀಡಿದ್ದಾರೆ. ತನಗೆ ಕೇಡು ಬಗೆದ ಬಿಜ್ಜಳನ ಪ್ರಾಣಕ್ಕೆ ಅಪಾಯ ತರಬಾರದೆಂದು ಶರಣರಿಗೆ ಸೂಚಿಸುವ ರೀತಿ, ಕಟುಕನ ಕರುಳನ್ನು ಕರಗಿಸುವಂತಹದ್ದು. ಕಲ್ಯಾಣವನ್ನು ಬಿಟ್ಟು ಹೋಗುವಾಗ "ಕಲ್ಯಾಣದ ಭಾಗ್ಯವೇ ಹೋಯಿತು" ಎನ್ನುವಳು ಶರಣೆ ಕಲ್ಯಾಣಮ್ಮ. ಹೋದ ಭಾಗ್ಯ ಇಂದಿಗೂ ಬಂದಿಲ್ಲ. ಮಾತಾಜಿಯವರ ಮಾತು ಇದೆಂಥ ನಿಜ ಸತ್ಯವಾಗಿದೆ!

"ಇಲಿಯಾಗಿ ನೂರು ವರ್ಷ ಬದುಕುವುದಕ್ಕಿಂತ ಹುಲಿಯಾಗಿ ಒಂದು ದಿನ ಬದುಕಿದರೆ ಸಾಕು" ಎಂದುಕೊಂಡ ಶರಣರು ಇಟ್ಟ ಹೆಜ್ಜೆ ಹಿಂದಕ್ಕೆ ತೆಗೆಯಲಿಲ್ಲ. ದಿಟ್ಟ ಹೆಜ್ಜೆಯನ್ನೇ ಇಟ್ಟರು. 'ಮರಣವೇ ಮಹಾನವಮಿ' ಎಂದರು. ತಾವು ಮಾಡಿದ ಕ್ರಾಂತಿಕಾರಕ ಕಾರ್ಯವನ್ನು ಅಪರಾಧವೆಂದು ಒಪ್ಪುವುದು ಹೇಡಿತನ. ಇದು ಶರಣರ ನಿಲುವು. ಹೀಗೆ ಹೃದಯಸ್ಪರ್ಶಿಯಾದ 'ಕಲ್ಯಾಣ ಕ್ರಾಂತಿ'ಯ ಕಥೆಯನ್ನು ಹೃದಯಂಗಮವಾಗಿ ಮಾತೆಯವರು ಚಿತ್ರಿಸಿದ್ದಾರೆ. ಅವರ ಕೈಗೆ ಸಿಕ್ಕ ಈ ವಸ್ತು ಮತ್ತಷ್ಟು ಕಳೆಗೊಂಡಿದೆ. ಶರಣರ ಸೋಲು ಸೋಲಾಗದೆ, ಸಂತೋಷದ ಗೆಲುವಾಗಿದೆ. ಅದು ಕಾದಂಬರಿಯ ಗೆಲುವೂ ಆಗಿದೆ.

❋

ಗುಲಬರ್ಗಾದಲ್ಲಿ

ಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರಿಂದ ಬಸವ ದಳದ ಉದ್ಘಾಟನೆ

ಗುಲಬರ್ಗಾ : ದಿನಾಂಕ ೧೨-೧-೧೯೮೫ ರವಿವಾರ ಬೆಳಿಗ್ಗೆ ೧೦-೦೦ ಗಂಟೆಗೆ ನಗರದ ಮುನಿಸಿಪಲ್ ಗಾರ್ಡನ್ನಿನಲ್ಲಿ (ರೋಟರಿ ಕ್ಲಬ್ ಶಾಲೆಯ ಆವರಣದಲ್ಲಿ) ಬಸವಾದಿ ಪ್ರಮಥರ ತತ್ತ್ವಗಳನ್ನು ಪ್ರಚಾರ ಮಾಡುವ ಮೂಲ ಉದ್ದೇಶದಿಂದ ಕೂಡಿದ ಹಾಗೂ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವ ಧ್ಯೇಯವನ್ನಿಟ್ಟು ಕೊಂಡು ರಚನೆಯಾದ ಯುವ ಶಕ್ತಿಯ "ಬಸವ ದಳ" ಸಂಸ್ಥೆಯ ಉದ್ಘಾಟನೆಯಾಯಿತು.

ಕಾರ್ಯಕ್ರಮವು ಸಾಮೂಹಿಕ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ನಂತರ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರು ಷಟ್‌ಸ್ಥಲ ಧ್ವಜಾರೋಹಣ ಮಾಡಿದರು.

ಸ್ವಾಗತ ಮತ್ತು ಅತಿಥಿಗಳ ಪರಿಚಯವನ್ನು ಶ್ರೀ ಶಿವರಾಜ ಪಾಟೀಲ ಸಭೆಗೆ ಮಾಡಿ ಕೊಟ್ಟರು. ನಂತರ ತುಂಬಿದ ಸಭೆಗೆ ಬಸವ ದಳದ ರೂಪರೇಶೆಗಳನ್ನು ಬಸವ ದಳದ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಆರ್. ಜಿ. ಶೆಟಗಾರ ವಿವರಿಸಿದರು. ನಂತರ ದಳದ ಅಧ್ಯಕ್ಷರಾದ ಶ್ರೀ ಡಿ. ವಿ. ಪಾಟೀಲ ಹಾಗೂ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಕುಮಾರ ಶಾಬಾದಿ ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮೀಜಿಯವರಿಗೆ ಹಾಗೂ ಉದ್ಘಾಟಕರಾಗಿ ಆಗಮಿಸಿದ ಪೂಜ್ಯ ಮಾತಾಜಿಯವರಿಗೆ ಮಾಲಾರ್ಪಣೆ ಮಾಡಿದರು. ನಂತರ ಬಸವ ದಳ ಉದ್ಘಾಟಿಸಿ ಮಾತಾಜಿಯವರು "ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಯುವಕರು ಮುಂದೆ ಬಂದು ವಿಶ್ವಗುರು ಬಸವಣ್ಣನವರು ಹಾಗು ಅವರ ಸಮಕಾಲೀನ ಶರಣರು ಕೊಟ್ಟ ದಿವ್ಯ ತತ್ತ್ವಗಳನ್ನು ಪ್ರಚಾರ ಮಾಡುವ ಕಾರ್ಯಕ್ಕೆ ಶ್ರದ್ಧೆಯಿಂದ ಮುಂದಾಗಬೇಕು. ಬಹುಪಾಲು ಯುವಕರು ಕೇವಲ ಕ್ಷಣಿಕ ಆಸೆಗಳ ಕಡೆ ಹೋಗುತ್ತಿದ್ದಾರೆ. ಯುವ ಶಕ್ತಿಯು ವೈಭೋಗ-ವಿಲಾಸ, ಕೀಳು ಅಭಿರುಚಿಯಲ್ಲಿಯೇ ವ್ಯರ್ಥವಾಗದೆ ರಾಷ್ಟ್ರ ನಿರ್ಮಾಣಕ್ಕೆ ಸಹಕಾರಿಯಾಗಬೇಕು ; ಧರ್ಮ ಸಂಘಟನೆಗೆ ಸಹಾಯಕವಾಗಬೇಕು. "ಬಸವ ದಳ" ಜಾತ್ಯತೀತ ಸಂಸ್ಥೆಯಾಗಿ ರೂಪುಗೊಳ್ಳಬೇಕು. ಬಸವಣ್ಣನವರು ಹಾಕಿಕೊಟ್ಟ ಧರ್ಮ ಸಂವಿಧಾನವನ್ನು ಕ್ರಿಯಾತ್ಮಕವಾಗಿ ಆಚರಣೆಗೆ ತರುವ ಕ್ರಿಯಾಶೀಲ ದಳವಾಗಬೇಕು. ಬಸವ ಮಹಾಗುರುವಿನಲ್ಲಿ ಭಕ್ತಿ, ವಚನ ಸಾಹಿತ್ಯದಲ್ಲಿ ವಿಶ್ವಾಸ ಇರುವ ಯಾವುದೇ ಜಾತಿ ಮತ ಪಂಥದವರೂ ಇದರ ಸದಸ್ಯರಾಗುವ ಸದವಕಾಶವಿರಬೇಕು. ಬಸವ ದಳದ ಶಾಖೆಗಳು ಜಿಲ್ಲೆ, ತಾಲ್ಲೂಕು, ಗ್ರಾಮ - ಹೀಗೆ ಎಲ್ಲ ಸ್ತರಗಳಲ್ಲಿಯೂ ರೂಪುಗೊಳ್ಳಬೇಕು" ಎಂದು ಹಾರೈಸಿದರು.

ಇದೇ ಸಂದರ್ಭದಲ್ಲಿ ಬಸವ ದಳದ ಸಕ್ರಿಯ ಕಾರ್ಯಕರ್ತರಾದ ಶ್ರೀ ಸುರೇಶ ಮಠದ ಅವರು ಪ್ರೀತಿಸಿದ ಮುಸ್ಲಿಂ ಯುವತಿಯೋರ್ವಳನ್ನು ಧರ್ಮಾಂತರಗೊಳಿಸಿ ವಿವಾಹ ಮಾಡಿಕೊಂಡದ್ದನ್ನು ಶ್ಲಾಘಿಸಿದರಲ್ಲದೆ, ಆ ಯುವ ಪ್ರೇಮಿಗಳು ಕಷ್ಟದಲ್ಲಿರುವ ಸಂದರ್ಭದಲ್ಲಿ ಯುವ ಸಂಘಟಕರು ನೆರವಾದುದನ್ನು ಕೊಂಡಾಡಿದರು. ಆ ದಂಪತಿಗಳಿಗೆ ಆಶೀರ್ವಾದ ನೀಡಿ, ಅವರ ಮಗುವನ್ನು ಶುದ್ಧೀಕರಿಸಿದರು. ಬಸವ ಸಿದ್ಧಾಂತದ ಪ್ರಕಾರ ಅಂತರ್ಜಾತೀಯ ವಿವಾಹ ತಪ್ಪಲ್ಲ ; ಸರ್ವಮಾನ್ಯ. ಆದರಿಷ್ಟೇ ಅಕ್ಕಿ-ಬತ್ತ ಬೆರೆಸಿ ಅನ್ನ ಮಾಡಬಾರದು. ಬತ್ತವನ್ನು ಸಂಸ್ಕರಿಸಿ ಅಕ್ಕಿ ಮಾಡಿ ಅನ್ನವನ್ನಾಗಿ ಸಿದ್ಧಪಡಿಸುವಂತೆ, ಪ್ರೀತಿಸಿದವರನ್ನು ಧರ್ಮಸಂಸ್ಕಾರದಿಂದ ಶುದ್ಧೀಕರಿಸಿ ವಿವಾಹ ಮಾಡಿಕೊಳ್ಳಬೇಕು ಎಂದರು.

ಸಭೆಯ ಅಧ್ಯಕ್ಷ ಸ್ಥಾನ ವಹಿಸಿದ್ದ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರು ಮಾತನಾಡುತ್ತ, "ಬಸವ ದಳ" ಇಂದಿನ ಆವಶ್ಯಕತೆಯಾಗಿದೆ. ಬಸವಣ್ಣನವರು ವಿಶ್ವಮಾನ್ಯ ತತ್ತ್ವಗಳನ್ನು ಕೊಟ್ಟಿದ್ದಾರೆ. ಅದನ್ನು ಬಹುಪಾಲು ಜನ ಮರೆತಿದ್ದಾರೆ. ರೇಲ್ವೆಗಾಡಿ ಓಡಲು ಎರಡು ಹಳಿ ಬೇಕು. ಬಸವಣ್ಣನೆಂಬ ಧರ್ಮಗುರು - ವಚನ ಸಾಹಿತ್ಯದ ಸಂವಿಧಾನ ಎಂಬ ಎರಡು ಹಳಿಗಳ ಮೇಲೆ ಲಿಂಗಾಯತ ಸಮಾಜದ ರೇಲ್ವೆ ಗಾಡಿ ಸುರಕ್ಷಿತವಾಗಿ ಓಡಬಲ್ಲುದು. ಎಂಟು ಶತಮಾನಗಳಿಂದಲೂ ಈ ಗಾಡಿ ಹಾಗೇ ಸಾಗಿತ್ತು. ತೀರಾ ಇತ್ತೀಚೆಗೆ ಪಟ್ಟಭದ್ರ ಹಿತಾಸಕ್ತರು ಈ ಹಳಿಗಳಿಂದ ಟ್ರೇನಿನ ಜಾಡು ತಪ್ಪಿಸುತ್ತಿದ್ದಾರೆ. ವಿಶ್ವಕಲ್ಯಾಣ ಮಿಷನ್ ಸಂಸ್ಥೆ ಎಂಬ ಕ್ರೇನು ಇದೀಗ ಹಳಿ ತಪ್ಪಿದ ಟ್ರೇನನ್ನು ಸರಿದಾರಿಯಲ್ಲಿ ನಿಲ್ಲಿಸುತ್ತಿವೆ. ತಮ್ಮ ಪ್ರವಚನ, ಸಾಹಿತ್ಯ ಪ್ರಕಟಣೆ ಮುಂತಾದುವುಗಳಿಂದ ಇಂದಿಗೂ ಜನಸಾಮಾನ್ಯರು, ಹಳ್ಳಿಗರು ಕುಳಿತರೂ ನಿಂತರೂ ಬಸವಾ ಎನ್ನುತ್ತಾರೆ. ಜನಜೀವನದಲ್ಲಿ ಬಸವ ಮಂತ್ರ ಹಾಸುಹೊಕ್ಕಾಗಿದೆ. ಆದ್ದರಿಂದ ನಿರ್ದಿಷ್ಟವಾದ ನಂಬಿಕೆ - ತತ್ತ್ವಗಳೊಡನೆ ಬಸವದಳ ಕಾರ್ಯಪ್ರವೃತ್ತವಾಗಬೇಕು. ಮೂಢನಂಬಿಕೆ ತೊಡೆಯುವಲ್ಲಿ ಕಾರ್ಯ ಮಾಡಬೇಕು. ತತ್ತ್ವಗಳನ್ನು ಪ್ರಚಾರ ಮಾಡಲು ಮುಂದಾಗ ಯುವಕರು ಸಾಹಿತ್ಯವನ್ನು ಅಧ್ಯಯನ ಮಾಡಿ, ಬೇಕು" ಎಂದು ಕರೆ ನೀಡಿದರು. ಬಸವದಳದ ಕೋಶಾಧ್ಯಕ್ಷ ಶಾಮಲಿಂಗ ಜವಳಗಿಯವರು ಅಚ್ಚುಕಟ್ಟಾಗಿ ಕಾರ್ಯಕ್ರಮ ನಿರ್ವಹಿಸಿದರು ಮಾತ್ರವಲ್ಲ, ಕಾರ್ಯಕ್ರಮದ ಶರಣು ಸಮರ್ಪಣೆ ಮಾಡಿದರು.

– ವರದಿ : **ಆರ್. ಜಿ. ಶೆಟಗಾರ,**
ಪ್ರಧಾನ ಕಾರ್ಯದರ್ಶಿ

* ಮಗುವಿನ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳನ್ನು ವಿಕಾಸಗೊಳಿಸುವುದೇ ನಿಜವಾದ ಶಿಕ್ಷಣ.
– ಮಹಾತ್ಮಾ ಗಾಂಧೀಜಿ

ಮಾತು ಜ್ಯೋತಿರ್ಲಿಂಗ

ಸಂಗ್ರಹ : **ಕಮಲಾಕ್ಷಿ ಶಂಕರರಾವ್ ದೇಶಮುಖ**

- ಒಂದು ತೊಟ್ಟು ಶಾಹಿಯು ಲಕ್ಷಾಂತರ ಮಂದಿಯಲ್ಲಿ ವಿಚಾರವನ್ನು ಪ್ರಚೋದಿಸಬಲ್ಲದು.

  – ಬೈರನ್ ಷಾ

- ಹೂವಿಗೆ ಸುವಾಸನೆ ಇದ್ದಂತೆ, ಮನುಷ್ಯನಿಗೆ ವ್ಯಕ್ತಿತ್ವ.

  – ಸೈರಸ್

- ಒಳ್ಳೆಯ ಪುಸ್ತಕವನ್ನು ಓದಲೊಲ್ಲದವನಿಗೂ, ಓದಲು ಬಾರದವನಿಗೂ ಏನೂ ವ್ಯತ್ಯಾಸವಿಲ್ಲ.

  – ಬನಾಕೆಡ್ ಷಾ

- ಮನೆಯು ಹುಡುಗಿಯರಿಗೆ ಪಂಜರ. ಹೆಂಗಸರಿಗೆ ಕಾರ್ಖಾನೆ.

  – ಬರ್ನಾಡ್ ಷಾ

- ಶಿವನಿಗಾಗಿ ಮಾಡುವ ಕಾಯಕವು ದೇಹದಿಂದ ಮಾಡುವ ಪ್ರಾರ್ಥನೆ.

  – ಶ್ರೀ ಮಾತೆಯವರು

- ಧ್ಯಾನದಲ್ಲಿ ಮಗ್ನರಾಗಲು ಮನಸ್ಸಿನ ಅಶಾಂತಿ ಅಳಿಯಬೇಕು. ಬುದ್ಧಿ ನಿಸ್ತರಂಗ ಸಮುದ್ರದಂತೆ ಶಾಂತವಾಗಬೇಕು. ಧ್ಯಾನದ ವೈಶಿಷ್ಟ್ಯವೆಂದರೆ ಜ್ಞೇಯ ವಸ್ತುವಿನ ಮೇಲೆ ಜ್ಞಾನದ ಪ್ರಭಾವವನ್ನು ಬೀರುವುದು.

  – ಶ್ರೀ ಅರವಿಂದರು

- ವೀರತ್ವವಿಲ್ಲದ ವಿನಯ ಹೇಡಿತನ. ವಿನಯವಿಲ್ಲದ ವೀರತ್ವ ಕ್ರೂರತನ.

  – ಸದ್ಗುರು ಲಿಂಗಾನಂದ ಸ್ವಾಮಿಗಳು

- ಭಕ್ತಿಯಿಲ್ಲದ ಬೌದ್ಧಿಕತೆ ಮರುಭೂಮಿಯ ಸುಡುಬಿಸಿಲಿನಂತೆ. ಬೌದ್ಧಿಕತೆಯಿಲ್ಲದ ಭಕ್ತಿ ಅಂಧಕಾರಮಯ ಗವಿಯಂತೆ. ತಲೆಯಲ್ಲಿ ಮೆರೆಯುವ ವಿಚಾರ ಭಾನು ಕಿರಣದೊಡನೆ, ಹೃದಯದ ಭಕ್ತಿ ಗಂಗೆಯು ಬೆರೆದಾಗ ಅದು ಸುಂದರ ವ್ಯಕ್ತಿತ್ವ.

  – ಜಗದ್ಗುರು ಮಾತಾಜಿ

- ಬಯಸಿ ಬಂದುದು ಅಂಗ ಭೋಗ, ಬಯಸದೇ ಬಂದುದು ಲಿಂಗಭೋಗ.

  – ಬಸವಣ್ಣ

- ಪಾಪಿಯ ಹಣ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ

  – ಶರಣರ ವಾಣಿ

- ಸಿರಿಯ ಸಂಸಾರವನು ಸ್ಥಿರವೆಂದು ನಂಬದಿರು
  ಹಿರಿದೊಂದು ಸಂತೆ ನೆರೆದೊಂದು ಜಾವಕ್ಕೆ
  ಹರಿದು ಹೋದಂತೆ ಸರ್ವಜ್ಞ ।

'ಮಾತೆಯ ಚರಣಕೆ' ಹೃದಯದ ಕಾಣಿಕೆ

ನಾಡ ಶರಣರ ಪುಣ್ಯ ಮೈಗೂಡಿ ತಾನಿಂದು ।
ಒಡಮೂಡಿ ಬಂದಿಹಳು ಮಾತೆ ರೂಪಾಗಿ ।
ಅಡಿಗಡಿಗೆ ಬಸವನ ವಚನ ಸುಧೆಯ ಹರಿಸಿ, ॥ ಪ ॥
ಭಕ್ತರನು ಪೊರೆವಳು ಸಿರಿಗಂಗೆಯಾಗಿ,

ವಿಶ್ವಕಲ್ಯಾಣದ ವಿಜಯ ಪತಾಕೆಯ ಹಿಡಿದು,
ಬಸವ ಡಂಗೂರವ ನೀ ಭವಕೆ ಸಾರಿ
ಜ್ಞಾನದಾಸೋಹದಿಂದ ಜನಮನವ ತಣಿಸುತ ॥ ೧ ॥
ಶರಣ ಜೀವನದ ನಿಜ ಚಿತ್ರತೋರಿ

ಮೇಲುಕೀಳುಗಳೆಂಬ ವಿಷಲತೆಯ ಕೀಳುತ,
ಸರ್ವ ಸಮನತೆಯ ಅಮೃತ ಫಲ ನೀಡುತ,
ಕಾಲ ಕಾಲಕೆ ಭವ ಹರಿಯಲು ಬಂದಂಥ, ॥ ೨ ॥
ಭಾಗ್ಯದ ತಾಯಿ ನೀ ಜಗನ್ಮಾತೆ

ಶರಣರಂ ನೆನೆ ನೆನೆದು ಸದಾಶಿವೆ ನೀನಾದೆ,
ಮನು ಕುಲಕೆ ಮಾರ್ಗ ತೋರಲೆಂದು ॥
ಪರಮ ದರುಶನದಿಂದ ಪತಿತರಂ ಉದ್ಧರಿಸಿ । ॥ ೩ ॥
ಭುವಿಯ ಸ್ವರ್ಗವನಾಗಿ ನೀ ಮಾಡಲೆಂದು

ನಿನ್ನ ವಾಗ್ವೈಖರಿಗೆ ಅರಳಿ ಹೃದಯಗಳೆನಿತೊ ॥
ಬೇಡ ಬಂದಿಹವು ನಿನ್ನಲ್ಲಿ ಜ್ಞಾನ ಭಿಕ್ಷೆ ॥
ಮಾತೆಯೇ ನೀ ನೀಡು ನಿಜದರಿವು ಎಮ್ಮೊಳು । ॥ ೪ ॥
ಮುಂದಡಿ ಇಡಲು ನೀ ನಮಗೆ ರಕ್ಷೆ

ನಡೆದರೆ ರವಿತೇಜ ನುಡಿದರೆ ಮಾಣಿಕ್ಯ,
ನುಡಿ ನುಡಿಗೆ ಹರ್ಷ ಹೊನಲಾಗಿ ।
ಅಣುರೇಣು ತೃಣಕಾಷ್ಟ ಮೃಡನ ಚೇತನ ಕಂಡು, ॥ ೫ ॥
ಅನುಭವ ಪಡದೆ ನೀ ಅಮರವಾಗಿ

ಬಣ್ಣಿಸಲು ಪದವಿಲ್ಲ ಬಂಜರು ಹೃದಯಿ ನಾ.
ಏನೆಂದು ಉಸುರಲಿ ನಿನ್ನ ಮಹಿಮೆಯನು ।
ಧೀರ ಶಕ್ತಿಯ ನೀಡು ಪರಮಾತೆ ನೀ ಎನಗೆ ।
ನಿನ್ನ ಸ್ತುತಿಪೆನು ನಾ ನಿನ್ನ ದಿವ್ಯ ಒಲುಮೆಗೆ । ॥ ೬ ॥

– **ಜಿ. ಬಿ. ಸಿನ್ನೂರು,** ಗೌಡಗಾಂವ್, ಗುಲಬರ್ಗಾ

ಜೀವನದಲ್ಲಿ ಇಣುಕಿದಾಗ

– ಶ್ರೀ ಶಿವಬಸವ ಮಹಾಸ್ವಾಮಿಗಳು ವಿರಕ್ತಮಠ

ಈ ಪ್ರಪಂಚದಲ್ಲಿ ಮನುಷ್ಯನು ತನ್ನ ಮೂಢ ನಂಬಿಕೆಯಿಂದ ಅನಂತ ದೇವರುಗಳನ್ನು ಪೂಜಿಸುವ ಸ್ವಭಾವದವನಾಗಿದ್ದಾನೆ. ಮೂರ್ತಿ ಪೂಜೆ, ಕಟ್ಟಿಗೆ ಪೂಜೆ, ಕಂಚು ಹಿತ್ತಾಳೆ ಪ್ರತಿಮೆಗಳ ಪೂಜೆ. ಹೀಗೆ ಅನಂತ ದೇವರುಗಳನ್ನು ಕಲ್ಪಿಸಿಕೊಂಡು ಗುರಿ ಮುಟ್ಟದವನಾಗಿದ್ದಾನೆ. ಜೀವನದ ಗುರಿಗೆ ಒಬ್ಬನೇ ದೇವರು ! ಪತಿವ್ರತೆಗೆ ಒಬ್ಬ ಪತಿ. ನಮ್ಮ ಮೋಕ್ಷದ ಗುರಿಗೆ ದೇವನೊಬ್ಬ. ಅಣ್ಣ ಬಸವಣ್ಣನವರು ಹೇಳಿದಂತೆ

"ಮಡಕೆ ದೈವ, ಮರ (ಗಿಡ) ದೈವ, ಬೀದಿಯ ಕಲ್ಲು ದೈವ"
ದೈವ, ದೈವ ಎಂದು ಕಾಲಿಡಲಿಂಬಿಲ್ಲ – ಎನ್ನುವಂತೆ

ಕಣ್ಣಿಗೆ ಕಂಡಷ್ಟು, ಅರಿಯಲು ಬಾರದಷ್ಟು ದೇವರುಗಳಾಗಿ ಕಾಣುವವು. ಇವು ದೇವರುಗಳೆ ? ಇವುಗಳನ್ನು ಪೂಜಿಸಿದರೆ ಗುರಿಮುಟ್ಟಿದಂತಾಯಿತೆ ? ಇಂತಹ ದೇವರುಗಳನ್ನು ಪೂಜಿಸಿದರೆ "ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತೆ" ಆಗುವುದು. ಹಿಂದಿಯಲ್ಲಿ "ಧೋಬಿಕಾ ಕುತ್ತಾ ನ ಘರಕಾ ನ ಘಾಟಕಾ" ಎನ್ನುವಂತೆ ಯಾವ ಪ್ರಯೋಜನವಿಲ್ಲ.

ನಾವು ಕಾಶಿಯಲ್ಲಿ ಅಧ್ಯಯನಕ್ಕೆಂದು ಇದ್ದಾಗ್ಗೆ ನಡೆದ ಘಟನೆ. ಮಹಾಶಿವರಾತ್ರಿಯಂದು ನಾವು ಕೆಲವು ಮಿತ್ರರು ಕೂಡಿ ಕಾಶಿ ವಿಶ್ವನಾಥನ ದರ್ಶನ ತೆಗೆದುಕೊಂಡು ಸಂನ್ಯಾಸಿ ಕಾಲೇಜಿಗೆ ಹೋದೆವು. ಅಲ್ಲಿ ಗುರುಗಳು ಪಾಠ ಹೇಳುತ್ತ ಎಲ್ಲಿ ಹೋಗಿದ್ದಿರೆಂದು ನಮ್ಮೆಲ್ಲರನ್ನು ವಿಚಾರಿಸಿದರು. ನಾವು ವಾಸ್ತವ ಸಂಗತಿ ಅಂದರೆ ದೇವರ ದರ್ಶನಕ್ಕೆ ಹೋದುದು ಹೇಳಿದೆವು. "ವಿಶ್ವನಾಥ ದರ್ಶನ ಪಡೆದಿರುವಿರಾ ?" ಎಂದು ಅವರಂದರು. ಕೂಡಲೆ ಉತ್ತರ ಕೊಟ್ಟೆವು, "ದರ್ಶನವಾಯಿತು." ನಂತರ ಗುರುಗಳು ಅಂದರು. "ಅಬ್ಬಾ !" ಹಾಗಾದರೆ "ನೀವು ಧನ್ಯರು" ಯಾಕೆಂದರೆ ನಾನು ಚಿಕ್ಕಂದಿನಿಂದ ಹಿಡಿದು ಕೊಂಡು ಇಲ್ಲಿಯ (ಮುಪ್ಪಿನ) ವರೆಗೆ ಹಗಲಿರುಳು ಭಗವಂತನನ್ನು ಸ್ಮರಿಸಿದರೂ ಭಗವಂತನ ದರ್ಶನವಿಲ್ಲ. ನೀವು ಚಿಕ್ಕವರಿದ್ದಾಗಲೇ ಭಗವಂತನ ದರ್ಶನವಾಯಿತಲ್ಲ" ಎಂದು. ಆಗ ನಾವು ಮರುಪ್ರಶ್ನೆಯಲ್ಲಿಯೇ ಕೇಳಿದೆವು. ಏನು ಗುರುಗಳೆ, ಇಲ್ಲಿಯೇ ಇದ್ದು ವಿಶ್ವನಾಥನ ದರ್ಶನವಾಗಲಿಲ್ಲವೆ ? "ಅದು ವಿಶ್ವನಾಥನಲ್ಲ, ಅದು ಕಲ್ಲಿನ ಮೂರ್ತಿ. ಅದನ್ನು ನೋಡಿದರೆ ವಿಶ್ವನಾಥನ ದರ್ಶನವಾಗಲಿಲ್ಲ. ನಿಜವಾದ ಭಗವಂತನ ದರ್ಶನ – ಎಲ್ಲ ಸತ್ಕರ್ಮಗಳನ್ನು ದಾಟಿ, ದುಷ್ಕರ್ಮಗಳನ್ನು ಬಿಟ್ಟು "ಆತ್ಮವತ್ ಸರ್ವ ಭೂತೇಷು" ಅಂತಾ ಎಲ್ಲ ಸಚರಾಚರದಲ್ಲಿ ದಯಾ ಭಾವವಿಟ್ಟು ತನ್ನ ನಿಜ ಸ್ವರೂಪ ತಿಳಿಯುವುದೇ ದೇವ ದರ್ಶನ" ಅಂತಾ ಹೇಳಿದಾಗ ನಾವು ಅಚ್ಚರಿಗೊಂಡೆವು.

* ನಿನ್ನ ಸುದೈವವನ್ನು ಶ್ರೀಮಂತಿಕೆ ಎಂಬ ಮಾನದಂಡದಿಂದ ಅಳೆಯಬೇಡ. ಉತ್ತಮವಾದ ಮನುಷ್ಯತ್ವದ ಪ್ರಜ್ಞೆಯೊಂದೇ ನಿನ್ನ ಸುದೈವದ ಮಾನದಂಡವಾಗಿದೆ.

– ನೀತಿ ಮಂಜರಿ

‘ಧರ್ಮಸೂಕ್ಷ್ಮ’ ಲೇಖಕರಿಗೆ ಶುಭ ಹಾರೈಕೆಗಳು

ಶ್ರೀಯುತರಾದ ಎನ್. ಜಿ. ಜಾಡಗೌಡರ (ನೀಲಕಂಠ) ಇವರು ಬರೆದ ಧರ್ಮಸೂಕ್ಷ್ಮ ಲೇಖನವನ್ನು ನಾವು ಇದುವರೆಗೂ ಧಾರಾವಾಹಿಯಾಗಿ ಪ್ರಕಟಿಸಿದ್ದೇವೆ. ಇಂಥ ಲೇಖನಗಳು ಈಗಿನ ಕಾಲಕ್ಕೆ ತುಂಬಾ ಉಪಯುಕ್ತವಾಗಿವೆ. ಪರಂಪರೆಯಿಂದ ಬಂದ ಧರ್ಮವನ್ನು, ತತ್ವ, ಸಂಪ್ರದಾಯಗಳನ್ನು ಚೆನ್ನಾಗಿ ಅಧ್ಯಯನ ಮಾಡಿ, ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ತಿಳಿದು, ಬೇಕಾದುದನ್ನು ಸ್ವೀಕರಿಸಿ ಬೇಡವಾದುದನ್ನು ಬಿಸಾಕಿ, ಧರ್ಮಸೂಕ್ಷ್ಮವನ್ನು ಕಂಡುಹಿಡಿದು ಒಂದು ಚಿಕ್ಕ ಗ್ರಂಥವಾಗುವಷ್ಟು ವಿಷಯ ಸಂಗ್ರಹಿಸಿ ಬರೆದಿದ್ದಾರೆ. ಆಧುನಿಕ ಯುಗಕ್ಕೆ ಬೇಕಾದುದು ಸಂಪ್ರದಾಯದ ಮೇಲೆ ಅಥವಾ ವ್ಯಕ್ತಿ ಪೂಜೆಯ ಮೇಲೆ ನಿಂತ ಧರ್ಮವಲ್ಲ. ತತ್ವದ ಮೇಲೆ, ವೈಚಾರಿಕ ನೆಲೆಗಟ್ಟಿನ ಮೇಲೆ ನಿಂತ ಧರ್ಮ ಬೇಕಾಗಿದೆ. ಇದೇ ಧೋರಣೆಯನ್ನಿಟ್ಟುಕೊಂಡ ಶ್ರೀಯುತ ಜಾಡಗೌಡರವರು ತಮ್ಮ ವೈಚಾರಿಕ ಹಿನ್ನೆಲೆಯಲ್ಲಿ ಅನುಭವದ ವಿಸ್ತಾರದ ಪರಿಧಿಯೊಳಗೆ ಚೆನ್ನಾಗಿ ಯೋಚಿಸಿ ಚಿಂತನ – ಮಂಥನ ನಡೆಸಿದ್ದಾರೆ. ಕೊನೆಗೆ ಪಕ್ವವಾಗಿ ಬಂದ ಅನುಭವವನ್ನು “ಧರ್ಮ ಸೂಕ್ಷ್ಮ” ಎಂಬ ಹೆಸರಿನಲ್ಲಿ ಲೇಖನಗಳನ್ನು ಬರೆದಿದ್ದಾರೆ.

ಹಿಂದಿನ ವಿಚಾರಗಳನ್ನು ಮತ್ತು ಇಂದಿನ ವಿಚಾರಗಳನ್ನು ಎರಡೂ ಮುಂದಿಟ್ಟುಕೊಂಡು ನೋಡಿದ್ದಾರೆ. ಹಳೆಯದೆಲ್ಲ ಒಳ್ಳೆಯದು (old is gold) ಎಂದು ಎಲ್ಲವನ್ನು ಸ್ವೀಕರಿಸಿಲ್ಲ. ಹೊಸದೆಲ್ಲ ಕೆಟ್ಟದ್ದು ಎಂದು ತಿರಸ್ಕರಿಸಿಲ್ಲ. ಹಳೆತು ಹೊಸತುಗಳ ಸಮ್ಮಿಲನದಿಂದ ನವ್ಯವಾದೊಂದು ಧರ್ಮಗ್ರಂಥವೊಂದನ್ನು ರಚನೆ ಮಾಡುವ ಸಾಹಸ ಮಾಡಿದ್ದಾರೆ. ಈ ಲೇಖನಗಳನ್ನು ಒಂದು ಸಂಕಲಿತ ಗ್ರಂಥರೂಪದಲ್ಲಿ ಮುದ್ರಿಸಿದರೆ, ಹೊಸ ಯುಗಕ್ಕೆ, ೨೦ ನೆಯ ಶತಮಾನದ ಜನತೆಗೆ ಒಂದು “ಧರ್ಮ ಗ್ರಂಥ” ನೀಡಿದ ಗೌರವ ಶ್ರೀ ಗೌಡರಿಗೆ ಸಲ್ಲುತ್ತದೆ. ನಾವು ಅದನ್ನು ಧಾರಾವಾಹಿಯಾಗಿ ೬ ಭಾಗಗಳಲ್ಲಿ ಮುದ್ರಿಸಿದ್ದೇವೆಂದು ತಿಳಿಸಲು ಹರ್ಷಿಸುತ್ತೇವೆ. ನಮ್ಮ ಓದುಗರು ಲೇಖನಗಳನ್ನು ಓದಿ ಅನೇಕ ರೀತಿಯಿಂದ ತಮ್ಮ ಸಂತೋಷ ವ್ಯಕ್ತಪಡಿಸಿ ಪತ್ರಗಳನ್ನು ಬರೆದಿದ್ದಾರೆ. ಶ್ರೀಯುತ ಗೌಡರವರು “ಕಲ್ಯಾಣ ಕಿರಣ” ಕ್ಕೆ ಧಾರಾವಾಹಿಯಾಗಿ ಮುದ್ರಿಸಲು ಕೊಟ್ಟದ್ದಕ್ಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

– ಸಂಪಾದಕರು

❖ “ಸ್ವಧರ್ಮಕ್ಕಾಗಿ ನಮ್ಮ ಪ್ರಾಣವನ್ನಾದರೂ ಅರ್ಪಿಸುವುದು ಶ್ರೇಯಸ್ಕರ.”

ಸುಭಾಷಿತ–

❖ “ಸಪ್ತಸಾಗರಗಳನ್ನೇ ಮಸಿಯನ್ನಾಗಿ ಮಾಡಿಕೊಂಡು, ಸಮಸ್ತ ಭೂಭಾಗವನ್ನೇ ಕಾಗದವನ್ನಾಗಿಸಿಕೊಂಡು, ಸಮಸ್ತ ವೃಕ್ಷ ಸಂಪತ್ತನ್ನೇ ಲೇಖಣಿಯನ್ನಾಗಿಸಿಕೊಂಡು ಬರೆದರೂ ಗುರುವಿನ ಮಹಿಮೆಯನ್ನು ಬರೆಯಲು ಅಸಾಧ್ಯ.”

– ಸಂತ ಕಬೀರದಾಸರು

❖ “ಮಕ್ಕಳ ಶೀಲಗಳನ್ನು ತಿದ್ದುವುದೇ ಶಿಕ್ಷಣದ ಗುರಿ.”

– ರೇಮಂಟ್

ಗುಲಬರ್ಗಾದಲ್ಲಿ
ಬಸವ ದಳದ ಉದ್ಘಾಟನಾ ಸಮಾರಂಭ



ರವಿವಾರ ದಿನಾಂಕ 12–1–1985 ರಂದು ಸುಪ್ರಭಾತದಲ್ಲಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳಿಂದ ಷಟ್ಸ್ಥಲ ಧ್ವಜಾರೋಹಣ

Reg. No. KRNB 312
Licenced to post without pre-payment No. BGW-92

ಕಲ್ಯಾಣ ಕಿರಣ ಮಾಸಪತ್ರಿಕೆ

ದರದಲ್ಲಿ ಹೆಚ್ಚಳ

ಸಹೃದಯರಾದ ಓದುಗರಲ್ಲಿ ವಿಜ್ಞಾಪನೆಗಳು :

ತಾವು ಕಲ್ಯಾಣ ಕಿರಣ ಮಾಸಪತ್ರಿಕೆಯ ಅಭಿಮಾನಿಗಳಿದ್ದೀರಿ. 1970ರಲ್ಲಿ ಆರಂಭವಾದ ಈ ಪತ್ರಿಕೆ ಮೊದಲು ಧಾರವಾಡದಿಂದ ಹೊರಡುತ್ತಿದ್ದು ನಂತರ ಬೆಂಗಳೂರಿನ ಸಮ್ಮ ವಿಶ್ವಕಲ್ಯಾಣ ಮಿಷನ್ ಸಂಸ್ಥೆಗೆ ವರ್ಗಾಯಿಸಲ್ಪಟ್ಟಿದೆ. ಮಧ್ಯಂತರದಲ್ಲಿ ಒಂದು ವರ್ಷಕಾಲ ಸ್ಥಗಿತಗೊಂಡುದನ್ನು ಬಿಟ್ಟರೆ ನಿರಂತರವಾಗಿ ಹೊರಡುತ್ತಿದೆ. ಜ್ಞಾನದಾಸೋಹದ ಪ್ರಮುಖ ಮಾಧ್ಯಮವಾಗಿ ಅಪಾರ ಜಾಗೃತಿ ಮಾಡಿದೆ. ಸ್ವತಂತ್ರವಾದ ಮುದ್ರಣಾಲಯವನ್ನು ಹೊಂದಿ ಈಗ ಕಾರ್ಯಾರಂಭ ಮಾಡಿದೆ. ಧಾರ್ಮಿಕ ಪತ್ರಿಕೆಗಳಿಗೆ ಸಾರ್ವಜನಿಕ ಜಾಹಿರಾತುಗಳು ಲಭ್ಯವಾಗುವುದು ಕಷ್ಟಸಾಧ್ಯ. ಪೇಪರಿನ ಬೆಲೆ ಪುನಃ ಏರಿದೆ. ಮಸಿ, ಕೆಲಸಗಾರರ ಸಂಬಳ ಎಲ್ಲ ಗಮನಿಸಿದಾಗ ಪತ್ರಿಕೆಯ ಬೆಲೆ ಏರಿಸದೆ ಅನ್ಯ ಮಾರ್ಗವಿಲ್ಲವಾಗಿದೆ. ಆದ್ದರಿಂದ ಮಾರ್ಚಿ ಸಂಚಿಕೆಯಿಂದ ಈ ಕೆಳಕಂಡಂತೆ ದರಗಳು ಇರುತ್ತವೆ.

ಬಿಡಿ ಸಂಚಿಕೆ	—	೨ ರೂಪಾಯಿ
ವಾರ್ಷಿಕ ಚಂದಾ	—	೨೦ ರೂಪಾಯಿ
ಆಜೀವ ಸದಸ್ಯತ್ವ	—	೨೦೦ ರೂಪಾಯಿ

1/8 th ಡೆಮ್ಮಿ ಆಕಾರದ ೬೪ ಪುಟದ ಪುಸ್ತಕದ ಬೆಲೆ ಸಾಮಾನ್ಯವಾಗಿ ಇನ್ನೂ ಹೆಚ್ಚು ಇರುವುದೆಂಬುದನ್ನು ಓದುಗರು ಗಮನಿಸಬೇಕು. ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸಹಕರಿಸುವಿರಾಗಿ ನಂಬುತ್ತೇವೆ.

ಬಿ. ಶಂಭುಲಿಂಗಯ್ಯ
ಸಂಪಾದಕರು, ಕಲ್ಯಾಣ ಕಿರಣ ಮಾಸಪತ್ರಿಕೆ
ದೂರವಾಣಿ : 34
"ಬಸವ ಗಂಗೋತ್ರಿ"
ಪೋಸ್ಟ್ : ಕುಂಬಳಗೋಡು – 560074
ತಾ : ಬೆಂಗಳೂರು ದಕ್ಷಿಣ, ಜಿ : ಬೆಂಗಳೂರು

KALYANA KIRANA OFFICE
"Basava Gangothri", Kumbalgod – 560 074
Bangalore–Mysore Highway (21 k.m.)
Bangalore South Taluk, Bangalore District.